## ಅಧ್ಯಾಯ –೨
## ಇತಿಹಾಸ

ಭೌಗೋಳಿಕವಾಗಿ ಸಮತಟ್ಟಾದ ಪ್ರದೇಶವನ್ನುಳ್ಳ ಮೈಸೂರು ತಾಲೂಕು ಶುಷ್ಕ ವಾತಾವರಣದಿಂದ ಕೂಡಿದ ಬಯಲು ಪ್ರದೇಶವಾದರೂ ಚಾಮುಂಡಿಬೆಟ್ಟ, ವರಕೋಡು ಮುಂತಾದ ಬೆಟ್ಟಗಳಿವೆ. ತಾಲೂಕಿನಲ್ಲಿ ಯಾವ ನದಿಯೂ ಹರಿಯುವುದಿಲ್ಲವಾದರೂ, ತಾಲೂಕಿನ ಉತ್ತರದಲ್ಲಿ ಮಂಡ್ಯಜಿಲ್ಲೆಗೆ ಸೇರಿದಂತೆ ಕಾವೇರಿ ನದಿಯೂ ದಕ್ಷಿಣದಲ್ಲಿ ನಂಜನಗೂಡು ತಾಲೂಕಿನಲ್ಲಿ ಕಪಿಲಾ ನದಿಯೂ ಹರಿಯುತ್ತವೆ. ತಾಲೂಕಿನ ವಾಯವ್ಯದಂಚಿನಲ್ಲಿ ಕೃಷ್ಣರಾಜಸಾಗರದ ಹಿನ್ನೀರು ಹಬ್ಬಿದೆ.

ಈ ಪ್ರದೇಶವು ಪ್ರಾಚೀನ ಕಾಲದಿಂದಲೂ ಮಾನವ ನಾಗರಿಕತೆಯ ವಿಕಾಸಕ್ಕೆ ಪೂರಕವಾಗಿತ್ತು. ಇಲ್ಲಿನ ಫಲವತ್ತಾದ ಭೂಮಿ, ಬೆಟ್ಟಗುಡ್ಡ ಪ್ರದೇಶ, ಬಯಲು ಪ್ರದೇಶ, ಅರಣ್ಯ, ಪ್ರಾಣಿಸಂಪತ್ತು, ವಾಸಿಸಲು ಯೋಗ್ಯವಾದ ನೈಸರ್ಗಿಕ ಗುಹೆಗಳು, ಶಿಲಾಯುಧಗಳನ್ನು ತಯಾರು ಮಾಡಲು ಅವಶ್ಯಕವಾದ ಕಲ್ಲುಗಳೇ ಮುಂತಾದ ಸ್ವಾಭಾವಿಕ ಸಂಪತ್ತುಗಳಿಂದ ಕೂಡಿದ ಪ್ರದೇಶವಾಗಿ ಮಾನವ ವಿಕಾಸದ ಸರಣಿಯಲ್ಲಿ ಪ್ರಭಾವ ಬೀರಿವೆ. ಮೈಸೂರು ಪ್ರಾಂತದಲ್ಲಿ ಪ್ರಾಚೀನ ಶಿಲಾಯುಗದ ಅವಶೇಷಗಳನ್ನು ಪತ್ತೆ ಹಚ್ಚುವಲ್ಲಿ ಪುರಾತತ್ವ ತಜ್ಞರಾದ ರಾಬರ್ಟ್ ಬ್ರೂಸ್ ಫೂಟ್ ಹಾಗೂ ಡಾ. ಎಂ. ಶೇಷಾದ್ರಿಯವರು ಮಹತ್ವದ ಪಾತ್ರವಹಿಸಿದ್ದಾರೆ. ಈ ತಾಲೂಕಿನಲ್ಲಿ ದೊರೆತಿರುವ ಇತಿಹಾಸ ಪೂರ್ವಕಾಲದ ನೆಲೆಗಳು ವಿರಳವಾದರೂ  ಹಳೆ ಶಿಲಾಯುಗದ ನಿವೇಶನಗಳಲ್ಲಿ ಮೈಸೂರುನಗರ (ಕಾವೇರಿಕೊಳ್ಳ)ವೂ ಒಂದು (ಶಿವರುದ್ರಪ್ಪ, ೧೯೯೦). ತಾಮ್ರಯುಗದ ನಾಗರೀಕತೆಯಲ್ಲಿ ಮೈಸೂರು ತಾಲೂಕಿನ ಸೋಮನಹಳ್ಳಿ ಹಾಗೂ ವರಕೋಡು ಬೆಟ್ಟಗಳು ಮುಖ್ಯವಾಗಿವೆ. ನವಶಿಲಾಯುಗ (ಆಯರಹಳ್ಳಿ) ಹಾಗೂ ಕಬ್ಬಿಣಯುಗ (ಆಯರಹಳ್ಳಿ ಲಕ್ಷ್ಮೀಪುರ ಹಾಗೂ ಮೈಸೂರು ನಗರ) ಸಂಸ್ಕೃತಿಗಳಿಗೆ ಸೇರಿದ ಕುರುಹುಗಳು ಈ ತಾಲೂಕಿನಲ್ಲಿವೆ. ಇದರಿಂದ ಮೈಸೂರು ತಾಲೂಕು ಸಾವಿರಾರು ವರ್ಷಗಳಿಂದಲೂ ಮಾನವನ ವಸತಿ ಕೇಂದ್ರವಾಗಿತ್ತೆಂಬುದು ಸ್ಪಷ್ಟವಾಗುತ್ತದೆ. ಪ್ರಸಿದ್ಧ ಪೌರಾಣಿಕ ಕೇಂದ್ರಗಳೂ ಸಹ ತಾಲೂಕಿನಲ್ಲಿವೆ. ಮಹಾಮುನಿಗಳ ತಪೋಭೂಮಿಯಾಗಿತ್ತೆಂದೂ, ರಾಮಾಯಣ, ಮಹಾಭಾರತದ ಪೌರಾಣಿಕ ವ್ಯಕ್ತಿಗಳೂ ತಾಲೂಕಿನ ಕೆಲವು ಪ್ರದೇಶಗಳಲ್ಲಿ ಕೆಲವು ಕಾಲ ಸಂಚರಿಸಿ ತಂಗಿದ್ದರೆಂದೂ ನಂಬಿಕೆ ಇದೆ.

**ಪೌರಾಣಿಕ ಹಿನ್ನೆಲೆ :** ‘ಮೈಸೂರು’ ಎಂಬ ಹೆಸರು ಪ್ರಾಚೀನ ಕಾಲದಿಂದಲೂ ಪ್ರಸಿದ್ಧ. ಈ ಹೆಸರನ್ನು ಕುರಿತು ಅನೇಕ ಕತೆ, ಪುರಾಣ, ಹಾಡುಗಳು ಪ್ರಚಲಿತವಿದೆ. ಮಹಿಷಾಸುರನೆಂಬ ರಾಕ್ಷಸ ಬ್ರಹ್ಮನನ್ನು ಕುರಿತು ತಪ್ಪಸ್ಸು ಮಾಡಿ ಹೆಣ್ಣಿನಿಂದ ಮಾತ್ರ ತನಗೆ ಸಾವೆಂಬ ವರ ಪಡೆದು ಮಹಿಷಮಂಡಲವನ್ನಾಳುತ್ತಿದ್ದ. ಅವನ ಉಪಟಳವನ್ನು ಸಹಿಸಲಾಗದ ದೇವತೆಗಳು ತಮ್ಮೆಲ್ಲ ಶಕ್ತಿಯನ್ನು ನೀಡಿ ಚಾಮುಂಡೇಶ್ವರಿ ಮೂಲಕ ಅವನನ್ನು ಸಂಹರಿಸಿದರೆಂದು ಹೇಳಲಾಗುತ್ತದೆ. ಮಹಿಷಮರ್ಧಿನಿ, ಮೈಸೂರು ಅರಸರ ಮನೆದೇವರಾಗಿ ಇಂದಿಗೂ ಪೂಜೆಗೊಳ್ಳುತ್ತಿದ್ದಾಳೆ. ಮಹಿಷಮಂಡಲ, ಮಹಿಷಪುರಿ, ಮಹಿಶೂರು ಈಗಿನ ಮೈಸೂರಾಗಿದೆ. ಶಿಷ್ಟ ಪುರಾಣದ ಪ್ರಕಾರ ಅಷ್ಟದಳಯುಕ್ತ ಕಮಲದಂತಿರುವ ತ್ರಿಮುಕುಟಕ್ಷೇತ್ರದ ಪಶ್ಚಿಮ ದಳವೇ ಮಹಾಬಲಗಿರಿ ಅಥವಾ ಚಾಮುಂಡಿಬೆಟ್ಟ (ಚಾಮುಂಡೇಶ್ವರಿ ಬೆಟ್ಟದ ಮಹಾತ್ಮೆ, ೧೯೧೩).

ಮೈಸೂರು ನಗರದ ಅಸ್ತಿತ್ವ ಹಾಗೂ ಅದರ ಇತಿಹಾಸ ಕುರಿತು ಹೇಳುವುದಾದರೆ ಅಶೋಕನು ‘ಮಹಿಷಮಂಡಲ’ಕ್ಕೆ ಧರ್ಮಬೋಧಕರನ್ನು ಕಳುಹಿಸಿದ್ದನು. ಈ ಮಹಿಷಮಂಡಲ ಮೈಸೂರಿನ ಸುತ್ತಮುತ್ತಲ ಪ್ರಾಂತವಾಗಿತ್ತು. ಈ ಭಾಗವನ್ನು ಪ್ರಾಚೀನ ತಮಿಳು ಸಾಹಿತ್ಯದಲ್ಲಿ ‘ಎರುಮೈವಾಡು’ ಎಂದು ಉಲ್ಲೇಖಿಸಲಾಗಿದೆ. ಆದ್ದರಿಂದ ಕ್ರಿಸ್ತಪೂರ್ವದಿಂದಲೂ ಮೈಸೂರಿನ ಪ್ರಾಚೀನತೆಯನ್ನು ಗುರುತಿಸಬಹುದು. ಶಾಸನಗಳಲ್ಲಿ ಮೈಸೂರನ್ನು ‘ಮಝಿಊರು’, ‘ಮಹಿಷಪುರ’, ‘ಮಹಿಷೂರಪುರ’, ‘ಮಹಿಷಾಸುರಪುರ’ ಎಂದು ಉಲ್ಲೇಖಿಸಿರುವುದು ಕಂಡುಬರುತ್ತದೆ. ಮೈಸುನಾಡು – ೭೦ ಅಸ್ತಿತ್ವದಲ್ಲಿತ್ತೆಂಬುದಕ್ಕೂ ಶಾಸನಾಧಾರವಿದೆ. ನಂದಿಗುಂದ ಗ್ರಾಮ ಮೈಸುನಾಡು ೭೦ಕ್ಕೆ – ಸೇರಿತ್ತು (ನಂಜನಗೂಡು ಶಾಸನ, ೧೦೨೧). ಈ ಮೈಸುನಾಡು – ೭೦ ಎಂಬ ೭೦ ಗ್ರಾಮಗಳ ಪ್ರಾಂತಕ್ಕೆ ಮೈಸೂರು ಕೇಂದ್ರವಾಗಿದ್ದಿರಬೇಕೆಂದೂ (ರಾಜಧಾನಿ) ಅಭಿಪ್ರಾಯಪಡಲಾಗಿದೆ. ೧೪೯೯ ಮತ್ತು ಆನಂತರದ ಶಾಸನಗಳಲ್ಲಿ ‘ಮೈಸೂರು’ ಎಂಬ ಹೆಸರು ಸ್ಪಷ್ಟವಾಗಿ ಉಲ್ಲೇಖಗೊಂಡಿರುವುದು ಕಾಣಸಿಗುತ್ತದೆ.

**ಮೌರ್ಯರು :** ಕರ್ನಾಟಕದಲ್ಲಿ ಇತಿಹಾಸಯುಗ ಆರಂಭವಾಗುವುದು ಸದ್ಯದ ಮಟ್ಟಿಗೆ ಕ್ರಿ.ಪೂ. ನಾಲ್ಕನೇಯ ಶತಮಾನದಿಂದ. ಉತ್ತರ ಭಾರತದಲ್ಲಿ ಆಳುತ್ತಿದ್ದ ಮೌರ್ಯರು ಕರ್ನಾಟಕದ ಉತ್ತರ ಭಾಗಕ್ಕೆ ರಾಜ್ಯವನ್ನು ವಿಸ್ತರಿಸಿದ್ದರೆಂಬುದಕ್ಕೆ ಸಾಕ್ಷ್ಯಾಧಾರಗಳಿವೆ. ಮೌರ್ಯವಂಶದ ಸ್ಥಾಪಕ ಹಾಗೂ ಅಶೋಕನ ತಾತನೂ ಆದ ಚಂದ್ರಗುಪ್ತಮೌರ್ಯನು ಜೈನಧರ್ಮವನ್ನು ಸ್ವೀಕರಿಸಿ ತನ್ನ ಅಂತಿಮ ದಿನಗಳನ್ನು ಜೈನಕ್ಷೇತ್ರ ಶ್ರವಣಬೆಳಗೊಳದಲ್ಲಿ ಕಳೆದನೆಂಬುದಕ್ಕೆ ಶಾಸನಾಧಾರವಿದೆ. ಆದರೆ ಇವನು ಅಶೋಕನ ಮೊಮ್ಮಗನಾದ ಸಂಪ್ರತಿ ಚಂದ್ರಗುಪ್ತನೆಂಬ ಅಭಿಪ್ರಾಯವೂ ಇದೆ. ಕರ್ನಾಟಕದ ಈ ಭಾಗ ಮೌರ್ಯ ಸಾಮ್ರಾಜ್ಯದ ಭಾಗವಾಗಿದ್ದುದರಿಂದಲೇ ಅವರು ಇಲ್ಲಿಗೆ ಬರಲು ಸಾಧ್ಯವಾಯಿತೆಂಬ ಅಭಿಪ್ರಾಯವಿದೆ.

ಕ್ರಿ.ಪೂ. ೨೭೩ ರಲ್ಲಿ ಸಿಂಹಾಸನವನ್ನೇರಿದ ಅಶೋಕ, ಬೌದ್ಧ ಧರ್ಮದ ಪ್ರಚಾರಕ್ಕೋಸ್ಕರ ಭಾರತದ ಬೇರೆ ಬೇರೆ ಭಾಗಗಳಿಗೆ ಕಳಿಸಿದ ಬೌದ್ಧ ಭಿಕ್ಷುಗಳ ಹೆಸರುಗಳನ್ನು ಶ್ರೀಲಂಕಾ ದೇಶದ 'ಮಹಾವಂಶ' ಗ್ರಂಥದಲ್ಲಿ ಉಲ್ಲೇಖಿಸಲಾಗಿದ್ದು, ಅದರಂತೆ ಥೇರ ಮಹಾದೇವ ಮಹಿಷಮಂಡಲಕ್ಕೂ ಥೇರ ರಖ್ಖಿತ ವನವಾಸಕ್ಕೂ (ಬನವಾಸಿ) ಭೇಟಿ ಕೊಟ್ಟಿದ್ದರೆಂದು ಹೇಳಲಾಗುತ್ತದೆ. ಮಹಿಷಮಂಡಲದಲ್ಲಿ ಮಹಾದೇವನು ಬೌದ್ಧಧರ್ಮ ಬೋಧಿಸಿ, ೪೦,೦೦೦ ಜನರಿಗೆ ದೀಕ್ಷೆ ಕೊಟ್ಟನೆಂದು ಮಹಾವಂಶದಲ್ಲಿ ಉಲ್ಲೇಖಿಸಲಾಗಿದೆ. ಈ ಮಾಹಿತಿಯಲ್ಲಿ ತುಸು ಅತಿಶಯೋಕ್ತಿ ಇದ್ದರೂ ಸ್ವಲ್ಪ ಮಟ್ಟಿಗಾದರೂ ನಿಜಾಂಶವಿದೆ ಎನ್ನಬಹುದು. ಆದರೆ ಮೌರ್ಯ, ಶಾತವಾಹನ ಹಾಗೂ ಕದಂಬ ಕಾಲಕ್ಕೆ ಸಂಬಂಧಿಸಿದ ಯಾವ ಶಾಸನವೂ ಮೈಸೂರು ತಾಲೂಕಿನಲ್ಲಿ ದೊರೆತಿಲ್ಲ.

**ಗಂಗರು :** ಕರ್ನಾಟಕದ ದಕ್ಷಿಣ ಭಾಗದಲ್ಲಿ ನಾಲ್ಕನೆಯ ಶತಮಾನದ ಮಧ್ಯಭಾಗದಿಂದ ೧೦ನೆಯ ಶತಮಾನದ ಅಂತ್ಯದವರೆಗೆ ಆಳಿದ ತಲಕಾಡಿನ ಗಂಗರು, ಪಶ್ಚಿಮ ಗಂಗರೆಂದೂ ಪ್ರಸಿದ್ಧರಾಗಿದ್ದಾರೆ. ಇವರ ಶಾಸನಗಳು ಕೊಡಗು ಜಿಲ್ಲೆಯಿಂದ ಉತ್ತರ ಆರ್ಕಾಟ್ ಜಿಲ್ಲೆಯವರಿಗೂ, ಬಳ್ಳಾರಿ ಜಿಲ್ಲೆಯಿಂದ ತಮಿಳುನಾಡಿನ ಸೇಲಂ-ಕೊಯಮತ್ತೂರು ಜಿಲ್ಲೆಗಳವರೆಗೂ ದೊರೆತಿವೆ. ಇವರ ರಾಜ್ಯವನ್ನು ಗಂಗವಾಡಿ – ೯೬,೦೦೦ ಎಂದು ಶಾಸನಗಳಲ್ಲಿ ಕರೆಯಲಾಗಿದೆ. ಪ್ರಜಾನುರಾಗಿಗಳು, ರಾಜನೀತಿಕುಶಲರೂ ಆಗಿದ್ದ ಗಂಗರಸರು ದಕ್ಷಿಣರಾಜ್ಯ ಸಂರಕ್ಷಣಾ ಸಮರ್ಥ, ಕೊಂಗುಣಿವರ್ಮ, ಧರ್ಮಮಹಾರಾಜಾಧಿರಾಜ, ಶ್ರೀವಲ್ಲಭ, ಪೆರ್ಮಾನಡಿ ಮುಂತಾದ ಬಿರುದುಗಳನ್ನು ಧರಿಸಿದ್ದರು. ಮೈಸೂರು ಜಿಲ್ಲೆಯ ತಲಕಾಡು ಇವರ ರಾಜಧಾನಿ. ಕುವಳಾಲ (ಕೋಲಾರ), ನಂದಗಿರಿ (ನಂದಿಬೆಟ್ಟ) ಸಹ ಮೊದಲು ಇವರ ರಾಜಧಾನಿಗಳಾಗಿದ್ದವು. ಈ ವಂಶದ ಮೂರನೆಯ ರಾಜನಾದ ಹರಿವರ್ಮನ ಒಂದು ಶಾಸನ 'ತಲಕಾಡು' ಅವರ ರಾಜಧಾನಿಯಾಗಿತ್ತೆಂದು ಅಧಿಕೃತವಾಗಿ ತಿಳಿಸುತ್ತದೆ. ಸ್ಥಳ ಪುರಾಣಗಳ ಪ್ರಕಾರ ತಲಕಾಡು ಆ ಕಾಲದಲ್ಲಿ ಅಭಯಾರಣ್ಯವಾಗಿದ್ದು, ಗಜಾರಣ್ಯವೆಂದು ಪ್ರಸಿದ್ಧವಾಗಿತ್ತು. ಮದಗಜ ಗಂಗಲಾಂಛನವಾಗಲು ಈ ಸಂಗತಿಯೇ ಕಾರಣವಿರಬೇಕು. ಈ ವಂಶದ ಮೂಲ ಪುರುಷರು ಕೋಲಾರ, ಬೆಂಗಳೂರು, ಮಂಡ್ಯ, ಮೈಸೂರು ಪ್ರದೇಶದಲ್ಲಿ ಇಂದಿಗೂ ವ್ಯವಸಾಯವನ್ನವಲಂಬಿಸಿ ಕನ್ನಡವನ್ನೇ ಮಾತೃಭಾಷೆಯಾಗುಳ್ಳ ಹಾಗೂ ಅಧಿಕ ಸಂಖ್ಯೆಯಲ್ಲಿ ವಾಸಿಸುತ್ತಿರುವ ಗಂಗಡಿಕಾರ ಒಕ್ಕಲಿಗ ಗುಂಪಿಗೆ ಸೇರಿದವರು. ಆದ್ದರಿಂದ ಅವರ ರಾಜ್ಯಕ್ಕೆ ಗಂಗವಾಡಿ ಎಂದೂ ಅವರ ಸಂತತಿಗೆ ಗಂಗರೆಂದೂ ಹೆಸರಾಯಿತೆಂಬ ಅಭಿಪ್ರಾಯವಿದೆ.

ಕೊಂಗುಣಿವರ್ಮನ ಮಗ ಗಂಗಮಾಧವನ ಕಾಲದ ಮೈಸೂರು ತಾಮ್ರ ಶಾಸನ ಹಾಗೂ ನಿಟ್ಟೂರು ಶಾಸನಗಳು ದೊರಕಿವೆ. ತಾಲೂಕಿನ ವರುಣ ಗ್ರಾಮದಲ್ಲಿರುವ ಶ್ರೀಪುರುಷನ (ಸು. ೭೨೫– ೭೮೮) ಶಾಸನ, ಅರಟ್ಟಿಗಳ ಅರಸ ಚೊತ್ತಮ್ಮನು ಎಡತೋರೆ ಸಾಸಿರವನ್ನು ಆಳುತ್ತಿದ್ದನೆಂದು ತಿಳಿಸುತ್ತಿದ್ದು, ಉಳಿದ ಭಾಗ ಅಸ್ಪಷ್ಟವಾಗಿದೆ.

ಹಳೇ ಬೋಗಾದಿಯ ಹತ್ತನೆಯ ಶತಮಾನದ ಅಪೂರ್ಣ ಶಾಸನವೊಂದರಲ್ಲಿ ಮಾರಸಿಂಗವಮ್ಮ ಹಾಗೂ ಅಕಾಲವರ್ಷರ ಹೆಸರುಗಳಿವೆ. ಈ ಅಕಾಲವರ್ಷ ರಾಷ್ಟ್ರಕೂಟ ಮುಮ್ಮಡಿ ಕೃಷ್ಣನಾಗಿದ್ದು ಮಾರಸಿಂಗವಮ್ಮನು ಇಮ್ಮಡಿ ಮಾರಸಿಂಹನಾಗಿರಬೇಕು. ಗಂಗರದೇ ವಿಶಿಷ್ಟವಾದ ವಾಸ್ತುಶೈಲಿ ಇಲ್ಲದಿದ್ದರೂ ಪಲ್ಲವರ ಶೈಲಿಯಿಂದ ಸ್ಫೂರ್ತಿಗೊಂಡು ಮುಂದೆ ಹಲವು ಸುಂದರ ದೇವಾಲಯಗಳನ್ನೂ ಬಸದಿಗಳನ್ನೂ ಕಲ್ಲಿನಲ್ಲಿ ಕಟ್ಟಿಸಿರುವುದು ಕಂಡುಬರುತ್ತದೆ. ಮೈಸೂರು ತಾಲೂಕಿನ ವರುಣ ಗ್ರಾಮದ ಬೂತೇಶ್ವರ ದೇವಾಲಯ ಮುಂತಾದವುಗಳನ್ನು ಹೆಸರಿಸಬಹುದು.

**ಚಾಲುಕ್ಯರು :** ಮೈಸೂರು ತಾಲೂಕಿನ ವರುಣದ ಶಾಸನಗಳು ಚಾಲುಕ್ಯವಂಶದ ಶಾಖೆಯೊಂದರ ಮೂವರು ಸಾಮಂತ ರಾಜರನ್ನು ಕುರಿತದ್ದಾಗಿದ್ದು ಅವರನ್ನು ಚಾಲುಕ್ಯ ವಂಶೋದ್ಭವರೆಂದೂ ಆದಿವರಾಹಲಾಂಛಿತರೆಂದೂ ವರ್ಣಿಸಿವೆ. ವರುಣ ಗ್ರಾಮದ ತ್ರುಟಿತ ಶಾಸನವೊಂದರಲ್ಲಿ ನರಸಿಂಹ ಮತ್ತು ಅವನ ಸತಿ ಗಾವಿಲಬ್ಬರಸಿಯ ಹೆಸರು ಉಲ್ಲೇಖಗೊಂಡಿದ್ದು, ಈ ಸಾಮಂತನೇ ನರಸಿಂಗೇಶ್ವರ ದೇವಾಲಯವನ್ನು ನಿರ್ಮಿಸಿದುದಾಗಿ ಕುಕ್ಕರಹಳ್ಳಿ ಶಾಸನವೂ ತಿಳಿಸುತ್ತದೆ. ಚಾಲುಕ್ಯ ಸಾಮಂತನಾದ ನರಸಿಂಗನನ್ನು ಅಭಿಮಾನವಾಮನ, ಚಾಲುಕ್ಯಾರ್ಜುನ, ಆಹವನಿರ್ಭಯ ಎಂದು ವರ್ಣಿಸಿದೆ. ಅಯ್ಯನ ಚಕ್ರ, ಅಯ್ನೊರ್ವರ ಕೋಟೆ, ಮಾವನಕೇಸರಿ ಮುಂತಾದ ಬಿರುದುಗಳನ್ನು ಹೊಂದಿದ್ದ ಮಹಾಸಾಮಂತ ದುರ್ಗನು ಬೂತೇಶ್ವರ ದೇವರಿಗೆ ಗ್ರಾಮ ಹಾಗೂ ಭೂಮಿಗಳನ್ನು ನನ್ನಿಕರ್ತಾರಭಟಾರರಿಗೆ ಧಾರೆ ಎರೆದುದನ್ನು ವರುಣ ಗ್ರಾಮದ ಇನ್ನೊಂದು ಶಾಸನ ತಿಳಿಸುತ್ತದೆ.

ಈ ಶಾಸನದ ಲಿಪಿಯನ್ನೇ ಹೋಲುವ ವರಕೋಡಿನ ಶಾಸನ – ಇದೇ ದುರ್ಗನ ಅರಸಿ ಪಿಟ್ಟಬ್ಬೆಯ ಸ್ಮಾರಕವಾಗಿ ನಿಲ್ಲಿಸಿದ ನಿಶಿಧಿಯನ್ನು ದಾಖಲಿಸಿದೆ. ದುರ್ಗನು ಶಿವಭಕ್ತನಾಗಿರುವಾಗ ಅವನ ರಾಣಿ ಜೈನ ಧರ್ಮಾವಲಂಭಿಯಾಗಿರುವುದು ಉಲ್ಲೇಖಾರ್ಹ. ಇವನಿಂದ ದತ್ತಿ ಪಡೆದ ನನ್ನಿಕರ್ತಾರಭಟಾರನು ಬೂತೇಶ್ವರ ದೇವಾಲಯದ ಆಚಾರ್ಯನಾಗಿರಬೇಕು. ವರುಣ ಗ್ರಾಮದ ಇನ್ನೊಂದು ಶಾಸನದಲ್ಲಿ ಚಾಲುಕ್ಯರ ಮತ್ತೊಬ್ಬ ಸಾಮಂತನಾದ ಗೊಗ್ಗಿಯ ಹೆಸರು ಉಲ್ಲೇಖಗೊಂಡಿದೆ. ಈತನೂ ಬೂತೇಶ್ವರ ದೇವರಿಗೆ ಗ್ರಾಮವೊಂದನ್ನು ನನ್ನಿಕರ್ತಾರಭಟಾರನಿಗೆ ದತ್ತಿ ನೀಡಿರುವುದು ಸ್ಪಷ್ಟವಾಗಿದೆ. ಇಲ್ಲಿನ ಆರು ವೀರಗಲ್ಲುಗಳು ಉತ್ತವಗಳ್ಳ ಹಾಗೂ ಎಡವರಿಯರ ನಡುವೆ ನಡೆದ ದಾಯಿಗ (ದಾಯಾದಿ) ಸಂಬಂಧಿತ ಕಲಹದಲ್ಲಿ ಉತ್ತವಗಳ್ಳನ ಪರವಾಗಿ ಹೋರಾಡುತ್ತಾ ಹಲವು ವೀರರು ಮಡಿದ ವಿವರಗಳನ್ನು ತಿಳಿಸುತ್ತವೆ. ಈ ವೀರರನ್ನು ಗೊಗ್ಗಿಯ ಮನೆವಗತಿ ಅಥವಾ ಮನೆಮಗತಿ (ಮನೆಯ ಸೇವಕ) ಎಂದು ಉಲ್ಲೇಖಿಸಲಾಗಿದೆ. ಪುಲಕೇಶಿಗೂ ಬೂದಿಗನಿಗೂ ನಡೆದ ಯುದ್ದದಲ್ಲಿ ಪುಲಕೇಶಿಯ ಒಡತಿಯ ಕುದುರೆಕಾರನನ್ನು ಕೊಂದು ತಾನೂ ಸತ್ತ ಎರೆಗಂಗನಿಗಾಗಿ ನಿಲ್ಲಿಸಿದ ವೀರಗಲ್ಲು ಕೂಡ ಅಲ್ಲಿಯೇ ಇದೆ.

**ನೊಳಂಬರು :** ಮೈಸೂರು ತಾಲೂಕಿನ ಕಲ್ಲೂರು ನಾಗನಹಳ್ಳಿಯ ಸುಮಾರು ೧೧ನೆಯ ಶತಮಾನದ ನೊಳಂಬ ಶಾಸನದಲ್ಲಿ ಮಡಿದ ವೀರನ ಹೆಸರು ಉಲ್ಲೇಖಗೊಂಡಿಲ್ಲವಾದರೂ ಶಾಸನೋಕ್ತ ಪಾಳಿಗನು ನೊಳಂಬಕುಲಕ್ಕೆ ಸೇರಿದವನೆಂಬುದು ಸ್ಪಷ್ಟ.

**ಚೋಳರು :** ದಕ್ಷಿಣ ಕರ್ನಾಟಕದ ಕೆಲವು ಜಿಲ್ಲೆಗಳ ಮೇಲೆ ಚೋಳ ಸಂಪರ್ಕವು ಗಂಗರ ಕಾಲದಲ್ಲಿ ಸುಮಾರು ೯೭೦ರ ವೇಳೆಗೆ ಆರಂಭವಾಗಿತ್ತು. ಚೋಳರಲ್ಲೇ ಪ್ರಸಿದ್ಧನಾದ ರಾಜರಾಜಚೋಳನು ಸುಮಾರು ೧೦೦೪ ರ ವೇಳೆಗೆ ತಿರುಮಕೂಡಲು ನರಸೀಪುರ ತಾಲೂಕಿನ ಕಲಿಯೂರಿನ ಬಳಿ ಗಂಗರನ್ನು ಸಂಪೂರ್ಣವಾಗಿ ಸೋಲಿಸಿ ಗಂಗವಾಡಿಯನ್ನು ವಶಪಡಿಸಿಕೊಳ್ಳುವುದರ ಮೂಲಕ ಮೈಸೂರಿನ ಮೇಲೂ ತನ್ನ ಅಧಿಪತ್ಯವನ್ನು ಸ್ಥಾಪಿಸಿದ. ಅಂದಿನಿಂದ ಸುಮಾರು ಒಂದು ಶತಮಾನ ಕಾಲ ಅನ್ಯಭಾಷಾ ಸಂಸ್ಕೃತಿಯ ಆಡಳಿತಕ್ಕೆ ಈ ಪ್ರದೇಶ ಒಳಗಾಯಿತು. ಆ ಅವಧಿಯಲ್ಲೇ ಇವನು ಕುಡುಮಲೈನಾಡಿನ (ಈಗಿನ ಕೊಡಗು ಪ್ರದೇಶ) ಮೇಲೆ ದಂಡೆತ್ತಿ ಉದಗೈಕೋಟೆಯನ್ನು ಆಕ್ರಮಿಸಿದ್ದು, ಈ ದಂಡಯಾತ್ರೆಯಲ್ಲಿ ಯುವರಾಜ ರಾಜೇಂದ್ರಚೋಳನು ಪ್ರಮುಖ ಪಾತ್ರವಹಿಸಿದ್ದು, ತಾಲೂಕಿನ ಹಳೇ ಬೋಗಾದಿಯ ಭೋಗೇಶ್ವರ ದೇವಾಲಯದ ದಕ್ಷಿಣ ಜಗತಿ ಕಟ್ಟೆಯ ಬಳಿ ಚೋಳರ ಕಾಲದ ಶಾಸನವಿದೆ.

ಮೈಸೂರು ತಾಲೂಕಿನ ಮಲ್ಲೇಗೌಡನ ಕೊಪ್ಪಲಿನ ಎರಡು ಶಾಸನಗಳು ತಿಲುಗರ ಮಾರಿ ಎಂಬ ಬಿರುದಿದ್ದ ಚಂಗಾಳ್ವನು ತನ್ನ ಸೋದರನೊಡಗೂಡಿ ಊರಿನ ತುರುಗಳನ್ನು ಕೊಂಡು ಹೋಗುತ್ತಿದ್ದಾಗ ಬಾಳ್ಗುಳಿಯ ಸಿರಿಯಣ್ಣ ಹಾಗೂ ಪಂಚಿಯ ಮುದ್ದಯ್ಯ ಎಂಬ ವೀರರು ಸತ್ತುದನ್ನು ತಿಳಿಸುವ ವೀರಗಲ್ಲುಗಳು. ಇವುಗಳ ಕಾಲ ಕ್ರಿ.ಶ. ೧೦೩೬. ತೇದಿಯಲ್ಲಿ ಸ್ವಲ್ಪ ಗೊಂದಲವಿರುವಂತೆ ತೋರುತ್ತದೆ. ಹೆಗ್ಗಡದೇವನಕೋಟೆ ತಾಲೂಕಿನ ಅಂಕನಾಥಪುರ ಶಾಸನದಲ್ಲಿ ರಾಜೇಂದ್ರನಿಗೆ ತೆಲ್ಗರಮಾರಿ ಎಂಬ ಬಿರುದಿದೆ.

**ಹೊಯ್ಸಳರು :** ತಾಲೂಕಿನ ವರಕೋಡು ಗ್ರಾಮದಲ್ಲಿ ವಿಷ್ಣುವರ್ಧನನಿಗೆ ಸಂಬಂಧಿಸಿದ (೧೧೧೯) ಶಾಸನ ಲಭಿಸಿದೆ. ಈ ಶಾಸನದಲ್ಲಿ ಅನೇಕ ಮಾಹಿತಿಗಳು ನಷ್ಟವಾಗಿದ್ದರೂ ಬಿಟ್ಟಿಗಕ್ಷಿತಿ [ಪ] (ವಿಷ್ಣುವರ್ಧನ) ಮತ್ತು ಸಂಧಿವಿಗ್ರಹಿ ಪುಣಿಸಮಯ್ಯರ ಹೆಸರುಗಳಿವೆ. ಶಾಸನದ ವಿಷಯ ಬಸದಿಯೊಂದಕ್ಕೆ ದತ್ತಿ ಬಿಟ್ಟಿದ್ದಾಗಿದ್ದು, ಇದು ನೆರೆಯ ವರುಣ ಗ್ರಾಮದ ಶಾಸನವಾಗಿದ್ದು, ಈ ಶಾಸನದಲ್ಲಿ ಇರುವಂತೆ ವರಕೋಡು ಗ್ರಾಮದಲ್ಲಿ ಈಗ ಯಾವ ಬಸದಿಯೂ ಇಲ್ಲ. ತಾಲೂಕಿನ ಕುಮಾರಬೀಡು ಗ್ರಾಮದಲ್ಲಿ ದೊರೆತ ೧೧೨೧ರ ವಿಷ್ಣುವರ್ಧನನ ಶಾಸನ ವಿಶಿಷ್ಟವಾಗಿದ್ದು, ಹೊಯ್ಸಳದೇವ ಎಂದು ಕರೆಯಲ್ಪಟ್ಟ ಈ ರಾಜನಿಗೆ ಕುಲೋತ್ತುಂಗ ಚೋಳ, ಭುಜಬಲವೀರಗಂಗ ಎಂಬ ಬಿರುದಿದ್ದು, ಅವನು ಚೋಳರನ್ನು ಸೋಲಿಸಿ ತಲಕಾಡು ಹಾಗೂ ಅದರ ಸುತ್ತಮುತ್ತಲ ಪ್ರಾಂತವನ್ನು ಗೆದ್ದುದನ್ನು ಸೂಚಿಸುತ್ತದೆ. ಈ ಶಾಸನದಲ್ಲಿ ಅವನು ತಲಕಾಡಿನಲ್ಲಿದ್ದು ಗಂಗವಾಡಿ ತೊಂಭತ್ತಾಱುಸಾಸಿರವನ್ನು ಆಳುತ್ತಿದ್ದನೆಂದೂ ಹೇಳಿದೆ. ಮಹಾಪ್ರಧಾನ ದಂಡನಾಯಕ ಗಂಗಪ್ಪಯ್ಯನು, ಸೋವಣ ದಂಡನಾಯಕನಿಗೆ ಪರೋಕ್ಷ ವಿನಯಕ್ಕಾಗಿ ಹಾದರಿವಾಗಿಲ

ಬೀಡಿನಲ್ಲಿ ಬಸದಿಯನ್ನು ಕಟ್ಟಿಸಿ ಗ್ರಾಮವೊಂದನ್ನು ದತ್ತಿ ಬಿಟ್ಟುದನ್ನು ಆ ಶಾಸನ ತಿಳಿಸುತ್ತದೆ. ಸೋವಣ ದಂಡನಾಯಕನು ಗಂಗಪಯ್ಯನ ತಮ್ಮನೆಂದು ತೋರುತ್ತದೆ.

ಒಂದನೆಯ ನರಸಿಂಹನಿಗೆ ಸಂಬಂಧಿಸಿದ ಶಾಸನವೊಂದು ತಾಲೂಕಿನ ಕುಮಾರಬೀಡಿನಲ್ಲೇ ಲಭಿಸಿದೆ. ಬಹುಮಟ್ಟಿಗೆ ಶಿಥಿಲವಾದ ಈ ಶಾಸನ ಕ್ರಿ.ಶ. ೧೧೬೭–೬೮ಕ್ಕೆ ಸೇರಿದ್ದು, ಸರ್ವಾಧಿಕಾರಿ, ದಂಡನಾಯಕ ಬಿಟ್ಟಿಮಯ್ಯನನ್ನು ಹೆಸರಿಸಿದೆ. ಈತನು ಒಂದನೆಯ ನರಸಿಂಹನ ಪ್ರಸಿದ್ಧ ಮಂತ್ರಿ ಮತ್ತು ದಂಡನಾಯಕ. ಇದೇ ಕಾಲದ ಹರಳುಕೋಟೆಯ ಶಾಸನದಲ್ಲಿ ಈತನು ದಾನಿಗಳಲ್ಲೊಬ್ಬನಾಗಿ ಕಾಣಿಸಿಕೊಂಡಿದ್ದಾನೆ. ೧೧೬೨ ರ ಧರ್ಮಾಪುರದ ಶಾಸನವು ಉಲ್ಲೇಖಿಸುವ ಕರ್ನಾಟ ವಂಶಕ್ಕೆ ಸೇರಿದ ದಂಡನಾಯಕ ಬಿಟ್ಟಿಮಯ್ಯನೂ ಅದೇ ಹೆಸರಿನ ಮರಿಯಾನೆ ದಂಡನಾಯಕನ ಮಗನೂ ಒಬ್ಬನೇ ಇರಬಹುದು ಎಂದು ಕೊಯಲ್ಹೊ ಅಭಿಪ್ರಾಯಪಟ್ಟಿದ್ದಾರೆ.

ವೀರಬಲ್ಲಾಳನ ಆಳ್ವಿಕೆಗೆ ಸಂಬಂಧಿಸಿದ ಕುಮಾರಬೀಡು ಶಾಸನ ದಂಡನಾಯಕನ ಬಿಟ್ಟಿಮಯ್ಯನ ಸನ್ನಿಧಾನದಲ್ಲಿ ಹಲವು ಗ್ರಾಮಗಳ ಮುಖಂಡರು ತೆರಿಗೆ ವಿನಾಯಿತಿ ನೀಡಿದುದನ್ನು ತಿಳಿಸುತ್ತದೆ. ಇದರಲ್ಲಿನ ಎಲ್ಲಾ ದಾನಿಗಳ ಹೆಸರುಗಳೂ ಹೆಮ್ಮನಹಳ್ಳಿಯ ಶಾಸನದಲ್ಲಿ ಕಂಡು ಬರುವುದರಿಂದ ಈ ಬಿಟ್ಟಿಗಾವುಂಡನು ಬಿಟ್ಟಿಮಯ್ಯನೇ ಆಗಿರಬೇಕು ಹಾಗೂ ಇದೇ ಬಿಟ್ಟಿಮಯ್ಯನೇ ಮೇಲೆ ತಿಳಿಸಿರುವ ಒಂದನೆಯ ನರಸಿಂಹನ ಶಾಸನದಲ್ಲಿರುವವನಾಗಿರಬೇಕು.

ಇಮ್ಮಡಿ ಬಲ್ಲಾಳನ ರಾಣಿ ಬಮ್ಮಲದೇವಿಯ ತಂದೆಯಾದ ಮೋಖರಿ ಲಕ್ಕಯ್ಯನು ಮಹಾಪಸಾಯ್ತನಿದ್ದು ಇಮ್ಮಡಿ ಬಲ್ಲಾಳನಿಗೆ ಪರಮವಿಶ್ವಾಸಿಯೂ ಆಗಿದ್ದ ಅಂಶ ೧೧೮೮ರ ಮೈಸೂರು ಶಾಸನದಲ್ಲಿದೆ. ಆಕೆಯ ಅಣ್ಣ ಮೈಲನಾಯಕನು ಶಂಕರದೇವರ ದೇವಾಲಯದೊಳಗಣ ನಾರಣದೇವರ ಸೊಡರೆಣ್ಣೆಗಾಗಿ ಒಂದೆತ್ತು ಗಾಣದ ಸುಂಕವನ್ನು ಬಿಟ್ಟಿದ್ದಾನೆ. ಹೆಮ್ಮನಹಳ್ಳಿಯ ೧೧೯೩ರ ವೀರಗಲ್ಲು ಶಾಸನ ಬಮ್ಮಲದೇವಿಯು ಅಧಿಕಾರ ನಡೆಸುತ್ತಿದಂತೆ ಸೂಚಿಸುತ್ತದೆ. ಅವಳು ಈ ಊರಿನವಳಾಗಿದ್ದು ಅದರ ಸುತ್ತಮುತ್ತಲ ಪ್ರದೇಶ ಆಕೆಯ ಆಡಳಿತಕ್ಕೊಳಪಟ್ಟಿರಬೇಕು.

ತಾಲೂಕಿನ ದೇವನಹಳ್ಳಿಯ ಶಾಸನವೊಂದರಲ್ಲಿ ಪೆರುಮಾಳುದಂಡನಾಯಕನು ದೇವನಹಳ್ಳಿಯನ್ನು ಮುತ್ತಿದಾಗ ಯುದ್ಧದಲ್ಲಿ ಮಡಿದ ವೀರನೊಬ್ಬನ ಉಲ್ಲೇಖವಿದ್ದು, ಈ ಶಾಸನಾಧಾರಗಳಿಂದ ಮೈಸೂರು ತಾಲೂಕು ಹೊಯ್ಸಳರ ಆಡಳಿತಕ್ಕೆ ಸೇರಿತ್ತೆಂದು ತರ್ಕಿಸಬಹುದಾಗಿದೆ.

**ವಿಜಯನಗರದರಸರು :** ಕರ್ನಾಟಕವನ್ನಾಳಿದ ಹಲವು ಪ್ರಮುಖ ರಾಜಮನೆತನಗಳಲ್ಲಿ ವಿಜಯನಗರ ಸಾಮ್ರಾಜ್ಯವೂ ಒಂದು. ೧೩೩೬ರಲ್ಲಿ ಸಂಗಮಪುತ್ರರಾದ ಹರಿಹರ, ಬುಕ್ಕ ಮತ್ತಿತರ ಸೋದರರು ಈ ಸಾಮ್ರಾಜ್ಯ ಸ್ಥಾಪಿಸುವಲ್ಲಿ ವಿಶೇಷ ಪಾತ್ರವಹಿಸಿದರು. ಇವರ ಕಿರಿಯ ಸೋದರರಾದ ಕಂಪಣ, ಮಾರಪ್ಪ ಹಾಗೂ ಮುದ್ದಪ್ಪ ಅವರಿಗೆ

ಬೆನ್ನೆಲುಬಾಗಿ ನಿಂತು ಸಹಾಯ ಮಾಡಿದರು. ತುಳುವ ವಂಶದ ಕೃಷ್ಣದೇವರಾಯ (೧೫೦೯-೨೯) ವಿಜಯನಗರದರಸರಲ್ಲಿ ಮುಖ್ಯನಾದವನು.

ವಿಜಯನಗರದ ಅರಸರ ಆಳ್ವಿಕೆಗೆ ಸಂಬಂಧಿಸಿದ ಹಲವು ಶಾಸನಗಳು ತಾಲೂಕಿನ ಹಂಚೆಗ್ರಾಮದಲ್ಲಿ ಲಭಿಸಿವೆ. ಸಾಳುವ ಎರಡನೆಯ ನರಸಿಂಹನ ಕಾಲದ ಶಾಸನ "ತಿರುಮಕೂಡಲ ಅಗಸ್ತ್ಯನಾಥದೇವರಿಗೆ ಮೇದಿನೀಮೀಸರಗಂಡಕಂಠಿಸಾಳುವ ನರಸಿಂಗರಾಯರ ಮಹಾಪ್ರಧಾನ ನರಸಂಣನಾಯ್ಕರು..." ದತ್ತಿ ನೀಡಿದ್ದನ್ನು ದಾಖಲಿಸಿದೆ. ಇವನದೇ (೧೪೯೭) ಸಂಸ್ಕೃತ ಶಾಸನವು ನಂಜಭೂಪತಿಯು ಸೋಮನಾಥಪುರ ಅಗ್ರಹಾರವನ್ನು ಜೀರ್ಣೋದ್ಧಾರ ಮಾಡಿಸಿದನೆಂಬುದನ್ನು ತಿಳಿಸುತ್ತದೆ. ಇದೇ ಕಾಲದ ಕುರುಬರಹಳ್ಳಿ ಶಾಸನದೊಂದಿಗೆ ಇದನ್ನು ಹೋಲಿಸಿದರೆ, ಅದರಲ್ಲಿಯೂ ವ್ಯಕ್ತಿಯೊಬ್ಬನಿಗೆ ದತ್ತಿ ಬಿಟ್ಟುದನ್ನು ತಿಳಿಸುವ ತ್ರುಟಿತವಾದ ಸಂಸ್ಕೃತ ಶಾಸನದಲ್ಲಿ ರಾಜ ನರಸಿಂಹನನ್ನು ಈಶ್ವರ ಸಂಭವನೆಂದೇ ಉಲ್ಲೇಖಿಸಲಾಗಿದೆ. ತಾಲೂಕಿನ ಗುರೂರಿನಲ್ಲಿ ದೊರೆತ ೧೫೧೬ರ ಶಾಸನದಲ್ಲಿ ಮಹಾಸೇನಸಮುದ್ರ ಸಾಳುವಗಜಸಿಂಹ ಎಂಬ ಬಿರುದುಗಳಿದ್ದ ಶ್ರೀರಂಗಪಟ್ಟಣದ ಚಿಕ್ಕೊಡೆಯನ ಮಗ ವೀರಪ್ಪೊಡೆಯನು ಕೃಷ್ಣದೇವರಾಯನ ಅಪ್ಪಣೆಯಂತೆ ದತ್ತಿ ಬಿಟ್ಟುದನ್ನು ತಿಳಿಸುತ್ತದೆ.

ವಿಜಯನಗರದ ಅರಸರಲ್ಲಿ ಕೆಲವರು ನೇರವಾಗಿ ಮೈಸೂರನ್ನು ತಮ್ಮ ಆಳ್ವಿಕೆಗೆ ಒಳಪಡಿಸಿಕೊಂಡಿದ್ದರೆ ಮತ್ತೆ ಕೆಲವರು ತಮ್ಮ ಸಾಮಂತರ ಮೂಲಕ ಆಡಳಿತವನ್ನು ಹೊಂದಿದ್ದರೆಂಬುದು ತಿಳಿಯುತ್ತವೆ. ಅವರ ಕಾಲದಲ್ಲಿ ತಾಲೂಕಿನಾದ್ಯಂತ ಹಲವಾರು ದೇವಾಲಯಗಳೂ, ಬಸದಿಗಳೂ ನಿರ್ಮಾಣಗೊಂಡವು.

**ಮೈಸೂರು ಒಡೆಯರು :** ತಾಲೂಕು ಕೇಂದ್ರವಾದ ಮೈಸೂರು, ಮೈಸೂರು ಸಂಸ್ಥಾನದ ರಾಜಧಾನಿಯಾಗಿ ಹಿಂದಿನಿಂದ ಬಂದಿದ್ದು, ಮೈಸೂರು ಸಂಸ್ಥಾನದ ಚರಿತ್ರೆಯೇ ಮೈಸೂರು ತಾಲೂಕಿನ ಇತಿಹಾಸವೂ ಆಗಿದೆ. ವಿಜಯನಗರ ಸಾಮ್ರಾಜ್ಯದ ಅವನತಿಯ ನಂತರ ಅನೇಕ ಸಣ್ಣಪುಟ್ಟ ರಾಜ್ಯಗಳು ಬಲಿಷ್ಠಗೊಂಡು ಸ್ವತಂತ್ರ ಅಸ್ತಿತ್ವವನ್ನು ಪಡೆದುಕೊಂಡವು. ಅಂತಹ ಮನೆತನಗಳಲ್ಲಿ ಕೆಳದಿ, ಚಿತ್ರದುರ್ಗ, ಮಾಗಡಿ ಹಾಗೂ ಮೈಸೂರು ಅರಸರು ಪ್ರಮುಖರು. ಮೈಸೂರು ಸಂಸ್ಥಾನ ದೃಢವಾಗಿ ನಿಂತು ಯದುರಾಯರಿಂದಿಡಿದು ಜಯಚಾಮರಾಜೇಂದ್ರ ಒಡೆಯರವರೆಗೆ ಸುಮಾರು ೫೫೦ ವರ್ಷಗಳ ಕಾಲ (೧೪೯೯-೧೯೪೭) ರಾಜ್ಯಭಾರ ನಡೆಸಿತು.

ದಕ್ಷಿಣ ಕರ್ನಾಟಕದಲ್ಲಿ ದೊರಕುವ ಇವರ ಹಲವಾರು ಶಿಲಾ ಹಾಗೂ ತಾಮ್ರ ಶಾಸನಗಳು; ಮೈಸೂರು ಅರಮನೆ, ರಾಜ್ಯ ಪತ್ರಗಾರ, ದೆಹಲಿಯ ರಾಷ್ಟ್ರೀಯ ಪತ್ರಗಾರ, ಲಂಡನ್ನಿನ ಇಂಡಿಯಾ ಹೌಸ್ ಮುಂತಾದೆಡೆಗಳಲ್ಲಿರುವ ರಾಜಕೀಯ ದಾಖಲೆ ಪತ್ರಗಳು ಈ ರಾಜವಂಶದ ಇತಿಹಾಸವನ್ನು ತಿಳಿಯಲು ಮೂಲಾಧಾರಗಳಾಗಿವೆ. ಅಲ್ಲದೆ, ಮೈಸೂರು ದೊರೆಗಳ ವಂಶಾವಳಿ, ಮೈಸೂರು ದೊರೆಗಳ ಪೂರ್ವಾಭ್ಯುದಯ ವಿವರ, 'ಮೈಸೂರು ನಗರದ ಪೂರ್ವೋತ್ತರ' ಮುಂತಾದ ಐತಿಹಾಸಿಕ ಗ್ರಂಥಗಳೂ ಸಹಾಯಕವಾಗಿವೆ.

ಒಡೆಯರ ವಂಶದ ಸ್ಥಾಪಕರಾದ ವಿಜಯ ಹಾಗೂ ಕೃಷ್ಣ ಎಂಬ ಯದುಕುಲ ಸೋದರರು ಉತ್ತರ ಭಾರತದ ಗುಜರಾತ್‌ನ ದ್ವಾರಕೆಯಿಂದ ಹೊರಟು ಹದಿನಾಡಿಗೆ (ನಂಜನಗೂಡು ತಾಲೂಕಿನ ಹದಿನಾರು) ಬಂದು ನೆಲಸಿದರೆಂದು ಪ್ರತೀತಿಯಿದೆ.

**ಯದುರಾಯ (೧೩೯೯–೧೪೨೩) :** ಯದುವಂಶ ಸ್ಥಾಪಕನೆಂದು ಇತಿಹಾಸದಲ್ಲಿ ಪ್ರಸಿದ್ಧರಾದ ಯದುರಾಯ ಹಾಗೂ ಕೃಷ್ಣರಾಯ ಸೋದರರ ಕಾಲದಿಂದ ಮೈಸೂರು ಒಡೆಯರ ಆಳ್ವಿಕೆಯ ಸ್ಪಷ್ಟ ಚಾರಿತ್ರಿಕ ಆಧಾರ ದೊರೆಯುತ್ತದೆ. ಉತ್ತರದ ದ್ವಾರಕಾಪಟ್ಟಣದ ರಾಜದೇವನ ಮಕ್ಕಳಾದ ಇವರು ಯಾದವಗಿರಿ ಅಥವಾ ಮೇಲುಕೋಟೆಗೆ ತಮ್ಮ ಮನೆದೇವರಾದ ನಾರಾಯಣಸ್ವಾಮಿಗೆ ಸೇವೆ ಸಲ್ಲಿಸಲು ಬಂದರು. ಅಲ್ಲಿಂದ ಕಾವೇರಿ ನದಿಯನ್ನು ದಾಟಿ ಮೈಸೂರನ್ನು ತಲುಪಿದರು. ಮೈಸೂರಿನ ಪಾಳೆಗಾರ ಚಾಮರಾಜರು ಮಡದಿ ಹಾಗೂ ಮಗಳನ್ನು ಬಿಟ್ಟು ನಿಧನ ಹೊಂದಿದ್ದು ಮೈಸೂರು ಸೀಮೆಯ ದಳವಾಯಿಯಾಗಿದ್ದ ಕೂರಗಳ್ಳಿ (ಕಾರಗಳ್ಳಿ) ಮಾರನಾಯಕನು ರಾಜಕುಮಾರಿ ದೇವಾಜಮ್ಮಣ್ಣಿಯನ್ನು ತನಗೆ ವಿವಾಹ ಮಾಡಿಕೊಡಬೇಕೆಂದು ಒತ್ತಾಯ ಪಡಿಸುತ್ತಿದ್ದಾಗ, ಅದನ್ನು ಅನುಮೋದಿಸದ ಮಹಾರಾಣಿಯು, ಜಂಗಮರ ಸಹಾಯದಿಂದ ಯದುರಾಯ ಹಾಗೂ ಕೃಷ್ಣರಾಯರ ಸಂಗಡ ಸಂಧಾನ ನಡೆಸಿ ಮಾರನಾಯಕನನ್ನು ಕೊಂದ ಯದುರಾಯರಿಗೆ ರಾಜಕುಮಾರಿಯನ್ನು ಕೊಟ್ಟು ವಿವಾಹ ಮಾಡಿ ಅವರಿಗೆ ರಾಜ್ಯಪಟ್ಟ ಕಟ್ಟಿದರೆಂದು ಹೇಳಲಾಗುತ್ತದೆ.

**ಒಂದನೆಯ ಹಿರಿಯ ಬೆಟ್ಟದ ಚಾಮರಾಜ ಒಡೆಯರು (೧೪೨೩–೧೪೫೯) :** ಇವರು ಧರ್ಮದಿಂದ ರಾಜ್ಯಭಾರ ಮಾಡಿ ಪ್ರಜಾನುರಾಗಿಯಾಗಿ ಪ್ರಸಿದ್ಧರಾಗಿದ್ದರು. ಆನಂತರ ತಿಮ್ಮರಾಜ ಒಡೆಯರು (೧೪೫೯–೧೪೭೮). ಎರಡನೆಯ ಹಿರಿಯ ಚಾಮರಾಜ ಒಡೆಯರು (೧೪೭೮–೧೫೧೩), ಮೂರನೆಯ ಬೆಟ್ಟದ ಚಾಮರಾಜ ಒಡೆಯರು (೧೫೧೩–೧೫೫೩). ಎರಡನೆಯ ತಿಮ್ಮರಾಜ ಒಡೆಯರು ೧೫೫೩–೧೫೭೨ ಆಳ್ವಿಕೆ ನಡೆಸಿದರು. ಮೈಸೂರಿನ ಸುತ್ತಲಿನ ಪಾಳೆಯಗಾರರನ್ನು ಗೆದ್ದು ಬಿರುದೆಂತೆಂಬರ ಗಂಡರಾದರು. ಆನಂತರ ಉಮ್ಮತ್ತೂರು ಮುಂತಾದ ಪಾಳೆಯಗಾರರನ್ನು ಜಯಿಸಿ ಆನೆ, ಕುದುರೆ, ಮೊದಲಾದವನ್ನು ಸ್ವಾಧೀನಪಡಿಸಿಕೊಂಡು ರಾಯರುಗಳ ಮೊನೆಗಾರರಾದರು.

**ನಾಲ್ಕನೆಯ ಬೋಳ ಚಾಮರಾಜ ಒಡೆಯರು (೧೫೭೨–೧೫೭೬) :** ಇವರು ಚಾಮುಂಡೇಶ್ವರಿ ದರ್ಶನಕ್ಕಾಗಿ ಬೆಟ್ಟಕ್ಕೆ ತೆರಳಿದಾಗ ಸಿಡಿಲೊಡೆದು ತಲೆಗೂದಲು ಉದುರಿದರೂ ಶರೀರಕ್ಕೆ ಯಾವ ಅಪಾಯವೂ ಆಗಲಿಲ್ಲ. ತಲೆ ಬೋಳಾದುದರಿಂದ ಬೋಳು ಚಾಮರಾಜರು ಎಂದು ಹೆಸರಾಯಿತೆಂದು ಹೇಳಲಾಗುತ್ತದೆ. ಇವರ ದಳವಾಯಿ ರಾಮರಾಜಯ್ಯನು ತೊರೆಮಾವಿನಹಳ್ಳಿ ವೆಂಕಟಾದ್ರಿನಾಯಕನನ್ನು ಯುದ್ಧದಲ್ಲಿ ಸೋಲಿಸಿ ಅವನಿಂದ ದಾಳದವಾಣ ಅಂಗಳವನ್ನು ಕಸಿದುಕೊಂಡನಲ್ಲದೆ, ಅವನು ಹೊಗಳಿಸಿಕೊಳ್ಳುತ್ತಿದ್ದ ಸುಗುಣಗಂಭೀರ ಎಂಬ ಬಿರುದನ್ನೂ ಕಸಿದುಕೊಂಡನು.

**ಐದನೆಯ ಬೆಟ್ಟದ ಚಾಮರಾಜ ಒಡೆಯ (೧೫೭೬–೧೫೭೮):** ಮಹಾದೈವೋಪಾಸಕರೂ ವೇದಾಂತಿಗಳೂ ಆಗಿದ್ದ ಇವರು ವೈರಾಗ್ಯದ ಕಡೆ ಆಕರ್ಷಿಸಲ್ಪಟ್ಟು ರಾಜ್ಯಕೋಶಗಳನ್ನೆಲ್ಲ ಸೋದರ ರಾಜೊಡೆಯರಿಗೆ ವಹಿಸಿ, ಪ್ರಕೃತಿ ಸೌಂದರ್ಯದಿಂದ ಸುತ್ತುವರಿಯಲ್ಪಟ್ಟ ತೆರಕಣಾಂಬಿಯಲ್ಲಿ ಕಾಲ ಕಳೆದರು.

**ಒಂದನೆಯ ರಾಜ ಒಡೆಯರು (೧೫೭೮–೧೬೧೭) :** ಮೈಸೂರು ರಾಜ್ಯವನ್ನು ಆಳಿದ ಪ್ರಾರಂಭದ ಅರಸರಲ್ಲಿ ಪ್ರಮುಖರಾದ ರಾಜ ಒಡೆಯರು ಮೂರನೆಯ ಹಿರಿಯ ಬೆಟ್ಟದ ಚಾಮರಾಜನ ಮಗ. ೧೫೫೨ರಲ್ಲಿ ಜನಿಸಿದ ಇವರಿಗೆ ತಿಮ್ಮರಾಜ ಎಂಬ ಹೆಸರೂ ಇದ್ದಂತೆ ತೋರುತ್ತದೆ. ಇವರು ಅಧಿಕಾರಕ್ಕೆ ಬಂದಾಗ ಮೈಸೂರು ರಾಜ್ಯ ೩೩ ಹಳ್ಳಿಗಳನ್ನೊಳಗೊಂಡು, ಕೇವಲ ೩,೦೦೦ ವರಾಹಗಳ ಆದಾಯ ಹೊಂದಿತ್ತು. ಮೈಸೂರಿನ ರಾಜರು ವಿಜಯನಗರದ ಅರಸರ ಸಾಮಂತರಾಗಿದ್ದರು. ತಾಳಿಕೋಟೆ ಯುದ್ಧಾನಂತರ (೧೫೬೫) ವಿಜಯನಗರ ಸಾಮ್ರಾಜ್ಯ ಒಡೆದು ಹೋದರೂ ಪೂರ್ಣವಾಗಿ ಹಾಳಾಗಿರಲಿಲ್ಲ. ವೆಂಕಟಪತಿರಾಯ ಪೆನುಗೊಂಡೆಯಿಂದ ಆಡಳಿತ ನಡೆಸುತ್ತಿದ್ದು, ತಿರುಮಲರಾಯ ಶ್ರೀರಂಗಪಟ್ಟಣದಲ್ಲಿ ಅವನ ಪ್ರತಿನಿಧಿಯಾಗಿದ್ದರಿಂದ ರಾಜ ಒಡೆಯರು ಇವನ ಹತೋಟಿಗೆ ಒಳಪಟ್ಟಿದ್ದರು. ಆರ್ಥಿಕ ಮುಗ್ಗಟ್ಟಿನಿಂದ ರಾಜ್ಯದ ಪೊಗದಿಯನ್ನು ಸಲ್ಲಿಸಲು ಸಾಧ್ಯವಿಲ್ಲವೆಂದು ರಾಜ ಒಡೆಯರು ತಿರುಮಲರಾಯನಿಗೆ ತಿಳಿಸಿದ್ದಲ್ಲದೆ ಅವನ ಅನುಮತಿ ಪಡೆದು, ಸ್ವಾನುಕೂಲಕ್ಕೋಸ್ಕರ ಮೈಸೂರಿನ ಸುತ್ತ ಬಲವಾದ ಕೋಟೆಯೊಂದನ್ನು ಕಟ್ಟಿ, ೧೫೮೪ರಲ್ಲಿ ಹೊಳೆನರಸೀಪುರದ ನರಸಿಂಹ ನಾಯಕನಿಂದ ಅಕ್ಕಿಹೆಬ್ಬಾಳನ್ನೂ, ೧೫೮೬ ರಲ್ಲಿ ಬನ್ನೂರು ಸಮೀಪದ ರಂಗಸಮುದ್ರ ಮತ್ತು ಅದರ ಸುತ್ತಲ ೧೨ ಹಳ್ಳಿಗಳನ್ನೂ ತಿರುಮಲನಿಂದ ವಶಪಡಿಸಿಕೊಂಡರು.

ರಾಜ ಒಡೆಯರು ರಾಜ್ಯ ವಿಸ್ತರಣಾ ಕಾರ್ಯದಲ್ಲಿ ಮುಂದುವರೆದು ದೇಪರಾಜನ ಕೆಂಬಾಳನ್ನು (೧೫೯೦), ಮುಳ್ಳೂರನ್ನೂ (೧೫೯೧), ಹಾರೋಹಳ್ಳಿಯನ್ನೂ (೧೫೯೩) ವಶಪಡಿಸಿಕೊಂಡರು. ೧೫೯೫ರಲ್ಲಿ ಕಾರುಗಹಳ್ಳಿ ವೀರರಾಜಯ್ಯನ ಸೇನೆಯನ್ನು ಸೋಲಿಸಿ ಅಧಿಕಾರದಿಂದ ಪದಚ್ಯುತಿಗೊಳಿಸಿ ತಿರುಮಲರಾಯನ ರಾಜ್ಯದ ಮೇಲೆ ಆಕ್ರಮಣ ನಡೆಸಿ ಶ್ರೀರಂಗಪಟ್ಟಣದ ಬಳಿ ನಡೆದ ಯುದ್ಧದಲ್ಲಿ ತಿರುಮಲರಾಯನನ್ನು ಸೋಲಿಸಿ, ಓಡಿಸಿ, ಶ್ರೀರಂಗಪಟ್ಟಣವನ್ನು ವಶಕ್ಕೆ ತೆಗೆದುಕೊಂಡರು ಈ ಕ್ರಮಕ್ಕೆ ವಿಜಯನಗರದ ಅರಸ ವೆಂಕಟನ ಅನುಮೋದನೆಯೂ ದೊರಕಿ, ರಾಜ ಒಡೆಯರು ಸ್ವತಂತ್ರವಾಗಿ ಮೈಸೂರು ರಾಜ್ಯದ ಸ್ಥಾಪಕರಾದರು. ಸೈನ್ಯದ ಕಾರ್ಯಾಚರಣೆಗಾಗಿ ದಳವಾಯಿ ಪದ್ಧತಿಯನ್ನು ಜಾರಿಗೆ ತಂದ (೧೬೧೪) ರಾಜ ಒಡೆಯರು ರಾಜ್ಯಭಾರ ಕ್ರಮದಲ್ಲಿ ಸುಧಾರಣೆ ತಂದರು. ವಿಜಯನಗರದಲ್ಲಿ ಪ್ರಚಲಿತವಿದ್ದ ನವರಾತ್ರಿ (ದಸರಾ) ಉತ್ಸವವನ್ನು ಶ್ರೀರಂಗಪಟ್ಟಣದಲ್ಲಿಯೂ ಆರಂಭಿಸಿದರು (೧೬೧೦).

ಇವರು ವಿಷ್ಣುವಿನ ಆರಾಧಕರಾಗಿದ್ದರೂ ವೈಷ್ಣವ–ಶೈವ ದೇವಾಲಯಗಳಿಗೆ ಉಂಬಳಿಗಳನ್ನು ಬಿಟ್ಟರು. ಮೈಸೂರಿನ ಲಕ್ಷ್ಮೀಕಾಂತ, ಶ್ರೀರಂಗಪಟ್ಟಣದ ರಂಗನಾಥ

ಹಾಗೂ ಮೇಲುಕೋಟೆಯ ಚೆಲುವರಾಯಸ್ವಾಮಿ ಇವರ ಆರಾಧ್ಯದೈವಗಳು. ಮೇಲುಕೋಟೆಯ ಚಳೆಪಿಳ್ಳೆರಾಯ ದೇವರಿಗೆ ೧೪೪೧ ತೊಲ ತೂಕದ ಪದ್ಮಪೀಠ ಹಾಗೂ ರಾಜಮುಡಿ ಕಿರೀಟವನ್ನು ಒಪ್ಪಿಸಿದ ವಿವರ ತಾಲೂಕಿನ ೧೬೧೪ರ ಶಾಸನದಲ್ಲಿದೆ. ಆಡಳಿತದ ನಾನಾ ಕ್ಷೇತ್ರಗಳಲ್ಲಿ ಗಮನಾರ್ಹ ಸಾಧನೆಗೈದು ಕಿರಿಯ ಪಾಳೆಯಪಟ್ಟಾಗಿದ್ದ ಮೈಸೂರನ್ನು ದೊಡ್ಡ ರಾಜ್ಯವಾಗಿ ವಿಸ್ತರಿಸಿದ ರಾಜ ಒಡೆಯರು ೧೬೧೭ರಲ್ಲಿ ನಿಧನರಾದರು.

**ನಾಲ್ಕನೆಯ ಚಾಮರಾಜ ಒಡೆಯರು (೧೬೧೭–೧೬೩೭) :** ಮೈಸೂರು ಸಂಸ್ಥಾನವನ್ನು ಆಳಿದ ಸಾಹಸಿ ದೊರೆಯಾದ ಇವರು ರಾಜ ಒಡೆಯರ ಮೊಮ್ಮಗ. ನರಸರಾಜ–ಹೊನ್ನಾಜಮ್ಮನವರ ಪುತ್ರರಾಗಿ ೧೬೦೩ನೆಯ ಏಪ್ರಿಲ್ ೨೧ರಂದು ಜನಿಸಿದರು. ರಾಜ ಒಡೆಯರ ನಿಧನಾನಂತರ ಅಧಿಕಾರಕ್ಕೆ ಬಂದಾಗ ಹದಿನೈದು ವರ್ಷದವರಾದುದರಿಂದ ದಳವಾಯಿ ಬೆಟ್ಟದಅರಸು ಆಡಳಿತವನ್ನು ನೋಡಿಕೊಳ್ಳುತ್ತಿದ್ದರು. ಈ ಅವಧಿಯಲ್ಲಿ ನಾಗಮಂಗಲ ಹಾಗೂ ಡಣಾಯಕನಕೋಟೆ ಮೇಲೆ ನಡೆದ ಮುತ್ತಿಗೆಗಳು ಗಮನಾರ್ಹ. ೧೬೨೦ರಲ್ಲಿ ದಳವಾಯಿ ತನ್ನ ಅಧಿಕಾರವನ್ನು ಭದ್ರಪಡಿಸಿಕೊಳ್ಳಲು ಚಾಮರಾಜ ಒಡೆಯರನ್ನು ಕೊಲ್ಲುವ ಸಂಚು ನಡೆಸಿದಾಗ ಅದನ್ನರಿತ ಚಾಮರಾಜ ಒಡೆಯರು ದಳವಾಯಿಯ ಸಂಬಂಧಿಗಳನ್ನು ಮರಣದಂಡನೆಗೆ ಗುರಿಪಡಿಸಿದರಲ್ಲದೆ ತಪ್ಪಿಸಿಕೊಳ್ಳಲೆತ್ನಿಸಿದ ದಳವಾಯಿಯನ್ನು ಹಿಡಿದು ಅವನ ಕಣ್ಣು ಕೀಳಿಸಿ ಸೆರೆಮನೆಯಲ್ಲಿಟ್ಟರು. ೧೬೨೧ರಲ್ಲಿ ಲಿಂಗಣ್ಣ ಎಂಬುವವನ್ನು ದಳವಾಯಿಯನ್ನಾಗಿ ನೇಮಿಸಿಕೊಂಡು ಸ್ವತಃ ಆಡಳಿತ ನಡೆಸಲು ಪ್ರಾರಂಭಿಸಿದರು.

ಆನಂತರ ಚಾಮರಾಜರು ರಾಜ್ಯ ವಿಸ್ತರಣೆಯಲ್ಲಿ ತೊಡಗಿ ಸೋಮರಾಜಯ್ಯನನ್ನು ಸೋಲಿಸಿ ತಲಕಾಡನ್ನೂ (೧೬೨೧), ಜಗದೇವರಾಯನಿಂದ ಮಳವಳ್ಳಿಯನ್ನೂ (೧೬೨೩) ಬಾಳೋಜಿನಾಯಕನಿಂದ ಅರಿಕುಠಾರವನ್ನೂ (ಈಗಿನ ಚಾಮರಾಜನಗರ, ಡಿಸೆಂಬರ್ ೧೬೨೩), ನಂಜರಾಜನಿಂದ ಸತ್ಯಾಗಾಲವನ್ನೂ (ಮೇ ೧೬೨೫), ಚನ್ನರಾಜ ಒಡೆಯರ್‌ರಿಂದ ಹೆಗ್ಗಡದೇವನಕೋಟೆಯನ್ನೂ (ಜುಲೈ ೧೬೨೫) ರಾಜ್ಯಕ್ಕೆ ಸೇರಿಸಿಕೊಂಡರು. ೧೬೨೬ರಲ್ಲಿ ನಡೆದ ಚನ್ನಪಟ್ಟಣ ಮುತ್ತಿಗೆಯಲ್ಲಿ ದಳವಾಯಿ ಲಿಂಗಣ್ಣ ಮೃತನಾದ್ದರಿಂದ ಬಸವಲಿಂಗಣ್ಣ ಎಂಬುವನನ್ನು ಚಾಮರಾಜರು ದಳವಾಯಿಯಾಗಿ ನೇಮಿಸಿಕೊಂಡರು. ಆತ ಹೊಂಗನೂರು, ಅಮ್ಮಚವಾಡಿಗಳನ್ನು (ಮಾರ್ಚ್ ೧೬೨೬) ಗೆದ್ದು, ಆನಂತರ ಪಿರಿಯಾಪಟ್ಟಣದ ಮೇಲೆ ಧಾಳಿ ಮಾಡಿ ಅಲ್ಲಿನ ನಾಯಕನಿಂದ ಕಪ್ಪ ಕಾಣಿಕೆಯನ್ನೂ ವಸೂಲಿಮಾಡಿ, ಹಾಡ್ಯ, ಹನಸೋಗೆ ಹಾಗೂ ಸಾಲಿಗ್ರಾಮ ಪ್ರದೇಶಗಳನ್ನು ವಶಪಡಿಸಿಕೊಂಡನು (ಜುಲೈ ೧೬೨೬). ಅದೇ ಅವಧಿಯಲ್ಲಿ ಪ್ರಭುದೇವ ಹಾಗೂ ಲಿಂಗರಾಜಯ್ಯರಿಂದ ತಗಡೂರು, ಕೊತ್ತೇಗಾಲಗಳನ್ನೂ ಚನ್ನರಾಜಯ್ಯನಿಂದ ಜಾಡಲೆಯನ್ನೂ ಪಡೆದುಕೊಳ್ಳಲಾಯಿತು.

೧೬೩೦ರಲ್ಲಿ ದಳವಾಯಿ ಬಸವಲಿಂಗಣ್ಣ ತೀರಿಕೊಂಡಾಗ ಅವರ ಸ್ಥಾನದಲ್ಲಿ ಚಾಮರಾಜರು ಬೆಟ್ಟದ ಅರಸನ ತಮ್ಮನಾದ ವಿಕ್ರಮರಾಯನನ್ನು ದಳವಾಯಿಯಾಗಿ ನೇಮಿಸಿದರು. ಆನಂತರ ಮೈಸೂರು ಹಾಗೂ ಇಕ್ಕೇರಿ ಸಂಸ್ಥಾನಗಳ ನಡುವೆ ಘರ್ಷಣೆ ನಡೆಯಿತು. ಚನ್ನಪಟ್ಟಣದ ಜಗದೇವರಾಯ ಚಾಮರಾಜರನ್ನು ಎದುರಿಸುವ ಸನ್ನಾಹ ನಡೆಸಿದಾಗ, ಸ್ವತಃ ಚಾಮರಾಜರೇ ಸೈನ್ಯದ ನೇತೃತ್ವವನ್ನು ವಹಿಸಿ ಜಗದೇವರಾಯನನ್ನು ಸೋಲಿಸಿ ಚನ್ನಪಟ್ಟಣವನ್ನು ಆಕ್ರಮಿಸಿಕೊಂಡರು.

ಇವರ ಆಳ್ವಿಕೆಯ ಕೊನೆಯಲ್ಲಿ ಮೈಸೂರು ರಾಜ್ಯವು ಮಳವಳ್ಳಿ, ಚನ್ನಪಟ್ಟಣ, ನಾಗಮಂಗಲ, ಚನ್ನರಾಯಪಟ್ಟಣ, ಪಿರಿಯಾಪಟ್ಟಣ ಹಾಗೂ ದಣಾಯಕನಕೋಟೆ ಪ್ರದೇಶಗಳನ್ನೊಳಗೊಂಡಿತ್ತು. ಅಲ್ಲದೆ ಸುತ್ತಮುತ್ತಲಿನ ಅನೇಕ ಪಾಳೆಯಗಾರರು ಚಾಮರಾಜರೊಡನೆ ಸ್ನೇಹವನ್ನು ಬಯಸಿ ಕಪ್ಪವನ್ನೊಪ್ಪಿಸುತ್ತಿದ್ದರು. ಅಂದಿನ ವಿಜಯನಗರ ಸಾಮಂತರಲ್ಲಿ ಚಾಮರಾಜ ಒಡೆಯರು ಪ್ರಭಾವೀ ಸ್ಥಾನವನ್ನು ಗಳಿಸಿದ್ದರು. ಚಾಮರಾಜಒಡೆಯರಿಗೆ 'ಶ್ರೀಮದ್‌ರಾಜಾಧಿರಾಜ ಪರಮೇಶ್ವರ' ಮುಂತಾದ ಬಿರುದುಗಳಿದ್ದವು. ಯಳಂದೂರಿನ ಮುದ್ದಾಜಮ್ಮ, ಬಿಳುಗಲಿಯ ದೇವಿರಮ್ಮ, ಮೂಗೂರಿನ ಸಿದ್ದಾಜಮ್ಮ, ಮೂಡಣಕೋಟೆಯ ಚನ್ನಾಜಮ್ಮ, ಸಿಂಧುವಳ್ಳಿಯ ದೊಡ್ಡಾಜಮ್ಮ ಇವರ ಮಡದಿಯರಾಗಿದ್ದರು.

ಚಾಮರಾಜಒಡೆಯರು ಪರಾಕ್ರಮಿಯಾಗಿದ್ದಂತೆ ಧರ್ಮಾಭಿಮಾನಿಯೂ ಆಗಿದ್ದು, ಮೈಸೂರಿನ ಲಕ್ಷ್ಮೀಕಾಂತ, ಚಾಮುಂಡೇಶ್ವರಿ ಹಾಗೂ ಮಹಾಬಲೇಶ್ವರ ದೇವಾಲಯಗಳಿಗೆ ಉದಾರದತ್ತಿ ನೀಡಿದರಲ್ಲದೆ ೧೬೩೧ರಲ್ಲಿ ಶ್ರವಣಬೆಳಗೊಳವನ್ನು ಸಂದರ್ಶಿಸಿ, ಚಾರುಕೀರ್ತಿ ಪಂಡಿತ ಯೋಗೀಂದ್ರರನ್ನು ತಮ್ಮ ಆಸ್ಥಾನಕ್ಕೆ ಕರೆಸಿ ಗೌರವಿಸಿ ಕ್ಷೇತ್ರದಲ್ಲಿ ಪೂಜಾಕೈಂಕರ್ಯಗಳು ನಡೆಯಲು ದತ್ತಿ ದಾನಗಳನ್ನು ನೀಡಿದರು. ಇವರು ಹಲವಾರು ಕವಿಗಳಿಗೆ ತಮ್ಮ ಆಸ್ಥಾನದಲ್ಲಿ ಆಶ್ರಯ ನೀಡಿದ್ದರಲ್ಲದೆ, ಸ್ವತಃ ಕವಿಗಳಾಗಿದ್ದರು. ಚಾಮರಾಜ ಒಡೆಯರು ಮೇ ೩, ೧೬೩೭ ರಂದು ನಿಧನರಾದಾಗ ಅವರ ಪತ್ನಿಯರು ಸತಿಯಾದರೆನ್ನಲಾಗುತ್ತದೆ.

**ಎರಡನೆಯ ರಾಜ ಒಡೆಯರು (೧೬೩೭–೩೮) :** ಇವರು ಮೇ ೨೦, ೧೧೬೭ರಲ್ಲಿ ಜನಿಸಿದರು. ತಮ್ಮ ಇಪ್ಪತ್ತೈದನೆಯ ವಯಸ್ಸಿನಲ್ಲಿ ನಾಲ್ಕನೆಯ ಚಾಮರಾಜ ಒಡೆಯರ ಮರಣಾನಂತರ ಪಟ್ಟಾಭಿಷಿಕ್ತರಾದರು. ಶಾಸನ ಹಾಗೂ ಸಾಹಿತ್ಯ ಗ್ರಂಥಗಳಲ್ಲಿ ಇವರನ್ನು ಇಮ್ಮಡಿ ರಾಜರಸ, ಇಮ್ಮಡಿ ರಾಜೊಡೆಯರ್, ಇಮ್ಮಡಿರಾಜ ಎಂದು ಸಂಬೋಧಿಸಲಾಗಿದೆ. ಇವರು ಪಟ್ಟಕ್ಕೆ ಬರುವ ವೇಳೆಗಾಗಲೇ ಅರಸೊತ್ತಿಗೆಯ ಮೇಲೆ ದಳವಾಯಿಗಳ ಪ್ರಾಬಲ್ಯ ಬಲಗೊಳ್ಳುತ್ತ ಬಂದಿತ್ತು. ಇವರ ಕಾಲದಲ್ಲಿ ವಿಕ್ರಮರಾಯ ದಳವಾಯಿಯಾಗಿ ಮುಂದುವರಿದ. ೧೬೩೮ರಲ್ಲಿ ನಡೆದ ಅರಕಲಗೂಡಿನ ಮುತ್ತಿಗೆ ಇವರ ಆಡಳಿತಾವಧಿಯ ಪ್ರಮುಖ ಘಟನೆ, ದಳವಾಯಿಯು ಸೇನೆಯೊಂದಿಗೆ ಅರಕಲಗೂಡಿಗೆ ಮುತ್ತಿಗೆ ಹಾಕಿ,

ಅಲ್ಲಿನ ಕೃಷ್ಣಪ್ಪನಾಯಕನನ್ನು ಸೋಲಿಸಿ ಅವನಿಂದ ಕಪ್ಪಕಾಣಿಕೆಗಳನ್ನು ವಸೂಲು ಮಾಡಿಕೊಂಡು ಶ್ರೀರಂಗಪಟ್ಟಣಕ್ಕೆ ಹಿಂತಿರುಗಿದನು.

ಪ್ರತಿಭಾನ್ವಿತರಾದ ಇವರು ಕೇವಲ ಒಂದೂವರೆ ವರ್ಷಗಳ ಕಾಲ ಆಳಿದರಾದರೂ ಇವರ ಆಳ್ವಿಕೆ ಜನಪ್ರಿಯವಾಗಿತ್ತಲ್ಲದೆ, ದಕ್ಷತೆಗೆ ಹೆಸರಾಗಿತ್ತು. ತಮ್ಮ ಪೂರ್ವಿಕರ ಸಂಪ್ರದಾಯಗಳನ್ನು ಮುಂದುವರಿಸಿಕೊಂಡು ಬಂದರಲ್ಲದೆ, ಸಾಹಿತ್ಯ, ಸಂಸ್ಕೃತಿ ಹಾಗೂ ಕಲಾ ಪೋಷಕರೂ ಆಗಿದ್ದರು. ವಿಷ್ಣುವಿನ ಪರಮಭಕ್ತರಾದ ಇವರು ವೈಷ್ಣವ ಧರ್ಮಕ್ಕೆ ಸಂಬಂಧಿಸಿದ ಭಕ್ತಿ ಪ್ರಧಾನ ಸಾಹಿತ್ಯ ಪಠನ ಕೇಳುವುದರಲ್ಲಿ ಹೆಚ್ಚು ಆಸಕ್ತರು. ಒಮ್ಮೆ ಇವರ ಆರೋಗ್ಯ ಸರಿಯಿಲ್ಲದಿದ್ದಾಗ ದಳವಾಯಿ ವಿಕ್ರಮರಾಯ ಆಸ್ಥಾನದ ವೈದ್ಯನ ಮೂಲಕ ವಿಷವಿತ್ತು ಇವರನ್ನು ಕೊಲೆಮಾಡಿಸಿದ.

**ರಣಧೀರ ಕಂಠೀರವ ನರಸರಾಜ ಒಡೆಯರು (೧೬೩೮–೧೬೫೯) :** ಐದನೆಯ ಬೆಟ್ಟದ ಚಾಮರಾಜ ಒಡೆಯರ ಮಗ ಹಾಗೂ ಇಮ್ಮಡಿರಾಜ ಒಡೆಯರ ಉತ್ತರಾಧಿಕಾರಿಯಾದ ಇವರು ೧೬೧೫ ರಲ್ಲಿ ಜನಿಸಿದರು. ಬಾಲ್ಯದಿಂದಲೇ ಸಾಹಸ ಪ್ರವೃತ್ತಿಯ ಉಳಿದ ಮಲ್ಲರೆಲ್ಲರನ್ನೂ ಸೋಲಿಸಿ ಅಪ್ರತಿಮಮಲ್ಲನೆಂಬ ಹೆಸರನ್ನು ಗಳಿಸಿಕೊಂಡಿದ್ದ ತಿರುಚಿನಾಪಳ್ಳಿಯ ಜಟ್ಟಿಯೊಬ್ಬನನ್ನು ಮಾರುವೇಷದಲ್ಲಿ ತಿರುಚಿನಾಪಳ್ಳಿಗೆ ಹೋಗಿ ಆಸ್ಥಾನದ ಸಾಮಂತರ ಸಮ್ಮುಖದಲ್ಲಿ ಇವರು ಸೋಲಿಸಿದರಂತೆ.

ಇವರು ೧೬೩೮ರಲ್ಲಿ ಮೈಸೂರಿನ ಸಿಂಹಾಸನವನ್ನೇರುತ್ತಿದ್ದಂತೆ ಕೊಲೆಗಡುಕ ಆಗಿದ್ದ ದಳವಾಯಿ ವಿಕ್ರಮರಾಯನನ್ನು ಕೊಲ್ಲಿಸಿದರೂ ಬಾಹ್ಯಶತ್ರುಗಳನ್ನೂ ಎದುರಿಸಬೇಕಾಯಿತು. ಹಿಂದೆ ಚಾಮರಾಜ ಒಡೆಯರಿಂದ ಅವಮಾನಿತನಾಗಿದ್ದ ನಾಗಮಂಗಲದ ಚೆನ್ನಯ್ಯನೆಂಬುವನು ಮೈಸೂರು ರಾಜರ ವಿರುದ್ಧ ತನ್ನ ಸೇಡು ತೀರಿಸಿಕೊಳ್ಳುವ ದೃಷ್ಟಿಯಿಂದ ಬಿಜಾಪುರಕ್ಕೆ ಹೋಗಿ ಸುಲ್ತಾನನ ಸೈನಿಕ ಸಹಾಯವನ್ನು ಬೇಡಿದ. ಸುಲ್ತಾನ ತನ್ನ ಸೇನಾನಿ ರಣದುಲ್ಲಾಖಾನನನ್ನು ಸೈನ್ಯದೊಡನೆ ಕಳುಹಿಸಿಕೊಟ್ಟಾಗ ಮೊದಲು ಇಕ್ಕೇರಿಯನ್ನು ಧ್ವಂಸ ಮಾಡಿ ಅಪಾರ ಹಣವನ್ನೂ ಸೈನ್ಯವನ್ನೂ ಕೂಡಿಸಿಕೊಂಡು ಶ್ರೀರಂಗಪಟ್ಟಣವನ್ನು ಆಕ್ರಮಿಸಲು ರಣದುಲ್ಲಾಖಾನ್ ಮುನ್ನಡೆದ. ಶ್ರೀರಂಗಪಟ್ಟಣದ ಬಳಿ ನಡೆದ ಕದನದಲ್ಲಿ ಇವರು ಶತ್ರುವನ್ನು ಸೋಲಿಸಿ ಶಾಂತಿ ಒಪ್ಪಂದವನ್ನು ಮಾಡಿಕೊಂಡರು.

ತದನಂತರ ದಕ್ಷಿಣಾಭಿಮುಖವಾಗಿ ದಂಡಯಾತ್ರೆ ಕೈಗೊಂಡ ಇವರು ಡಣ್ಣಾಯಕನ ಕೋಟೆ, ಸತ್ಯಮಂಗಲ ಮೊದಲಾದ ಪ್ರಾಂತಗಳನ್ನು ಮಧುರೆ ನಾಯಕನಿಂದ ವಶಪಡಿಸಿಕೊಂಡರು. ಪಶ್ಚಿಮದಲ್ಲಿ ಅರಕಲಗೂಡು, ಬೆಟ್ಟದಪುರಗಳನ್ನೂ ಉತ್ತರದಲ್ಲಿ ಹೊಸೂರನ್ನೂ ಜಯಿಸಿದರು. ಮಾಗಡಿ ಕೆಂಪೇಗೌಡನನ್ನು ಸೋಲಿಸಿ ಅವನಿಂದ ಕಪ್ಪಕಾಣಿಕೆ ಪಡೆದರು. ೧೬೪೬ರಲ್ಲಿ ಬಿಜಾಪುರದ ಸೈನ್ಯವು ಮುಸ್ತಫಖಾನನ ನಾಯಕತ್ವದಲ್ಲಿ ಮೈಸೂರು ರಾಜ್ಯದ ಮೇಲೆ ಮತ್ತೆ ದಾಳಿ ಮಾಡಿತು. ತುರುವೇಕೆರೆಯ ಬಳಿ ನಡೆದ

ಯುದ್ಧದಲ್ಲಿ ಮೈಸೂರಿನ ದಳವಾಯಿ ನಂಜರಾಜಯ್ಯ ಪರಾಕ್ರಮದಿಂದ ಹೋರಾಡಿ, ಶತ್ರುಗಳನ್ನು ಬಡಿದೋಡಿಸಿದನಾದರೂ ರಣರಂಗದಲ್ಲಿ ಮಡಿದ. ೧೬೪೮ರಲ್ಲಿ ನರಸರಾಜರು ಮುಸ್ತಫಖಾನನ ಸೇನಾಧಿಪತ್ಯದಲ್ಲಿ ನಡೆದ ಬಿಜಾಪುರದ ಮತ್ತೊಂದು ದಾಳಿಯನ್ನು ಹಿಮ್ಮೆಟ್ಟಿಸಿದರು. ಆ ಸಂದರ್ಭದಲ್ಲಿ ಬಿಜಾಪುರದವರೊಡನೆ ಆದ ಒಪ್ಪಂದದ ಪ್ರಕಾರ ಚನ್ನರಾಯಪಟ್ಟಣದ ಕೋಟೆ ಮೈಸೂರು ಅರಸರ ವಶಕ್ಕೆ ಬಂದಿತು.

ಕಂಠೀರವ ನರಸರಾಜರು ರಕ್ಷಣಾ ಕ್ರಮವಾಗಿ ಶ್ರೀರಂಗಪಟ್ಟಣದ ಸುತ್ತಲೂ ಇದ್ದ ಕೋಟೆ–ಕೊತ್ತಲಗಳನ್ನು ಬಲಪಡಿಸಿದರು. ರಾಜ್ಯದ ಅನೇಕ ದೇಗುಲಗಳಿಗೆ ಅಪಾರ ಧನವನ್ನು ಉಂಬಳಿಯಾಗಿ ನೀಡಿದರು. ಶ್ರೀರಂಗಪಟ್ಟಣದಲ್ಲಿ ನರಸಿಂಹ ದೇವಾಲಯವನ್ನು (ದೇವಾಲಯದಲ್ಲಿ ಇವರ ವಿಗ್ರಹವಿದೆ) ಕಟ್ಟಿಸಿ ಟಂಕಶಾಲೆಯನ್ನು ಸ್ಥಾಪಿಸಿ ಕಂಠೀರವಪಣ ಎಂಬ ನಾಣ್ಯಗಳನ್ನು ಅಚ್ಚು ಹಾಕಿಸಿದರು. ಮೈಸೂರು ರಾಜ್ಯದ ವಿಸ್ತಾರ, ಬಲ ಮತ್ತು ಕೀರ್ತಿಯನ್ನು ಹೆಚ್ಚಿಸಿದ ಇವರು ೧೬೫೯ರಲ್ಲಿ ನಿಧನರಾದರು. ಇವರ ರಾಣಿಯರು ಕಳಲೆಯಲ್ಲಿ ಇವರ ಸ್ಮಾರಕವಾಗಿ ವೀರಶೈವ ಮಠವೊಂದನ್ನು ೧೬೬೨ರಲ್ಲಿ ನಿರ್ಮಿಸಿ ಅದಕ್ಕೆ ಉಂಬಳಿ ನೀಡಿದರು.

**ದೊಡ್ಡದೇವರಾಜ ಒಡೆಯರು (೧೬೫೯–೧೬೭೩)** : ನಾಲ್ಕನೆಯ (ಬೋಳ) ಚಾಮರಾಜರ ಮೊಮ್ಮಗನೂ ಗುಂಡ್ಲುಮುಪ್ಪಿನ ದೇವರಾಜನ ಮಗನೂ ಆಗಿದ್ದು ೧೬೨೭ ರಲ್ಲಿ ಜನಿಸಿದರು. ಕಂಠೀರವ ನರಸರಾಜರ ಉತ್ತರಾಧಿಕಾರಿಯಾಗಿ ೧೬೫೯ರಲ್ಲಿ ಪಟ್ಟಕ್ಕೆ ಬಂದಾಗ ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಯಿತು.

ವಿಜಯನಗರದ ಆಳ್ವಿಕೆಯನ್ನು ಮರುಸ್ಥಾಪಿಸುವ ನೆಪದಿಂದ ಹೊಳೆನರಸೀಪುರದ ಲಕ್ಷ್ಮಪ್ಪನಾಯಕನ ಸಹಾಯ ಪಡೆದು ಶ್ರೀರಂಗಪಟ್ಟಣದ ಮೇಲೇರಿ ೧೬೫೯–೬೦ ರಲ್ಲಿ ಬಂದಿದ್ದ ಕೆಳದಿ ಶಿವಪ್ಪನಾಯಕನನ್ನು ಸೋಲಿಸಿ ಹಿಮ್ಮೆಟ್ಟಿಸಿದರು. ಬಿದನೂರಿನಲ್ಲಿ ಶಿವಪ್ಪನಾಯಕ ಮರಣಗೊಂಡ ಮೇಲೆ ಮುಂದಿನ ಅರಸರಾದ ಒಂದನೆಯ ವೆಂಕಟಪ್ಪ ಹಾಗೂ ಭದ್ರಪ್ಪ ಮೈಸೂರಿನೊಡನೆ ವೈರವನ್ನು ಮುಂದುವರಿಸಿದರು. ಬಿಜಾಪುರ ಹಾಗೂ ಗೋಲ್ಕಂಡದ ಸುಲ್ತಾನರೂ ಸತ್ವಹೀನಗೊಂಡ ಸಂದರ್ಭವನ್ನು ಉಪಯೋಗಿಸಿಕೊಳ್ಳಲು ಮುಂದಾದರು. ಆಗ ದಳವಾಯಿ ನಂಜನಾಥಯ್ಯನ ನೇತೃತ್ವದಲ್ಲಿ ಧಾಳಿ ನಡೆಸಿ ಶಾಹಿ ರಾಜ್ಯಗಳ ಅಧೀನದಲ್ಲಿದ್ದ ಚೇಳೂರು, ಬಿದರೆ, ಸಂಪಿಗೆ, ಚಿಕ್ಕನಾಯಕನಹಳ್ಳಿಗಳನ್ನು ವಶಕ್ಕೆ ತೆಗೆದುಕೊಳ್ಳಲಾಯಿತು (೧೬೬೩).

೧೬೬೪ರ ಹೊತ್ತಿಗೆ ಬಿದನೂರಿನಲ್ಲಿ ರಾಜನಾಗಿದ್ದ ಹಿರಿಯ ಸೋಮಶೇಖರನಾಯಕ, ಮೈಸೂರಿನವರು ಈ ಹಿಂದೆ ವಶಪಡಿಸಿಕೊಂಡಿದ್ದ ಬಿಕ್ಕೋಡು, ಬೇಲೂರು ಮುಂತಾದ ಪ್ರದೇಶಗಳನ್ನು ಗೆದ್ದುಕೊಂಡರೂ ನಂಜನಾಥಯ್ಯ ತನ್ನ ಸೈನ್ಯವನ್ನು ಮಲೆನಾಡಿನ ಮೂಲಕ ಇಕ್ಕೇರಿಯತ್ತ ನುಗ್ಗಿಸಿದಾಗ, ಅಲ್ಲಿಯ ರಾಜ ಸೋಮಶೇಖರನಾಯಕ ಸಂಧಿ ಮಾಡಿಕೊಂಡ. ೧೬೬೩ರ ಹೊತ್ತಿಗೆ ಬೇಲೂರಿನಲ್ಲಿದ್ದ ವಿಜಯನಗರ ವಂಶದ ಶ್ರೀರಂಗರಾಯನು, ಬೆಂಬಲ ಸಿಗದೆ ತಳಕಚ್ಚಿದ. ದೇವರಾಜ ಒಡೆಯರು ಅಂದಿನಿಂದ

ಸಾರ್ವಭೌಮ ಬಿರುದುಗಳನ್ನು ಅಳವಡಿಸಿಕೊಳ್ಳಲಾರಂಭಿಸಿ ಮೈಸೂರು ಒಡೆಯರು ಒಪ್ಪಿಕೊಂಡಿದ್ದ ನಾಮಮಾತ್ರ ಸಾಮಂತತ್ವವೂ ಕೊನೆಗೊಂಡಿತು.

೧೬೬೬ ರಲ್ಲಿ ಅಣ್ಣಾಜಯ್ಯನಿಂದ ಸಾಂಬವಳ್ಳಿಯನ್ನು ವಶಪಡಿಸಿಕೊಂಡ ನಂತರ ದೇವರಾಜ ಒಡೆಯರ ದೃಷ್ಟಿ ದಕ್ಷಿಣದತ್ತ ಹರಿಯಿತು. ಮಧುರೆಯ ನಾಯಕನ ಸಾಮಂತನಾಗಿದ್ದ ಸಾಂಬಳ್ಳಿಯ ಘಟ್ಟಮುದಲಿಯಾರನನ್ನು ಹತ್ತಿಕ್ಕಿದರು. ಇದನ್ನು ಕೇಳಿ ಕೆರಳಿದ ಮಧುರೆಯ ಚೊಕ್ಕನಾಥನಾಯಕ ದಂಡೆತ್ತಿ ಬಂದು ಈರೋಡಿನಲ್ಲಿ ಹೋರಾಡಿದ. ದೇವರಾಜ ಒಡೆಯರ ದಳವಾಯಿ ಕುಮಾರೈಯ್ಯನ ನೇತೃತ್ವದಲ್ಲಿ ಮೈಸೂರು ಸೈನ್ಯ ಧಾವಿಸಿ, ಈರೋಡನ್ನು ೧೬೬೭–೬೮ರಲ್ಲಿ ವಶಪಡಿಸಿಕೊಂಡಿತು. ಉತ್ತರದಲ್ಲಿ ದೇವರಾಜರು ಹುಲಿಯೂರುದುರ್ಗ ಹಾಗೂ ಕುಣಿಗಲ್ಲುಗಳನ್ನು ಮಾಗಡಿ ಕೆಂಪೇಗೌಡನಿಂದ ಕಸಿದುಕೊಂಡರು. ೧೬೭೨ರ ಹೊತ್ತಿಗೆ ದೇವರಾಜ ಒಡೆಯರು ಪಶ್ಚಿಮದಲ್ಲಿ ಸಕ್ಕರೆಪಟ್ಟಣದಿಂದ ಪೂರ್ವದಲ್ಲಿ ಸೇಲಂವರೆಗೂ ಉತ್ತರದಲ್ಲಿ ಚಿಕ್ಕನಾಯಕನಹಳ್ಳಿಯಿಂದ ದಕ್ಷಿಣದಲ್ಲಿ ಕೊಯಮತ್ತೂರು ಜಿಲ್ಲೆಯ ಧಾರಾಪುರದವರೆಗೂ ಹರಡಿದ್ದ ವಿಶಾಲ ಭೂಪ್ರದೇಶವನ್ನು ರಾಜಧಾನಿ ಶ್ರೀರಂಗಪಟ್ಟಣದಿಂದ ಆಳುತ್ತಿದ್ದರು.

ಚಾಮುಂಡಿಬೆಟ್ಟಕ್ಕೆ ಸುಲಭವಾಗಿ ಹತ್ತಿಹೋಗಲು ಅನುಕೂಲವಾಗುವಂತೆ ಇವರು ಬೆಟ್ಟಕ್ಕೆ ಸಾವಿರ ಮೆಟ್ಟಿಲುಗಳನ್ನು ೧೬೬೪ರಲ್ಲಿ ಕಟ್ಟಿಸಿದರಲ್ಲದೆ, ಮಾರ್ಗಮಧ್ಯದಲ್ಲಿ ನಂದಿಯನ್ನು ಪ್ರತಿಷ್ಠಾಪಿಸಿದರು. ದೇವರಾಜಪುರವೆಂಬ ಅಗ್ರಹಾರವನ್ನೂ ಮೈಸೂರು ನಗರ ಹಾಗೂ ಅಗ್ರಹಾರಗಳ ನಡುವೆ ದೇವಾಂಬುಧಿ ಕೆರೆಯನ್ನೂ ನಿರ್ಮಿಸಿದರು. ಇವರ ಆಸ್ಥಾನದಲ್ಲಿದ್ದ ಚಾಮಯ್ಯ ಕವಿ ದೇವರಾಜೇಂದ್ರ ಸಾಂಗತ್ಯವೆಂಬ ಗ್ರಂಥದಲ್ಲಿ ರಾಜರ ಆಳ್ವಿಕೆಯ ವಿವರಗಳನ್ನು ಕೊಟ್ಟಿದ್ದಾನೆ. ಇವರು ೧೬೭೩ರಲ್ಲಿ ಚಿಕ್ಕನಾಯಕನಹಳ್ಳಿಯಲ್ಲಿ ತೀರಿಕೊಂಡರು.

**ಚಿಕ್ಕದೇವರಾಜ ಒಡೆಯರು (೧೬೭೨–೧೭೦೪) :** ಮೈಸೂರು ಒಡೆಯರಲ್ಲೇ ಪ್ರಸಿದ್ಧರಾದ ಇವರು ದೊಡ್ಡದೇವರಾಜ ಒಡೆಯರ ಮಗ. ಇವರು ೧೬೪೫ರಲ್ಲಿ ಜನಿಸಿದರು. ಗುಂಡ್ಲುಪೇಟೆ ತಾಲೂಕಿನ ಹಂಗಳ ಗ್ರಾಮದಲ್ಲಿ ತಮ್ಮ ಬಾಲ್ಯ ಕಳೆದು ವಿದ್ಯಾಭ್ಯಾಸ ಪಡೆದುಕೊಂಡರು. ಆನಂತರ ದೇವರಾಜ ಒಡೆಯರ ಆಳ್ವಿಕೆಯ ಅವಧಿಯಲ್ಲಿ ಯುವರಾಜರಾಗಿ ಶ್ರೀರಂಗಪಟ್ಟಣದಲ್ಲಿದ್ದು ರಾಜ್ಯಾಡಳಿತದಲ್ಲಿ ತರಬೇತಿ ಪಡೆದರು. ದೇವರಾಜ ಒಡೆಯರು ಪುತ್ರಸಂತಾನವಿಲ್ಲದೆ ಮರಣಹೊಂದಿದಾಗ ಪಟ್ಟಕ್ಕೆ ಬಂದು ರಾಜ್ಯದ ಸರ್ವತೋಮುಖ ಪ್ರಗತಿಗೆ ಶ್ರಮಿಸಿದರು.

ಇವರು ಅಧಿಕಾರಕ್ಕೆ ಬರುತ್ತಿದ್ದಂತೆ ಸೈನ್ಯ ಸಜ್ಜುಗೊಳಿಸಿ ಶ್ರೀರಂಗಪಟ್ಟಣದಲ್ಲಿ ಫಿರಂಗಿ ಪಡೆಗಳೊಡನೆ ಅದರ ಭದ್ರತೆಯನ್ನು ಹೆಚ್ಚಿಸಿ ಹನ್ನೆರಡು ಸಾವಿರ ಅಶ್ವದಳ, ಒಂದು ಲಕ್ಷ ಪದತಿದಳದ ಸೈನ್ಯವನ್ನು ಕಟ್ಟಿ ದಿಗ್ವಿಜಯ ಕೈಗೊಂಡು ಅನೇಕ ಪ್ರದೇಶಗಳನ್ನು ಗೆದ್ದರು. ೧೬೭೬ರಲ್ಲಿ ನರಸಪ್ಪ ಒಡೆಯನಿಂದ ಚಿಕ್ಕದೇವರಾಯನ ದುರ್ಗ,

ಚಿಕ್ಕಪ್ಪಗೌಡನಿಂದ ದೊಡ್ಡದೇವನಗರಿ, ಜಹಾಂಗೀರ್‌ಖಾನ್‌ನಿಂದ ಹೊನ್ನವಳ್ಳಿ, ಹುಸೇನ್‌ಖಾನ್‌ನಿಂದ ಬೊಮ್ಮಸಮುದ್ರ ಹಾಗೂ ಭುಜಂಗಯ್ಯನಿಂದ ತೋಡನಾಡುಗಳನ್ನು ಗೆದ್ದುಕೊಂಡರು. ೧೬೭೮ರಲ್ಲಿ ಘಟ್ಟಿ ಮೊದಲಿಯಾರನಿಂದ ಅಂದೂರು ಹಾಗೂ ಚಿಕ್ಕಪ್ಪಗೌಡನಿಂದ ಮಿಡಗೇಶಿ, ಮಧುಗಿರಿ ಮತ್ತು ಸುತ್ತಮುತ್ತಲಿನ ಪ್ರದೇಶಗಳನ್ನು ಗೆದ್ದು ರಾಜ್ಯವನ್ನು ಬಿಜಾಪುರ ರಾಜ್ಯದ ಗಡಿಯವರೆಗೂ ವಿಸ್ತರಿಸಿದರು. ೧೬೮೭ರಲ್ಲಿ ಖಾಸಿಂಖಾನನಿಂದ ತುಮಕೂರನ್ನೂ, ಹಿಂದೆ ತಮ್ಮ ತಂದೆ ಗೆದ್ದಿದ್ದ ಚಿಕ್ಕನಾಯಕನ ಹಳ್ಳಿಯನ್ನು ಮರಾಠಾ ವೆಂಕೋಜಿರಾಯ ವಶಪಡಿಸಿಕೊಂಡಿದ್ದರಿಂದ ಅದನ್ನೂ ಪುನಃ ಗೆದ್ದುದರ ಜೊತೆಗೆ ಮರಾಠನಿಂದ ಕಂದಿಕೆರೆ, ತ್ಯಾಮಗೊಂಡ್ಲು, ಮನುಗೊಂಡುದುರ್ಗ, ವಾಮಲೂರು, ಧರ್ಮಪುರಿ ಹಾಗೂ ನ್ಯಾಮತಿಗಳನ್ನೂ ವಶಪಡಿಸಿಕೊಂಡರು. ೧೬೮೮ರಲ್ಲಿ ಶಂಖಗಿರಿಯ ಚಿಕ್ಕಯ್ಯನಿಂದ ಪೇರೂರು, ಅರಸರವಾಣಿ, ಹೊಸಕೋಟೆ ಹಾಗೂ ಶಂಖಗಿರಿಗಳನ್ನೂ ಶಾಲ್ಯದವರಿಂದ ಮನ್ನಾರಗುಡಿಯನ್ನೂ ಗೆದ್ದುಕೊಂಡರು.

ಮರಾಠ ಘೋರಜಿಯಿಂದ ಅನಂತಗಿರಿಯನ್ನೂ ಕೊಯಮುತ್ತೂರಿನ ಗುರಿಕಾರನಾದ ನಿಂಗರಾಜಯ್ಯನಿಂದ ಕಾವೇರಿಪಟ್ಟಣ ಮತ್ತು ಕುಂತೂರು ದುರ್ಗವನ್ನೂ ಬಾಗಡಿ ಪಾಳೆಯಗಾರನಿಂದ ಬಾಗಡಿಯನ್ನೂ ತಮ್ಮ ರಾಜ್ಯಕ್ಕೆ ಸೇರಿಸಿಕೊಂಡರು. ೧೬೯೦ರಲ್ಲಿ ಇಕ್ಕೇರಿ ಅರಸನಿಂದ ಹಾರ್‍ನಹಳ್ಳಿ, ಬಾಣಾವರ, ಕಡೂರು, ಸಕ್ಕರೆಪಟ್ಟಣ, ಬೇಲೂರು, ವಸ್ತಾರೆ ಮತ್ತು ಹಾಸನಗಳನ್ನು ಗೆದ್ದು ರಾಜ್ಯವನ್ನು ಬಾಬಾಬುಡನ್‌ಗಿರಿಯವರೆಗೆ ವಿಸ್ತರಿಸಿದರು. ಐಗೂರು ಕೃಷ್ಣಪ್ಪನಾಯಕನಿಂದ ಐಗೂರು, ಚಿಕ್ಕಮಗಳೂರು, ಮಹಾರಾಜನ ದುರ್ಗ, ಅರಕಲಗೂಡು, ಸಕಲೇಶಪುರ ಹಾಗೂ ಕೊಡ್ಲಿಪೇಟೆಗಳನ್ನೂ ಚಿಕ್ಕಪ್ಪನಾಯಕನಿಂದ ೧೬೯೭ರಲ್ಲಿ ಶಾಲ್ಯ, ನಾಮಕಲ್ಲು, ತಮ್ಮಂಬಟ್ಟೆಗಳನ್ನೂ ಪಡೆದರು. ೧೬೭೫ರ ಇವರ ಒಂದು ಶಾಸನ ಮಧುರೆಯ ಚೊಕ್ಕನಾಥನಾಯಕನನ್ನು ಸೋಲಿಸಿ ತ್ರಿಪುರ ಹಾಗೂ ಅನಂತಪುರಿಗಳನ್ನು ಇವರು ಸಾಧಿಸಿಕೊಂಡಿದ್ದನ್ನು ಹೇಳುತ್ತದೆ.

೧೬೮೭ರಲ್ಲಿ ಬೆಂಗಳೂರನ್ನು ಮರಾಠರಿಂದ ಮೂರು ಲಕ್ಷ ರೂಪಾಯಿಗಳಿಗೆ ಇವರು ಕೊಂಡುಕೊಂಡರು. ಆದರೆ ಅಷ್ಟರಲ್ಲಿ ಮೊಗಲ್ ಸೇನಾನಿ ಖಾಸಿಂಖಾನ ಅದನ್ನು ವಶಪಡಿಸಿಕೊಂಡನಾದರೂ ಚಿಕ್ಕದೇವರಾಜ ಒಡೆಯರು ಅವನನ್ನೋಡಿಸಿ ಬೆಂಗಳೂರನ್ನು ಪುನಃ ಗೆದ್ದುಕೊಂಡರು. ಅಲ್ಲಿ ತಮ್ಮ ಅಧಿಕಾರಿಗಳನ್ನು ನೇಮಿಸಿ, ೧೨,೦೦೦ ಮಗ್ಗದ (ದೇವಾಂಗ) ಜನರನ್ನು ತಂದಿರಿಸಿ ಜವಳಿಯು ಅರಮನೆ ಹಾಗೂ ಎಲ್ಲ ಸೀಮೆಗಳಿಗೂ ಹೋಗುವಂತೆ ಏರ್ಪಾಟು ಮಾಡಿದ್ದರಿಂದ ಬೆಂಗಳೂರು ವಾಣಿಜ್ಯ ಕೇಂದ್ರವಾಗಿ ಬೆಳೆಯಿತು.

ಮಾಗಡಿಗೆ ಮುತ್ತಿಗೆ ಹಾಕಿ ಕೆಂಪೇಗೌಡನಿಂದ ಕಪ್ಪವನ್ನು ಸ್ವೀಕರಿಸಿದರು. ಮಧುರೆ, ತಿರುಚಿನಾಪಳ್ಳಿ ಮತ್ತಿತರ ಪಾಳೆಯಗಾರರಿಂದ ಬರಬೇಕಾದ ಕಪ್ಪ ೧೦–೧೨ ವರ್ಷಗಳಿಂದ ಬಾರದೆ ಇದ್ದಾಗ ಚಿಕ್ಕದೇವರಾಜ ಒಡೆಯರು ತಮ್ಮ ಸೇನಾನಿಯಾದ ಕುಮಾರಯ್ಯನನ್ನು ಸೈನ್ಯದೊಂದಿಗೆ ಆ ಪ್ರಾಂತಗಳಿಗೆ ಕಳುಹಿಸಿದರು. ಇವರು ಕೊಡಗು ಮತ್ತು ಮಲೆಯಾಳ

ಪ್ರಾಂತಗಳಿಂದಲೂ ಆನೆ, ಕುದುರೆ, ಧನ–ಧಾನ್ಯಾದಿ ಕಪ್ಪಗಳನ್ನೂ ಪಡೆದುದಾಗಿ ಹೇಳಿಕೆಗಳಿವೆ. ೧೬೮೬ರ ಶಾಸನವೊಂದರಲ್ಲಿ ಇವರು ನಾಸಿಕದ (ಪಂಚವಟಿ) ಮರಾಠರನ್ನು ಸೋಲಿಸಿ ದಾದಾಜಿಯನ್ನು ಸಮರದಲ್ಲಿ ಕೊಂದರೆಂದೂ ಶಿವಾಜಿಯ ಮಗನಾದ ಸಂಭಾಜಿ, ಶಿವಾಜಿಯ ತಮ್ಮನಾದ ಏಕೋಜಿ (ವೆಂಕೋಜಿ) ಹಾಗೂ ಇಕ್ಕೇರಿಯ ಬಸವನನ್ನೂ ಹೆದರಿಸಿದರೆಂದೂ ಹೇಳುತ್ತದೆ.

ಚಿಕ್ಕದೇವರಾಜ ಒಡೆಯರು ಮೊಗಲ್ ಸೇನಾನಿ ಖಾಸಿಂಖಾನನ ಮೂಲಕ ಔರಂಗಜೇಬನ ಸಖ್ಯವನ್ನು ಬೆಳೆಸಿ ಅಮೂಲ್ಯ ಕಾಣಿಕೆಗಳನ್ನೂ ನೀಡಿ ಅವನಿಂದ 'ರಾಜಾ ಜಗದೇವ್' ಎಂಬ ಬಿರುದನ್ನೂ, ಮೊಹರನ್ನೂ ಹಾಗೂ ದಂತದ ಸಿಂಹಾಸನದ ಮೇಲೆ ಆಸೀನರಾಗಲು ಅನುಮತಿಯನ್ನೂ ಪಡೆದರು. ಇವರ ಆಡಳಿತಾವಧಿಯಲ್ಲಿ ರಾಜ್ಯವು ದಕ್ಷಿಣದಲ್ಲಿ ಪಳನಿ ಮತ್ತು ಅಣ್ಣಾಮಲೈಗಳಿಂದ ಉತ್ತರದಲ್ಲಿ ಮಿಡಗೇಶಿಯವರೆಗೂ ಪೂರ್ವದಲ್ಲಿ ಬಾರಾಮಹಲ್‌ನಿಂದ ಪಶ್ಚಿಮದಲ್ಲಿ ಕೊಡಗು ಮತ್ತು ಬಾಲಂಗಳವರೆಗೂ ವ್ಯಾಪಿಸಿತ್ತು.

ದಿಗ್ವಿಜಯಗಳ ಮೂಲಕ ವಿಸ್ತರಿಸಿದ ತಮ್ಮ ರಾಜ್ಯದ ಸುಗಮ ಆಡಳಿತ ನಿರ್ವಹಣೆಗೆ ಹೊಸ ವ್ಯವಸ್ಥೆಗಳನ್ನು ಜಾರಿಗೊಳಿಸಿ ಮಂತ್ರಾಲೋಚನಾಸಭೆಯನ್ನು ರೂಪಿಸಿದರು. ಮೊಗಲ್ ಚಕ್ರವರ್ತಿ ಔರಂಗಜೇಬನ ಸರ್ಕಾರದಲ್ಲಿ ೧೮ ಇಲಾಖೆಗಳಿರುವುದಾಗಿ ತಿಳಿದು ತಾವೂ ಆತಾರಾ ಕಛೇರಿಗಳನ್ನು ತೆರೆದರು. ೮ ರಿಂದ ೧೬ ಗ್ರಾಮಗಳ ಗುಂಪನ್ನು ಸೇರಿಸಿ ಹೋಬಳಿಗಳನ್ನಾಗಿಸಿ ಅವುಗಳಿಗೆ ಅಧಿಕಾರಿಗಳನ್ನು ನೇಮಿಸಿ ಅವರ ವೇತನವನ್ನು ನಿಗದಿಗೊಳಿಸಿದರು. ರಾಜ್ಯದಲ್ಲೆಲ್ಲ ಅಂಚೆ ಪದ್ಧತಿಯನ್ನು ಜಾರಿಗೆ ತಂದರು. ಈ ಇಲಾಖೆಯು ಗೂಢಚರ್ಯೆಯ ಕೆಲಸವನ್ನೂ ನಿರ್ವಹಿಸುತ್ತಿತ್ತು. ಸಾಮ್ರಾಜ್ಯದ ವಿವಿಧ ಕಂದಾಯ ಮೂಲಗಳನ್ನು ಕ್ರಮಬದ್ಧಗೊಳಿಸಿ ರಾಜ್ಯದ ಬೊಕ್ಕಸವನ್ನು ಹೆಚ್ಚಿಸಿ ಅತ್ಯಂತ ಸ್ಥಿತಿವಂತ ರಾಜರಾಗಿ 'ನವಕೋಟಿನಾರಾಯಣ' ಎಂಬ ಬಿರುದನ್ನೂ ಪಡೆದರು. ಅಳತೆ ಹಾಗೂ ತೂಕಗಳನ್ನು ವ್ಯವಸ್ಥಿತಗೊಳಿಸಿ ಅವುಗಳ ಮೇಲೆ ರಾಜಮುದ್ರೆಯನ್ನು ಹಾಕಿಸಿದರಲ್ಲದೆ ಅಧಿಕಾರಿಗಳಿಗೂ ರಾಜಮುದ್ರೆಯನ್ನೊದಗಿಸಿದರು. ಶ್ರೀರಂಗಪಟ್ಟಣದ ಪಶ್ಚಿಮದಲ್ಲಿ ಕಾವೇರಿ ನದಿಗೆ ಕಟ್ಟೆಯನ್ನು ಕಟ್ಟಿ ಎರಡು ಕಾಲುವೆಗಳನ್ನು ನಿರ್ಮಿಸಿ ರಾಜ್ಯದ ಆರ್ಥಿಕ ಉತ್ಪನ್ನ ಅಧಿಕಗೊಳ್ಳುವಂತೆ ಮಾಡಿದರು.

ರಾಜಧಾನಿ ಶ್ರೀರಂಗಪಟ್ಟಣವು ದಕ್ಷಿಣಭಾರತದ ಮುಖ್ಯ ರಾಜಕೀಯ ಕೇಂದ್ರವಾಗಿ, ಸಂಪದ್ಭರಿತ ಪಟ್ಟಣವಾಗಿ ಬೆಳೆದುದಲ್ಲದೆ ಪ್ರಸಿದ್ಧ ವಿದ್ಯಾಕೇಂದ್ರವೂ ಆಗಿದ್ದಿತು. ಇವರು ವೈಷ್ಣವ ಧರ್ಮಾವಲಂಭಿಯಾದರೂ ಇತರ ಮತಗಳಿಗೂ ಉತ್ತೇಜನವಿತ್ತು ಸರ್ವಧರ್ಮಸಮನ್ವಯಿಯಾದರು. ರಾಜಧಾನಿ ಸೇರಿದಂತೆ ಹಲವು ಕಡೆ ಅನೇಕ ದೇವಾಲಯಗಳನ್ನು ನಿರ್ಮಿಸಿದರು. ಇವರ ಆಳ್ವಿಕೆಯಲ್ಲಿ ಹೊರಡಿಸಲ್ಪಟ್ಟಿರುವ ಮೈಸೂರಿನ ತಾಮ್ರ ಶಾಸನ, ರಾಣಿ ದೊಡ್ಡಅರಸಿನವರು ಮಾಡಿಸಿದ ದೇವರಾಯ ಅಗ್ರಹಾರದ ಪ್ರಸನ್ನ ಗೋವರ್ಧನೋದ್ಧರಣ ಗೋಪಾಲಸ್ವಾಮಿಯವರ ಶ್ರೀ ಭಂಡಾರಕ್ಕೆ ಬರಸಿಕೊಟ್ಟ

ಭೂದಾನವನ್ನು ದಾಖಲಿಸಿದೆ. ಬೆಂಗಳೂರಿನ ಕೋಟೆ ವೆಂಕಟರಮಣ ದೇವಾಲಯ ಇವರ ಕಾಲದಲ್ಲಿ ನಿರ್ಮಾಣಗೊಂಡಿತು. ಚಿಕ್ಕದೇವರಾಜರು ಸ್ವತಃ ಕವಿಯೂ ಆಗಿದ್ದು ಗೀತಗೋಪಾಲ, ಚಿಕ್ಕದೇವರಾಜ ಬಿನ್ನಪ, ಭಾಗವತ, ಭಾರತ ಮತ್ತು ಶೇಷಧರ್ಮ ಎಂಬ ಮೌಲ್ಯಭರಿತ ಕೃತಿಗಳನ್ನೂ ರಚಿಸಿದರಲ್ಲದೆ ಅನೇಕ ಕವಿ, ಕವಯಿತ್ರಿಯರಿಗೂ ಆಶ್ರಯ ನೀಡಿದ್ದರು. ಇವರು ೩೨ ವರ್ಷಗಳ ಕಾಲ ವಿಜೃಂಭಣೆಯಿಂದ ಅಧಿಕಾರ ನಡೆಸಿ ೧೭೦೪ರಲ್ಲಿ ನಿಧನಗೊಂಡರು.

**ಕಂಠೀರವ ನರಸರಾಜ ಒಡೆಯರು II (೧೭೦೪–೧೭೧೩)** : ಚಿಕ್ಕದೇವರಾಜ ಒಡೆಯರ ತನುಜರಾದ ಇವರು ಜನ್ಮತಃ ಮೂಕರಿದ್ದು, ಮೂಕರಸು ಎಂಬ ಅಡ್ಡ ಹೆಸರೂ ಇವರಿಗಿತ್ತು. ಆಗಿದಾಗ್ಯೂ ಅಮಾತ್ಯ ತಿರುಮಲಯ್ಯಂಗಾರನ ಪ್ರಭಾವದಿಂದ ಇವರಿಗೆ ಸಿಂಹಾಸನ ಲಭಿಸಿತು. ಅಧಿಕಾರವೇರಿದ ನಂತರ ಔರಂಗಜೇಬ್ ಮೈಸೂರು ರಾಜ್ಯವನ್ನು ಆಕ್ರಮಿಸಲು ಪ್ರಯತ್ನಿಸಿದಾಗ ಸ್ವಲ್ಪ ಮೊತ್ತವನ್ನು ಕಪ್ಪವಾಗಿ ಕೊಡಲು ಒಪ್ಪಿದರಾದರೂ ಕಾರಣಾಂತರಗಳಿಂದ ಔರಂಗಜೇಬನಿಗೆ ಸಲ್ಲಿಸದಿದ್ದಾಗ ಸೇನಾನಿ ಸಾದತುಲ್ಲಾಖಾನ್ ದಂಡೆತ್ತಿ ಬಂದು ಇವರಿಂದ ಅಪಾರ ಹಣವನ್ನು ವಸೂಲಿ ಮಾಡಿದ. ಇವರ ಕಾಲದಲ್ಲಿ ದಳವಾಯಿ ಕಂಠೀರವ, ಚಿಕ್ಕಬಳ್ಳಾಪುರವನ್ನು ವಶಪಡಿಸಿಕೊಳ್ಳಲು ಯತ್ನಿಸಿ ತಾನೇ ಪ್ರಾಣ ಕಳೆದುಕೊಂಡ. ಆದರೆ ಅವನ ಪುತ್ರನಾದ ಬಸವರಾಜ, ಚಿಕ್ಕಬಳ್ಳಾಪುರದ ಮುತ್ತಿಗೆಯನ್ನು ಮುಂದುವರಿಸಿ ಅಲ್ಲಿಂದ ಕಪ್ಪ ಪಡೆದುಕೊಂಡನೆಂದು ತೋರುತ್ತದೆ.

ಇಮ್ಮಡಿ ಕಂಠೀರವ ನರಸರಾಜರ ಕಾಲದಲ್ಲಿ ರಾಜ್ಯದ ಆಗುಹೋಗುಗಳು ದಳವಾಯಿಗಳ ಕೈಸೇರಿದವು. ಅದರಲ್ಲೂ ಕಳಲೆ ವಂಶದ ದಳವಾಯಿಗಳು ಪ್ರಮುಖ ಪಾತ್ರ ವಹಿಸಲಾರಂಭಿಸಿದರು. ಈ ವಂಶದ ಚೆಲುವಾಜಮ್ಮಣ್ಣಿ, ಕಂಠೀರವ ನರಸರಾಜರನ್ನು ಮದುವೆಯಾಗಿದ್ದಳು. ಕಂಠೀರವ ನರಸರಾಜರು ೧೭೧೩ರಲ್ಲಿ ಮೃತರಾದರು.

**ದೊಡ್ಡ ಕೃಷ್ಣರಾಜ ಒಡೆಯರು (೧೭೧೪–೧೭೩೨)** : ಇಮ್ಮಡಿ ಕಂಠೀರವ ನರಸರಾಜರ ಪುತ್ರರಾದ ಇವರು, ರಾಜ್ಯಾಡಳಿತ ದಳವಾಯಿಗಳ ಕೈವಶವಾಗಿದ್ದ ಪರಿಸ್ಥಿತಿಯಲ್ಲಿ ಸಿಂಹಾಸನವನ್ನೇರಿದ್ದು ದಕ್ಷರಿರಲಿಲ್ಲವಾಗಿ ಸಮೀಪವರ್ತಿಗಳಾದ ದಳವಾಯಿ ದೇವರಾಜ ಹಾಗೂ ಸರ್ವಾಧಿಕಾರಿ ನಂಜರಾಜ ಬಂಧುಗಳು ಇವರನ್ನು ತಮ್ಮ ಕೈಗೊಂಬೆಯಾಗಿ ಮಾಡಿಕೊಂಡು ಆಡಳಿತ ನಡೆಸುತ್ತಿದ್ದರು. ಇವರ ಕಾಲದಲ್ಲಿ ಬಾಲಾಘಾಟ್ ಪ್ರದೇಶವನ್ನು ಆಳುತ್ತಿದ್ದ ಸಾದತುಲ್ಲಾಖಾನ್ ಮೈಸೂರಿನ ಬೊಕ್ಕಸದ ಅಪಾರ ಸಂಪತ್ತನ್ನು ದೋಚುವ ಹವಣಿಕೆಯಿಂದ ಕಡಪ, ಕರ್ನೂಲ್, ಸವಣೂರಿನ ನವಾಬ ಹಾಗೂ ಗುತ್ತಿಯ ಮರಾಠ ನಾಯಕರನ್ನು ಕೂಡಿಕೊಂಡು ಮೈಸೂರಿನ ಮೇಲೆ ಆಕ್ರಮಣ ಮಾಡಲು ಸಿದ್ಧನಾಗಿದ್ದಾಗ ಮತ್ತೊಂದು ದಿಕ್ಕಿನಿಂದ ಶಿರಾದ ಅಮೀರ್‌ಖಾನನೂ ನುಗ್ಗಿ ಬಂದ. ಎರಡು ಸೈನ್ಯಗಳೂ ಶ್ರೀರಂಗಪಟ್ಟಣ ತಲುಪಿ ಒಟ್ಟಿಗೆ ಆ ನಗರವನ್ನು ಸಾದತ್ತುಲ್ಲಾಖಾನನ ನಾಯಕತ್ವದಲ್ಲಿ ಮುತ್ತಿದ್ದಾಗ ಹೆದರಿದ ಕೃಷ್ಣರಾಜರು ಒಂದು ಕೋಟಿ ರೂಪಾಯಿಗಳನ್ನು ಕೊಟ್ಟು ಆಕ್ರಮಣದಿಂದ ಪಾರಾದರು. ಯುದ್ಧದಲ್ಲಿ ಪಾಲ್ಗೊಂಡ ಐವರು ನಾಯಕರಿಗೂ

ತಲಾ ೧೨ ಲಕ್ಷ ರೂ.ಗಳನ್ನು ಕೊಟ್ಟು ಉಳಿದ ೪೦ ಲಕ್ಷ ರೂ.ಗಳನ್ನು ಸಾದತ್ತುಲ್ಲಾಖಾನ್ ತಾನೇ ಕಬಳಿಸಿದ. ದುರಾಶಾಪೀಡಿತರಾದ ಮರಾಠರು ಎರಡು ವರ್ಷಗಳ ಆನಂತರ ಮತ್ತೆ ಧಾಳಿ ಮಾಡಿ, ಕೃಷ್ಣರಾಜರಿಂದ ಪುನಃ ಹಣ ಪಡೆದರು. ಹೀಗೆ ಹಣ ಅಪವ್ಯಯವಾಗಿ ಬೊಕ್ಕಸ ಬರಿದಾಯಿತು. ಈ ನಷ್ಟವನ್ನು ತುಂಬಿಕೊಳ್ಳಲು ೧೭೨೮ರಲ್ಲಿ ಕೆಂಪೇಗೌಡನನ್ನು ಎದುರಿಸಿ, ಅವನನ್ನು ಸೆರೆ ಹಿಡಿದು, ಸಾವನದುರ್ಗದಲ್ಲಿ ಶೇಖರವಾಗಿದ್ದ ಹಣವನ್ನು ಇವರು ದೋಚಿಕೊಂಡರಾದರೂ ಆರ್ಥಿಕಸ್ಥಿತಿ ಉತ್ತಮಗೊಳ್ಳಲಿಲ್ಲ. ಕಷ್ಟ ಪರಂಪರೆಗಳನ್ನು ಅನುಭವಿಸಿ ೧೭೩೨ರಲ್ಲಿ ಮೃತರಾದರು.

**ಚಾಮರಾಜ ಒಡೆಯರು VI (೧೭೩೨-೧೭೩೪) :** ದೊಡ್ಡ ಕೃಷ್ಣರಾಜರಿಗೆ ಮಕ್ಕಳಿರಲಿಲ್ಲವಾದ್ದರಿಂದ ಅವಸಾನ ಕಾಲದಲ್ಲಿ ಅಂಕನಹಳ್ಳಿಯ ದೇವರಾಜ ಅರಸನ ಪುತ್ರನಾದ ಚಾಮರಾಜರನ್ನು ದತ್ತು ಸ್ವೀಕರಿಸಿ ಪಟ್ಟ ಕಟ್ಟಲು ರಾಣಿ ದೇವಾಜಮ್ಮನಿಗೆ ಆಣತಿ ನೀಡಿದ್ದರು. ದೇವಾಜಮ್ಮ ಪತಿಯ ಇಚ್ಛೆಯನ್ನು ಆ ವೇಳೆಗೆ ಆಸ್ಥಾನದಲ್ಲಿ ಪ್ರಾಬಲ್ಯಕ್ಕೆ ಬಂದಿದ್ದ ಸರ್ವಾಧಿಕಾರಿ ಕರಾಚೂರಿ ನಂಜರಾಜಯ್ಯ, ದಳವಾಯಿ ದೇವರಾಜಯ್ಯರಿಗೆ ವಿವರಿಸಿದಳು. ಕೂಡಲೇ ಅವರು ಚಾಮರಾಜನನ್ನು ಶ್ರೀರಂಗಪಟ್ಟಣಕ್ಕೆ ಬರಮಾಡಿಕೊಂಡು ೧೭೩೨ನೆಯ ಮಾರ್ಚ್ ೧೯ರಂದು ಪಟ್ಟಾಭಿಷೇಕವನ್ನು ನೆರವೇರಿಸಿದರು.

ಚಾಮರಾಜ ಒಡೆಯರು ಅಧಿಕಾರ ಪಡೆದ ನಂತರ ಹಲವು ತಿಂಗಳ ಕಾಲ ದಳವಾಯಿಗಳ ಪ್ರಾಬಲ್ಯವನ್ನು ಸಹಿಸಿಕೊಂಡಿದ್ದರು. ಆ ವೇಳೆಗೆ ಆಡಳಿತವೆಲ್ಲವೂ ಕಳಲೆ ಕುಟುಂಬದ ದಳವಾಯಿ ದೇವರಾಜಯ್ಯ ಹಾಗೂ ಕರಾಚೂರಿ ನಂಜರಾಜಯ್ಯರ ಹಿಡಿತದಲ್ಲಿತ್ತು. ರಾಜ್ಯದ ಆಡಳಿತ ಮತ್ತು ಹಣಕಾಸಿನ ವ್ಯವಹಾರದ ಜೊತೆಗೆ ಅರಮನೆಯ ಆಡಳಿತ ಹಾಗೂ ರಾಜನಿಗೆ ಸೇರಿದ ಜಮೀನುಗಳ ಉತ್ಪತ್ತಿ ಮೊದಲಾದ ಎಲ್ಲ ವಿಷಯಗಳ ಮೇಲ್ವಿಚಾರಣೆಯನ್ನೂ ದಳವಾಯಿಗಳೇ ನಿರ್ವಹಿಸುತ್ತಿದ್ದರು. ದಳವಾಯಿಗಳ ಸರ್ವಾಧಿಕಾರವನ್ನು ಕೊನೆಗಾಣಿಸಿ ಈ ದುಸ್ಥಿತಿಯಿಂದ ಪಾರಾಗಲು ಆರನೆಯ ಚಾಮರಾಜರು ೧೭೩೨ನೆಯ ಡಿಸೆಂಬರ್ ಮಾಹೆಯಲ್ಲಿ ನಿರ್ಧರಿಸಿದರು. ರಾಜನ ನಿರ್ಧಾರವನ್ನು ಸಂಚಿನಿಂದ ತಿಳಿದ ದಳವಾಯಿ ದೇವರಾಜಯ್ಯ, ದೇವಾಜಮ್ಮನಿಗೆ ದೂರು ಹೇಳುವುದರ ಮೂಲಕ ಅವಳ ಮನಸ್ಸನ್ನು ಗೆದ್ದು ತನಗೆ ಇಚ್ಛೆ ಬಂದಂತೆ ಅಧಿಕಾರ ಚಲಾಯಿಸಲು ಅವಳಿಂದ ವಾಗ್ದಾನ ಪಡೆದ. ಈ ಸಂಗತಿಯನ್ನು ತಿಳಿದ ಚಾಮರಾಜ ೧೭೩೨ನೆಯ ಜನವರಿಯಲ್ಲಿ ದೇವರಾಜಯ್ಯ ಹಾಗೂ ಸರ್ವಾಧಿಕಾರಿ ನಂಜರಾಜಯ್ಯನನ್ನೂ ಅಧಿಕಾರದಿಂದ ಕಿತ್ತು ಹಾಕಿ, ತಮ್ಮ ಆಪ್ತರನ್ನು ಅವರ ಸ್ಥಳದಲ್ಲಿ ನೇಮಿಸಿದರು.

ಆನಂತರ ಆರನೆಯ ಚಾಮರಾಜರು ಸ್ವತಂತ್ರವಾಗಿ ಆಡಳಿತ ನಡೆಸಿದರು. ತಮ್ಮ ಪೂರ್ವಿಕರಂತೆ ದೇವಾಲಯಗಳಿಗೂ ವಿದ್ವಾಂಸರಿಗೂ ದಾನಧರ್ಮಗಳನ್ನು ನೀಡಿದರು. ಶ್ರೀರಂಗಪಟ್ಟಣವು ಶ್ರೀಮಂತ ವರ್ತಕರಿಂದ ಕೂಡಿ ವ್ಯಾಪಾರ, ಧರ್ಮ

ಮತ್ತು ವಿದ್ವತ್ತಿನ ಕೇಂದ್ರವಾಯಿತು. ಆದರೆ ಚಾಮರಾಜರು ಬಹುಕಾಲ ರಾಜರಾಗಿ ಮುಂದುವರಿಯಲಿಲ್ಲ. ಪದಚ್ಯುತರಾದ ದಳವಾಯಿಗಳು ಚಾಮರಾಜರ ಆಳ್ವಿಕೆಯನ್ನು ಕೊನೆಗಾಣಿಸಲು ಸಮಯ ಕಾಯುತ್ತಿದ್ದರು. ಈ ಮಧ್ಯೆ ಚಾಮರಾಜ ಒಡೆಯರು ಹಲವು ಆರ್ಥಿಕ ಸುಧಾರಣೆಗಳನ್ನು ಕೈಗೊಂಡರು. ಅವರ ಸಾಕುತಾಯಿಯಾದ ರಾಣಿ ದೇವಾಜಮ್ಮ ಇತಿಮಿತಿಯಿಲ್ಲದೆ ದಾನ ಮಾಡುವುದರ ಜೊತೆಗೆ ಹೆಚ್ಚು ಸಂಖ್ಯೆಯಲ್ಲಿ ಸೇವಕರನ್ನು ಹೊಂದಿದ್ದಳು. ಚಾಮರಾಜರು ತರಲಿದ್ದ ಆರ್ಥಿಕ ಸುಧಾರಣೆಯಿಂದ ತಮಗೆ ತೊಂದರೆಯಾಗುವುದೆಂದು ಗ್ರಹಿಸಿದ ಹಲವರು ರಾಣಿಗೆ ಚಾಡಿ ಹೇಳತೊಡಗಿದರು. ಆ ಸಮಯವನ್ನೇ ಕಾಯುತ್ತಿದ್ದ ಕಳಲೆ ಸೋದರರು ವಿಶೇಷ ಹಣದಾಸೆಯನ್ನು ತೋರಿಸಿ ಸೈನ್ಯದಲ್ಲಿ ಒಡಕುಂಟು ಮಾಡಿ ರಾಜನ ಮೇಲೆ ತಿರುಗಿ ಬೀಳುವಂತೆ ಮಾಡಿ ತಾವೇ ಅದರ ಮುಖಂಡತ್ವವನ್ನು ವಹಿಸಿ ರಾತ್ರಿ ವೇಳೆಯಲ್ಲಿ ದಂಗೆಯನ್ನು ನಡೆಸಿದರು. ಕುಹಕವನ್ನರಿಯದ ಚಾಮರಾಜರು ದಳವಾಯಿ ದೇವರಾಜಯ್ಯನೊಡನೆ ಸೌಹಾರ್ದ ಒಪ್ಪಂದಕ್ಕೆ ಮುಂದಾದರು. ಆದರೆ ಸಮಯಸಾಧಕನಾದ ದಳವಾಯಿ ಅರಮನೆಯ ಬಾಗಿಲನ್ನು ಆನೆಯಿಂದ ಒಡೆಸಿ ಚಾಮರಾಜರಿಂದ ರಾಜತ್ವದ ಚಿಹ್ನೆಗಳನ್ನು ಕಸಿದುಕೊಂಡು ಅವರನ್ನು ೧೭೩೪ನೆಯ ಜೂನ್ ೧೦ರಂದು ಪದಚ್ಯುತಗೊಳಿಸಿ ಸೆರೆಮನೆಗೆ ಕಳುಹಿಸಿದ. ಆನಂತರ ಚಾಮರಾಜನನ್ನು ಅವರ ಮೂವರು ಪತ್ನಿಯರ ಸಮೇತವಾಗಿ ಕಬ್ಬಾಳದುರ್ಗದ ಸೆರೆಮನೆಯಲ್ಲಿಡಲಾಯಿತು. ಚಾಮರಾಜರು ಸೆರೆಯಾದ ಸ್ವಲ್ಪ ಕಾಲದಲ್ಲೇ ಅನಾರೋಗ್ಯಕ್ಕೆ ತುತ್ತಾಗಿ ಮರಣ ಹೊಂದಿದರು.

**ಇಮ್ಮಡಿ ಕೃಷ್ಣರಾಜ ಒಡೆಯರು (೧೭೩೪–೧೭೬೬) :** ದೊಡ್ಡ ಕೃಷ್ಣರಾಜರ ದ್ವಿತೀಯ ದತ್ತುಪುತ್ರರಾದ ಇವರು, ಮೊದಲನೆಯ ದತ್ತುಪುತ್ರ ಚಾಮರಾಜರ ನಂತರ, ತಮ್ಮ ಐದನೆಯ ವರ್ಷದಲ್ಲಿ ಸಿಂಹಾಸನಾರೋಹಣ ಮಾಡಿದರು. ಇವರ ಕಾಲದಲ್ಲೂ ದಳವಾಯಿ ನಂಜರಾಜಯ್ಯ ಹಾಗೂ ದೇವರಾಜಯ್ಯ ಸೋದರರು ಸರ್ವಶಕ್ತರಾಗಿದ್ದು, ನಂಜರಾಜಯ್ಯನ ಕೈವಾಡ ಕೊನೆಯವರೆಗೂ ನಡೆಯಿತು. ದೂರಾಲೋಚನೆಯಿಂದ ತನ್ನ ಮಗಳನ್ನು ಒಡೆಯರಿಗೆ ಧಾರೆಯೆರೆದು ಕೊಟ್ಟ ನಂಜರಾಜ ಸ್ವಾರ್ಥ ಸಾಧನೆಯೇ ಮೂಲಗುರಿಯಾಗಿ ತನ್ನ ಸರ್ವಾಧಿಕಾರವನ್ನು ಬಲಪಡಿಸಲು ತೀವ್ರ ಪ್ರಯತ್ನ ಮಾಡಿದ.

ಕಾಲಾಂತರದಲ್ಲಿ ದಳವಾಯಿ ಸೋದರರಲ್ಲಿ ಉಂಟಾದ ಒಡಕನ್ನು ಸದುಪಯೋಗಪಡಿಸಿಕೊಳ್ಳಲು ಯೋಚಿಸಿದ ಇಮ್ಮಡಿ ಕೃಷ್ಣರಾಜರು ಅಂದಿನ ಹಲವಾರು ಕದನಗಳಲ್ಲಿ ಕೀರ್ತಿಗಳಿಸಿದ್ದ ಹೈದರಾಲಿಯ ನೆರವನ್ನು ಬೇಡಿದರು. ತನ್ನ ಅಧಿಕಾರ ವಿಸ್ತರಣೆಯನ್ನು ತೀವ್ರವಾಗಿ ಚಿಂತಿಸುತ್ತಿದ್ದ ತೀಕ್ಷ್ಣಮತಿಯಾದ ಹೈದರನಿಗೆ ಈ ಬೇಡಿಕೆ ಸದವಕಾಶನ್ನೊದಗಿಸಿತಾದರೂ ರಾಜರ ಅದೃಷ್ಟ ಆಗಲೂ ಕುದುರಲಿಲ್ಲ. ನಂಜರಾಜನನ್ನು ಕೆಳಗಿಳಿಸಿದ ಹೈದರ್ ಅಧಿಕಾರವನ್ನು ತಾನೇ ವಹಿಸಿಕೊಂಡು ರಾಜನಿಗೆ ಕೇವಲ ಮೂರು ಲಕ್ಷ ವರಹಗಳನ್ನು ಮಾತ್ರ ನೀಡುತ್ತಿದ್ದ. ಇಮ್ಮಡಿ ಕೃಷ್ಣರಾಜರು ೧೭೬೬ರಲ್ಲಿ ನಿಧನಗೊಂಡಾಗ, ಹೈದರ್ ಅವರ ಹಿರಿಯ ಮಗ ನಂಜರಾಜನಿಗೆ ಪಟ್ಟ ಕಟ್ಟಿದರೂ

ರಾಜನ ಭತ್ಯವನ್ನೂ ನಿಲ್ಲಿಸಿ ಅರಮನೆಯ ಆಭರಣಗಳನ್ನೆಲ್ಲ ಕಸಿದುಕೊಂಡು ತನ್ನ ಸ್ವಂತ ಭಟರನ್ನೇ ಅರಮನೆಯ ಕಾವಲಿಗೆ ನಿಲ್ಲಿಸಿದ.

**ನಂಜರಾಜ ಒಡೆಯರು (೧೭೬೬-೧೭೭೦) :** ಇಮ್ಮಡಿ ಕೃಷ್ಣರಾಜ ಒಡೆಯರು ನಿಧನಗೊಂಡಾಗ (೧೭೬೬) ಪಟ್ಟಕ್ಕೇರಿದ ೧೮ ವರ್ಷದ ಯುವಕ ನಂಜರಾಜರು ಹೈದರನ ಹತೋಟಿಯಲ್ಲಿ ಇರಲು ಇಷ್ಟಪಡಲಿಲ್ಲ. ಇವರ ಸ್ವತಂತ್ರ ಪ್ರವೃತ್ತಿಯನ್ನು ಅರಿತ ಹೈದರ್ ರಾಜರಿಗೆ ಸಂದಾಯವಾಗುತ್ತಿದ್ದ ಮೂರು ಲಕ್ಷ ವರಹಗಳನ್ನು ನಿಲ್ಲಿಸಿ, ಅರಮನೆಯ ನಗನಾಣ್ಯಗಳನ್ನು ಕಸಿದುಕೊಂಡು ಇವರ ಸ್ವಾತಂತ್ರ್ಯವನ್ನೂ ಮೊಟಕುಗೊಳಿಸಿದ. ಸೇಡನ್ನು ತೀರಿಸಿಕೊಳ್ಳುವ ಉದ್ದೇಶದಿಂದ ನಂಜರಾಜರು, ಹೈದರ್ ಮಲಬಾರಿನಲ್ಲಿ ತೇಜೋವಧೇ ಹೊಂದಿದ ಸನ್ನಿವೇಶವನ್ನು ಉಪಯೋಗಿಸಿಕೊಂಡು ಅವನನ್ನು ಅಧಿಕಾರದಿಂದ ಕಿತ್ತೊಗೆಯಲು ಪ್ರಯತ್ನಪಟ್ಟರು. ಈ ಗುರಿಯನ್ನು ಸಾಧಿಸುವುದಕ್ಕಾಗಿ ಮೈಸೂರು ರಾಜರೊಡನೆ ಮೈತ್ರಿಯಿಂದಿದ್ದ ಮರಾಠರೊಡನೆ ಸಂಧಾನ ನಡೆಸಿ, ಹೈದರನ ನಿಗ್ರಹಕ್ಕೆ ಸನ್ನದ್ಧರಾದರು. ಆದರೆ ಸಹಕಾರಿಯಾಗಲು ಬಂದವರ ಸ್ವಾರ್ಥಸಾಧನೆ ನಂಜರಾಜರ ಉದ್ದೇಶಕ್ಕೆ ಧಕ್ಕೆತಂದಿತು. ಮೈಸೂರಿನ ಮೇಲೆ ಧಾಳಿ ನಡೆಸುವ ಯತ್ನದಲ್ಲಿ ಮರಾಠರು ಹೈದರಬಾದಿನ ನಿಜಾಮನೊಡನೆ ಸೇರಿ ತಮ್ಮ ಪ್ರತಿಷ್ಠೆಯನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನಿಸಿದರು. ಮಾಧವರಾಯನ ನೇತೃತ್ವದಲ್ಲಿ ಮರಾಠರು ಮೈಸೂರು ರಾಜ್ಯದಲ್ಲಿ ಕಾಣಿಸಿಕೊಂಡಾಗ, ಹೈದರ್ ಅವರನ್ನು ತಡೆಯಲು ಯತ್ನಿಸಿ ವಿಫಲನಾದ. ಆದರೆ ಅವರೊಡನೆ ಒಪ್ಪಂದವನ್ನು ಮಾಡಿಕೊಂಡ. ಹೈದರ್ ಅವರಿಗೆ ೩೫ ಲಕ್ಷ ರೂಪಾಯಿಗಳನ್ನು ಕೊಡಬೇಕಾಯಿತು. ಮರಾಠರ ಸಹಾಯಕ್ಕೆ ಬಂದ ನಿಜಾಮನೊಡನೆ ಹೈದರ್ ಸ್ನೇಹ ಸಂಬಂಧವನ್ನು ಬೆಳೆಸಿಕೊಂಡಿದ್ದರಿಂದ ನಂಜರಾಜರಿಗೆ ಲಾಭವೇನೂ ಆಗಲಿಲ್ಲ. ಹೈದರನ ಕೂಪದಲ್ಲೆ ತನ್ನ ಜೀವಮಾನವನ್ನು ಕಳೆದು ೧೭೭೦ರಲ್ಲಿ ನಿಗೂಢ ಮರಣಕ್ಕೀಡಾದರು.

**ಎಂಟನೆಯ ಬೆಟ್ಟದ ಚಾಮರಾಜ ಒಡೆಯರು (೧೭೭೦-೧೭೭೬) :** ಇವರು ಇಮ್ಮಡಿ ಕೃಷ್ಣರಾಜನ ಕಿರಿಯ ಪುತ್ರರು. ಅಣ್ಣ ನಂಜರಾಜ ನಿಧನರಾದ ನಂತರ ೧೧ ವರ್ಷದ ಬಾಲಕನಿಗೆ ಹೈದರ್ ಪಟ್ಟಕಟ್ಟಿದ. ಹಲವು ಸಮಕಾಲೀನ ಶಾಸನಗಳು ಮತ್ತು ಅಧಿಕೃತ ದಾಖಲೆಗಳು ಬೆಟ್ಟದ ಚಾಮರಾಜನನ್ನು, ರಾಜನೆಂದೂ ಹೈದರನನ್ನು ಸರ್ವಾಧಿಕಾರಿಯೆಂದೂ ಉಲ್ಲೇಖಿಸುತ್ತವೆ. ಆಡಳಿತಾಧಿಕಾರ ಹೈದರನ ವಶದಲ್ಲಿತ್ತು. ಬೆಟ್ಟದ ಚಾಮರಾಜರು ತಮ್ಮ ೧೭ನೆಯ ವಯಸ್ಸಿನಲ್ಲಿ (೧೭೭೬) ಅಕಾಲ ಮರಣಕ್ಕೀಡಾದರು. ಅವರ ಮರಣ ವಿಷಪ್ರಾಶನದಿಂದ ಸಂಭವಿಸಿತೆಂದೂ ಅದಕ್ಕೆ ಹೈದರನೇ ಕಾರಣನೆಂದೂ ಅಭಿಪ್ರಾಯವಿದೆ.

**ಖಾಸಾ ಚಾಮರಾಜ ಒಡೆಯರು (೧೭೭೬-೧೭೯೬) :** ಏಳನೆಯ ಚಾಮರಾಜ ಒಡೆಯರ್ ಸಂತಾನವಿಲ್ಲದೆ ಸಾವನ್ನಪ್ಪಿದಾಗ ಹೈದರಾಲಿ ಕಾರುಗಳ್ಳಿಯ ಕುಟುಂಬದ ಬಾಲಕ ಚಾಮರಾಜನನ್ನು ಸಿಂಹಾಸನಕ್ಕೆ ಆರಿಸಿದ. ಹಿಂದಿನ ರಾಜನ ಮರಣಾನಂತರ

ಉತ್ತರಾಧಿಕಾರಿಯನ್ನು ಆಯ್ಕೆ ಮಾಡಲು ಹೈದರ್, ರಾಜಕುಟುಂಬಕ್ಕೆ ಸಂಬಂಧಿಸಿದ ಅನೇಕ ಬಾಲಕರನ್ನು ಕರೆಸಿ ಅರಮನೆಯಲ್ಲಿ ಹಣ್ಣು ಹಂಪಲುಗಳನ್ನೂ ಇತರ ಅನೇಕ ಪದಾರ್ಥಗಳನ್ನೂ ಇಟ್ಟು ಯಾವುದು ಬೇಕೋ ಅದನ್ನು ಆರಿಸಿಕೊಳ್ಳುವಂತೆ ಸೂಚಿಸಿದ. ಬೇರೆ ಬೇರೆ ಬಾಲಕರು ತಿಂಡಿತಿನಿಸುಗಳನ್ನು ಆರಿಸಿಕೊಳ್ಳುತ್ತಿದ್ದಾಗ ಬಾಲಕ ಚಾಮರಾಜ ಒಂದು ಖಡ್ಗ, ಕನ್ನಡಿ ಮತ್ತು ನಿಂಬೆಹಣ್ಣನ್ನು ಆರಿಸಿಕೊಂಡ. ಇದನ್ನು ಮೆಚ್ಚಿದ ಹೈದರ್ ಚಾಮರಾಜನನ್ನು ಉತ್ತರಾಧಿಕಾರಿಯೆಂದು ನಾಮಕರಣ ಮಾಡಿದ ಎಂಬ ಕಥೆ ಪ್ರಚಲಿತವಾಗಿದೆ. ಚಾಮರಾಜ ನೆಪಮಾತ್ರಕ್ಕೆ ರಾಜನಾಗಿದ್ದರೂ ಹೈದರ್ ಸರ್ವಾಧಿಕಾರಿಯಾಗಿದ್ದ. ಹೈದರನ ಪ್ರಾಬಲ್ಯವನ್ನು ಕೊನೆಗಾಣಿಸಿ ರಾಜಮನೆತನದ ಅಧಿಕಾರವನ್ನು ಪುನಃ ಸ್ಥಾಪಿಸಲು ನಡೆದ ಯತ್ನಗಳು ಫಲಕಾರಿಯಾಗಲಿಲ್ಲ. ಚಾಮರಾಜರು ೧೭೯೬ರಲ್ಲಿ ಸಿಡುಬು ರೋಗಕ್ಕೆ ತುತ್ತಾಗಿ ನಿಧನರಾದರು. ಆಗ ಸರ್ವಾಧಿಕಾರಿಯಾಗಿದ್ದ ಟಿಪ್ಪು. ಉತ್ತರಾಧಿಕಾರಿಯಾಗಬೇಕಾಗಿದ್ದ ಚಾಮರಾಜರ ಪುತ್ರ ಮೂರನೆಯ ಕೃಷ್ಣರಾಜ ಒಡೆಯರು ಆಗ ಇನ್ನೂ ಕೇವಲ ಎರಡು ವರ್ಷದ ಬಾಲಕರಾಗಿದ್ದರು. ಈ ಅವಧಿಯಲ್ಲಿ ಮೈಸೂರು ಸಂಸ್ಥಾನದಲ್ಲಿ ಹೈದರಾಲಿ ಹಾಗೂ ಅವನ ಮಗ ಟಿಪ್ಪು ಸುಲ್ತಾನರು ಸರ್ವಾಧಿಕಾರಿಗಳಾದರು. ಇವರಿಗೆ ನಿಷ್ಠೆಯಿಂದ ಸೇವೆ ಸಲ್ಲಿಸಿದವರಲ್ಲಿ ದಿವಾನ್ ಪೂರ್ಣಯ್ಯನವರ ಹೆಸರು ಉಲ್ಲೇಖಾರ್ಹ.

**ಹೈದರ್ ಅಲಿ (೧೭೬೧–೧೭೮೨) :** ಮೈಸೂರು ಸಂಸ್ಥಾನದ ಸುಲ್ತಾನನಾದ ಇವನು ೧೭೨೧ರಲ್ಲಿ ಕೋಲಾರ ಜಿಲ್ಲೆಯ ಬೂದಿಕೋಟೆಯಲ್ಲಿ ಜನಿಸಿದ. ಇವನ ತಂದೆ ಫತೆ ಮಹಮ್ಮದನು ಶಿರಾದ ನವಾಬನ ಸೇವೆಯಲ್ಲಿದ್ದು, ಹೈದರ್ ಬಾಲ್ಯವನ್ನು ಕಾಡಿನಲ್ಲಿ ಅಲೆಯುತ್ತ ಬೇಟೆಯಾಡಿ ಕಳೆದದ್ದರಿಂದ, ಶಾಲೆಗೆ ಹೋಗದೆ ಅನಕ್ಷರಸ್ಥನಾಗಿ ಉಳಿದ. ತರುವಾಯ ಇವನು ಮೈಸೂರು ದಳವಾಯಿ ನಂಜರಾಜನ ಸೈನ್ಯದಲ್ಲಿ ಸೇರಿ ದೇವನಹಳ್ಳಿ ದಂಡಯಾತ್ರೆಯಲ್ಲಿ ತನ್ನ ಶೌರ್ಯದಿಂದ ದಳವಾಯಿಯನ್ನು ಮೆಚ್ಚಿಸಿ ಬಹುಬೇಗ ಉನ್ನತ ಹುದ್ದೆ ಗಳಿಸಿದನು. ಇಂಗ್ಲೀಷರು ಮತ್ತು ಫ್ರೆಂಚರ ನಡುವೆ ನಡೆದ ಕರ್ನಾಟಕ(ಈಗಿನ ಆರ್ಕಾಟ್ ಭಾಗ) ಯುದ್ಧಗಳಲ್ಲಿ ತಿರುಚಿನಪಳ್ಳಿಯನ್ನು ಪಡೆಯುವ ಆಸೆಯಿಂದ ದಳವಾಯಿ ನಂಜರಾಜನು ಆರ್ಕಾಟ್‌ನ ನವಾಬ ಮಹಮ್ಮದ್ ಅಲಿಯನ್ನು ಬೆಂಬಲಿಸಿದ. ಈ ಯುದ್ಧದಲ್ಲಿ ಭಾಗವಹಿಸಲು ಹೈದರ್ ಅಲಿಯ ನೇತೃತ್ವದಲ್ಲಿ ಸೈನ್ಯದ ತುಕಡಿಯೊಂದನ್ನು ಕಳಿಸಿ ನವಾಬನಿಗೆ ನೆರವಾದ. ಗೆಲುವಿನ ನಂತರ ಮಹಮ್ಮದ್ ಅಲಿ ತನ್ನ ಮಾತನ್ನು ಮುರಿದು ತಿರುಚಿನಾಪಳ್ಳಿಯನ್ನು ನಂಜರಾಜನಿಗೆ ಒಪ್ಪಿಸಲು ನಿರಾಕರಿಸಿದ. ಇದರಿಂದ ಮೈಸೂರಿನವರು ಫ್ರೆಂಚರ ಕಡೆ ಸೇರಿಕೊಂಡು ಇಂಗ್ಲೀಷರ ವಿರುದ್ಧ ಹೋರಾಡುವಂತೆ ಮಾಡಿದರು. ಆ ಯುದ್ಧದಲ್ಲಿ ಹೈದರ್ ನಾಲ್ಕು ವರ್ಷಗಳಿಗೂ ಹೆಚ್ಚು ಕಾಲ ಪಾಲ್ಗೊಂಡು ಸೈನಿಕ ವಿಷಯಗಳಲ್ಲಿ ಅಪಾರ ಅನುಭವ ಗಳಿಸಿದನಲ್ಲದೆ ಯಥೇಚ್ಛ ಹಣ, ಆಭರಣ ಹಾಗೂ ಸೈನಿಕ ಸಲಕರಣೆಗಳನ್ನು ಪಡೆದ. ಇದರಿಂದ ಆಕರ್ಷಿತನಾದ ನಂಜರಾಜಯ್ಯ ಹೈದರ್‌ನನ್ನು ೨೦೦ ಕಾಲ್ದಳ ಮತ್ತು ಐವತ್ತು ಅಶ್ವಗಳ ಸೈನ್ಯಕ್ಕೆ ದಂಡನಾಯಕನನ್ನಾಗಿ ನೇಮಿಸಿದ. ಆನಂತರ ಹೈದರ್ ತನ್ನ ಸ್ವಸಾಮರ್ಥ್ಯದಿಂದ

ತನ್ನ ಸ್ಥಾನವನ್ನು ಉತ್ತಮಪಡಿಸಿಕೊಂಡನಲ್ಲದೆ ತನ್ನದೇ ಪ್ರಬಲ ಸೈನ್ಯವನ್ನು ಸಂಘಟಿಸಿಕೊಂಡ. ೧೭೫೦ರ ದಶಕದ ಕೊನೆಯ ಭಾಗದಲ್ಲಿ ಮೈಸೂರಿನ ಮೇಲೆ ಧಾಳಿ ಮಾಡಿದ ಮರಾಠರನ್ನು ಹಿಮ್ಮೆಟ್ಟಿಸಿ ಅದೇ ಸಂದರ್ಭದಲ್ಲಿ ಮೈಸೂರು ಸೈನ್ಯದಲ್ಲುಂಟಾದ ದಂಗೆಯನ್ನು ಅಡಗಿಸಿದ. ಇದರಿಂದ ಮೈಸೂರಿನ ಒಡೆಯರು ಹೈದರನನ್ನು ಆಸ್ಥಾನದಲ್ಲಿ ಗೌರವಿಸಿದರು. ೧೭೬೧ ರಲ್ಲಿ ನಂಜರಾಜಯ್ಯ ಅಧಿಕಾರ ಕಳೆದುಕೊಂಡಾಗ ಹೈದರ್ ಮೈಸೂರಿನ ದಳವಾಯಿಯಾಗಿ ಸರ್ವಾಧಿಕಾರವನ್ನು ಪಡೆದುಕೊಂಡ.

ಹೈದರ್ ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡ ಮೇಲೆ ರಾಜ್ಯದ ಸರಹದ್ದುಗಳನ್ನು ವಿಸ್ತರಿಸುವತ್ತ ಗಮನ ಹರಿಸಿದ. ೧೭೬೧ರಲ್ಲಿ ಇವನು ಆದೋನಿಯ ಬಸಲತ್‌ಜಂಗನೊಡನೆ ಕೂಡಿಕೊಂಡು ಶಿರಾವನ್ನು ವಶಪಡಿಸಿಕೊಂಡು, ಬಹುಬೇಗ ಹೊಸಕೋಟೆ, ದೊಡ್ಡ ಬಳ್ಳಾಪುರ, ಚಿಕ್ಕಬಳ್ಳಾಪುರ, ಪೆನುಕೊಂಡೆ, ಮಡಕಶಿರಾ, ನಂದಿದುರ್ಗ ಹಾಗೂ ಹರಪನಹಳ್ಳಿಗಳನ್ನು ಅಧೀನಕ್ಕೆ ತೆಗೆದುಕೊಂಡ. ಚಿತ್ರದುರ್ಗವನ್ನು ಜಯಿಸುವಲ್ಲಿ ಸ್ವಲ್ಪ ಮಟ್ಟಿನ ತೊಂದರೆ ಎದುರಿಸಿದರೂ ಕೊನೆಗೂ ವಶಪಡಿಸಿಕೊಂಡನು. ಬಿದನೂರು, ಬಳ್ಳಾರಿಗಳನ್ನು ವಶಪಡಿಸಿಕೊಂಡ ಹೈದರನಿಗೆ ಅಪಾರ ಐಶ್ವರ್ಯ ಸಿಕ್ಕಿತು. ಹೊನ್ನಾವರದಿಂದ ಮಂಗಳೂರುವರೆಗಿನ ಪಶ್ಚಿಮತೀರಪ್ರದೇಶ ಇವನಿಗೆ ಸ್ವಾಧೀನವಾಯಿತು. ಇವನು ಸೋಂದಾವನ್ನು ಸಹ ವಶಪಡಿಸಿಕೊಂಡು ತಾನು ಅಧಿಕಾರಕ್ಕೆ ಬಂದ ಮೂರು ವರ್ಷಗಳಲ್ಲಿ ರಾಜ್ಯವನ್ನು ಗೋವಾದವರಿಗೂ ವಿಸ್ತರಿಸಿದ.

ಮೈಸೂರಿನ ನಿರಂಕುಶ ಪ್ರಭುವಾಗಿ ಹೈದರ್ ರಾಜ್ಯದಲ್ಲಿ ಪೂರ್ಣ ಅಧಿಕಾರ ಸ್ಥಾಪಿಸಿದ. ಆತನನ್ನು ಅಧಿಕಾರದಿಂದ ಇಳಿಸಲು ರಾಜನ ಬೆಂಬಲಿಗರು ನಡೆಸಿದ ಪ್ರಯತ್ನವನ್ನು ವಿಫಲಗೊಳಿಸಿದ. ಆದರೂ ಹೈದರ್ ಚಾಮರಾಜರ ಅಧಿಕಾರವನ್ನು ಗೌರವಿಸಿದನಲ್ಲದೆ ತಾನೇ ಚಕ್ರವರ್ತಿ ಎಂದು ಘೋಷಿಸಿಕೊಳ್ಳಲು ಪ್ರಯತ್ನಿಸಲಿಲ್ಲ. ಹೈದರನ ಅಭ್ಯುದಯವನ್ನು ಸಹಿಸದ ನೆರೆಹೊರೆಯ ಮರಾಠರು, ನಿಜಾಮ ಮತ್ತು ಇಂಗ್ಲೀಷರು ಸಿಡಿಮಿಡಿಗೊಂಡರು. ೧೭೬೫ರಲ್ಲಿ ಪೇಶ್ವೆ ಮಾಧವರಾಯನ ನಾಯಕತ್ವದಲ್ಲಿ ಮೈಸೂರಿನ ಮೇಲೆ ಸುಮಾರು ಒಂದು ವರ್ಷ ಕಾಲ ಕಾರ್ಯಾಚರಣೆ ನಡೆಸಿದರು. ಹೈದರ್ ಮಾಧವರಾಯನಿಗೆ ಸಮಬಲನಾಗಿಲ್ಲದಿದ್ದುದರಿಂದ ಇವನು ನೇರ ಯುದ್ಧಕ್ಕಿಳಿಯದೇ ೨೮ ಲಕ್ಷ ರೂಪಾಯಿಗಳ ಕಪ್ಪ ಕೊಡುವ ಹಾಗೂ ಸರಹದ್ದು ಪ್ರದೇಶದ ಕೆಲವು ಸಣ್ಣ ಕೋಟೆಗಳನ್ನು ಬಿಟ್ಟು ಕೊಡುವ ಮೂಲಕ ಮಾಧವರಾವ್‌ನನ್ನು ಸಂತುಷ್ಟಗೊಳಿಸಿದ. ಮರಾಠರೊಡನೆ ಶಾಂತಿ ಒಪ್ಪಂದ ಮಾಡಿಕೊಂಡ ಹೈದರ್ ಮಲಬಾರಿನ ದಿಗ್ವಿಜಯ ಕೈಗೊಂಡ.

ಮರಾಠರು ಮಾತ್ರವಲ್ಲದೆ ಹೈದರನಿಗೆ ಇಂಗ್ಲೀಷರೂ ಪರಮ ವೈರಿಗಳಾಗಿದ್ದರು. ಅವರೂ ಕೂಡ ಇವನ ರಾಜ್ಯ ವಿಸ್ತರಣೆಯಿಂದ ಅಸಮಾಧಾನಗೊಂಡು ಇವನನ್ನು ನಾಶಪಡಿಸಲು ಯಾವುದಾದರೂ ಅವಕಾಶವನ್ನು ಬಳಸಿಕೊಳ್ಳಲು ಕಾಯುತ್ತಿದ್ದರು.

ಈ ಬೆಳವಣಿಗೆ ಹೈದರ್ ವಿರುದ್ದ ಇಂಗ್ಲೀಷರು, ಮರಾಠರು ಮತ್ತು ನಿಜಾಮರನ್ನು ಒಳಗೊಂಡ ಪ್ರಬಲ ಒಕ್ಕೂಟದ ರಚನೆಗೆ ನಾಂದಿಯಾಯಿತು.

೧೭೬೭ರ ಆಗಸ್ಟ್‌ನಲ್ಲಿ ಇಂಗ್ಲೀಷರು ಆರ್ಕಾಟ್ ಪ್ರದೇಶದ ಮೇಲೆ ಧಾಳಿ ಮಾಡಿದಾಗ ಇಂಗ್ಲೀಷ್ ಸೇನಾಪತಿ ಕರ್ನಲ್ ಸ್ಮಿತ್ ಹೈದರನಿಗೆ ಭಾರಿ ಪೆಟ್ಟು ಕೊಟ್ಟ. ತರುವಾಯ ಹೈದರ್ ತನ್ನ ಯುದ್ಧತಂತ್ರವನ್ನು ಬದಲಾಯಿಸಿಕೊಂಡು ವನಿಯಂಬಾಡಿ, ತಿರುವತ್ತೂರು ಮತ್ತು ಅಂಬೂರುಗಳನ್ನು ವಶಪಡಿಸಿಕೊಂಡಾಗ, ನಿಜಾಮ ಇಂಗ್ಲೀಷರೊಡನೆ ಪ್ರತ್ಯೇಕ ಒಪ್ಪಂದ ಮಾಡಿಕೊಂಡು ಮಿತ್ರಕೂಟದಿಂದ ಹಿಂದೆ ಸರಿದ. ೧೭೬೯ರ ಮಾರ್ಚ್ ೨೮ರಂದು ಹೈದರ್ ಇದ್ದಕ್ಕಿದ್ದಂತೆ ಮದರಾಸಿನಲ್ಲಿ ಸಮರ ನಡೆಸಿದಾಗ (ಒಂದನೆಯ ಆಂಗ್ಲೋ–ಮೈಸೂರು ಯುದ್ಧ) ಇಂಗ್ಲೀಷರು ಹೈದರನಿಗೆ ಶರಣಾಗಿ ಮದರಾಸು ಒಪ್ಪಂದ ಮಾಡಿಕೊಂಡರು. ಇದು ಭಾರತೀಯ ರಾಜನೊಬ್ಬ ಇಂಗ್ಲೀಷರ ಮೇಲೆ ಸಾಧಿಸಿದ ಮೊದಲ ವಿಜಯವಾಯಿತಲ್ಲದೆ, ಇಂಗ್ಲೀಷರು ಅಜೇಯರೆಂಬ ಪ್ರತೀತಿಯನ್ನು ಸಂಪೂರ್ಣ ತೊಡೆದು ಹಾಕಿತು. ಈ ಯುದ್ಧದಿಂದ ಬ್ರಿಟಿಷರು ಸೈನಿಕ, ರಾಜಕೀಯ, ಆರ್ಥಿಕ, ಹಾಗೂ ನೈತಿಕವಾಗಿ ಹಾನಿಗೊಳಗಾಗಿದ್ದರು. ಮೈಸೂರಿನ ಮೇಲೆ ಮರಾಠರು ಧಾಳಿ ಎಸಗಿದ ಸಂದರ್ಭದಲ್ಲಿ ಹೈದರನಿಗೆ ನೆರವು ನೀಡುವುದನ್ನು ಒಳಗೊಂಡಂತೆ ಇಂಗ್ಲೀಷರು ಹೈದರನ ಎಲ್ಲಾ ಷರತ್ತುಗಳಿಗೂ ಒಪ್ಪಿಕೊಂಡಿದ್ದರು.

೧೭೭೧ ರಲ್ಲಿ ಮರಾಠರು ಪೇಶ್ವೆ ಮಾಧವರಾಯನ ನಾಯಕತ್ವದಲ್ಲಿ ಮೈಸೂರಿನ ಮೇಲೆ ಧಾಳಿ ಮಾಡಿದಾಗ ಒಪ್ಪಂದದಂತೆ ಸಹಾಯಕ್ಕಾಗಿ ಹೈದರ್ ಮಾಡಿಕೊಂಡ ಮನವಿಯನ್ನು ಬ್ರಿಟಿಷರು ತಿರಸ್ಕರಿಸಿದರು. ಇದು ಎರಡನೆಯ ಆಂಗ್ಲೋ–ಮೈಸೂರು ಯುದ್ಧಕ್ಕೆ ಕಾರಣವಾಯಿತು. ಹೈದರ್ ಒಂದು ಲಕ್ಷಕ್ಕೂ ಹೆಚ್ಚು ಸೈನ್ಯ ಸಂಗ್ರಹಿಸಿ ಕರ್ನಾಟಿಕ್ ಪ್ರದೇಶದ ಮೇಲೆ ಉಗ್ರದಾಳಿ ನಡೆಸಿ ಇಂಗ್ಲೀಷರನ್ನು ಹಲವೆಡೆಗಳಲ್ಲಿ ಸೋಲಿಸಿದ. ಕರ್ನಲ್ ಬ್ಯಾಲಿಯ ಪಡೆಯನ್ನು ಸೋಲಿಸಿ ಸೆರೆಹಿಡಿಯಲಾಯಿತು. ಬಕ್ಸಾರ್ ಯುದ್ಧವೀರ ಜನರಲ್ ಹೆಕ್ಟರ್ ಮನ್ರೋ, ಹೈದರನನ್ನು ಎದುರಿಸಲಾರದೆ ಫಿರಂಗಿ ಹಾಗೂ ಕೋವಿಗಳನ್ನು ಕಾಂಜೀವರಂ ಕೆರೆಗೆ ಎಸೆದು ಪ್ರಾಣ ರಕ್ಷಣೆಗಾಗಿ ಪಲಾಯನ ಮಾಡಿದ. ಗವರ್ನರ್ ಜನರಲ್ ವಾರನ್ ಹೇಸ್ಟಿಂಗ್ಸ್‌ನು ವೈಟ್‌ಹಿಲ್‌ನ ನೇತೃತ್ವದ ಮದರಾಸು ಸರ್ಕಾರವನ್ನು ರದ್ದುಪಡಿಸಿ ಅಲ್ಲಿ ಅಳಿದುಳಿದಿದ್ದ ಇಂಗ್ಲೀಷರ ಅಸ್ತಿತ್ವವನ್ನು ಉಳಿಸಲು ಯುದ್ಧವೀರ ಸರ್ ಐರ್‌ಕೂಟನನ್ನು ಕಳುಹಿಸಬೇಕಾಯಿತು. ಹೀಗೆ ಹೈದರ್ ಎರಡನೆ ಮೈಸೂರು ಯುದ್ಧವನ್ನು ಯಶಸ್ವಿಯಾಗಿ ನಿರ್ವಹಿಸಿ, ಇಂಗ್ಲೀಷರಿಗೆ ಸರಿಯಾದ ಪಾಠ ಕಲಿಸಿದ. ಇವನು ಕರ್ನಾಟಕ ಪ್ರದೇಶವನ್ನು ಬಿಟ್ಟುಕೊಡದೆ ಆರ್ಕಾಟನ್ನು ಮುಖ್ಯ ಕೇಂದ್ರವಾಗಿ ಮಾಡಿಕೊಂಡ. ಆದರೆ ದುರದೃಷ್ಟವಶಾತ್ ಹೈದರ್ ೧೭೮೨ರ ಡಿಸೆಂಬರ್ ೧೬ ರಂದು ಯುದ್ಧ ನಿರತನಾಗಿದ್ದಾಗಲೇ ಬೆನ್ನುಪಣಿ ಕಾಯಿಲೆಯಿಂದ ಆರ್ಕಾಟ್ ಬಳಿಯ ನರಸಿಂಗಪೇಟೆಯಲ್ಲಿ ಮರಣ ಹೊಂದಿದ. ಇವನ ಮಗ ಟಿಪ್ಪು ಯುದ್ಧವನ್ನು ಮುಂದುವರಿಸಿ ೧೭೮೪ ರಲ್ಲಿ ಮಂಗಳೂರು ಒಪ್ಪಂದದೊಂದಿಗೆ ಯುದ್ಧವನ್ನು ಯಶಸ್ವಿಯಾಗಿ ಮುಕ್ತಾಯಗೊಳಿಸಿದ.

**ಟಿಪ್ಪು ಸುಲ್ತಾನ್ (೧೭೮೨-೧೭೯೯)** : ೧೭೫೦, ನವೆಂಬರ್ ೧೦ರಂದು ಬೆಂಗಳೂರು ಜಿಲ್ಲೆಯ ದೇವನಹಳ್ಳಿಯಲ್ಲಿ ಜನಿಸಿದ ಇವನಿಗೆ, ಟಿಪ್ಪು ಮಸ್ತಾನ್ ಔಲಿಯಾ ಎಂಬ ಸಂತನ ಹೆಸರನ್ನು ಇಡಲಾಯಿತು. ಉತ್ತಮ ವಿದ್ಯಾಭ್ಯಾಸ ಪಡೆದುಕೊಂಡಿದ್ದ ಇವನು ಚಿಕ್ಕವನಾಗಿದ್ದಾಗಲೇ ೧೭೬೫ರ ಮಲಬಾರ್ ಮುತ್ತಿಗೆ ಸೇರಿದಂತೆ ಅನೇಕ ಯುದ್ಧಗಳಲ್ಲಿ ತಂದೆಯ ಜೊತೆ ಭಾಗವಹಿಸಿದ್ದ. ಮೊದಲನೆಯ ಮೈಸೂರು ಯುದ್ಧದ ಕಾಲದಲ್ಲಿ ಹೈದರಾಬಾದಿನ ನಿಜಾಮನೊಡನೆ ಮಾತುಕತೆ ನಡೆಸಿ ನಿಜಾಮನಿಂದ ಫತೆ ಅಲಿಖಾನ್ ಎಂಬ ಬಿರುದನ್ನು ಪಡೆದನು. ಇದೇ ಸಮಯದಲ್ಲಿ ಇವನು ಮದರಾಸಿನವರೆಗೂ ದಿಗ್ವಿಜಯ ಕೈಗೊಂಡಿದ್ದನು. ೧೭೬೨-೭೨ರ ನಡುವೆ ನಡೆದ ಮೈಸೂರು-ಮರಾಠ ಯುದ್ಧಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದನು.

ಎರಡನೆಯ ಮೈಸೂರು ಯುದ್ಧದಲ್ಲಿ (೧೭೮೦) ಪೊಲಿಯೂರ್ ರಣರಂಗದಲ್ಲಿ ಕರ್ನಲ್ ಬೇಲಿಯನ್ನು ಸೋಲಿಸಿದ. ೧೭೮೨ರಲ್ಲಿ ಅನ್ನಗುಡಿ ಕದನದಲ್ಲಿ ಕರ್ನಲ್ ಬ್ರೈತ್‌ವೈಟ್‌ನನ್ನು ಪರಾಭವಗೊಳಿಸಿ ಹಿಮ್ಮೆಟ್ಟಿಸಿದಾಗಲೂ ಟಿಪ್ಪುವಿನ ಸಾಮರ್ಥ್ಯ ಪ್ರಕಾಶಕ್ಕೆ ಬಂತು. ದ್ವಿತೀಯ ಮೈಸೂರು ಯುದ್ಧ ನಡೆಯುತ್ತಿದ್ದಾಗಲೆ (ಡಿಸೆಂಬರ್, ೧೭೮೨) ಹೈದರ್ ಮರಣ ಹೊಂದಿದಾಗ ಟಿಪ್ಪು ಅಧಿಕಾರಕ್ಕೇರಿ, ಉತ್ತರದಲ್ಲಿ ಕೃಷ್ಣಾ ನದಿಯಿಂದ ದಕ್ಷಿಣದ ದಿಂಡಿಗಲ್ಲಿವರೆಗೂ ವಿಸ್ತಾರವಾಗಿದ್ದ ಸಾಮ್ರಾಜ್ಯಕ್ಕೆ ಉತ್ತರಾಧಿಕಾರಿಯಾದ. ಕರಾವಳಿ ಪ್ರದೇಶಗಳಲ್ಲಿ ನಡೆಯುತ್ತಿದ್ದ ಯುದ್ಧವನ್ನು ಮತ್ತಷ್ಟು ಬಿರುಸುಗೊಳಿಸಿದ. ಆಂಗ್ಲರು ಅದರಿಂದ ತತ್ತರಿಸಿ ಟಿಪ್ಪುವಿನೊಡನೆ ಶಾಂತಿ ಸಂಧಾನವನ್ನು ಏರ್ಪಡಿಸಿಕೊಳ್ಳಲು ಲಾರ್ಡ್ ಮಕಾರ್ಟನಿ ಸಾಡ್ಲಿಯನ್ ಹಾಗೂ ಸ್ಟಾನ್‌ಟನ್ ಎಂಬ ಇಬ್ಬರು ಇಂಗ್ಲೀಷ್ ಕಮಿಷನರುಗಳನ್ನು ಮಂಗಳೂರಿಗೆ ಕಳುಹಿಸಿ ೧೭೮೪ರ ಮಾರ್ಚ್ ೧೧ ರಂದು ಮಂಗಳೂರು ಒಪ್ಪಂದಕ್ಕೆ ಸಹಿ ಹಾಕಿದರು. ಇಂಗ್ಲೀಷರಿಗೆ ನಿರಾಶೆಯುಂಟಾದ್ದರಿಂದ ಹೇಸ್ಟಿಂಗ್ಸ್ ಅದನ್ನು ಒಂದು ಅವಮಾನಕರವಾದ ಶಾಂತಿ ಒಪ್ಪಂದ ಎಂದು ಕರೆದ.

ಟಿಪ್ಪು ೧೭೮೫-೧೭೮೭ರ ಅವಧಿಯವರೆಗೆ ಮರಾಠರು ಹಾಗೂ ನಿಜಾಮರ ವಿರುದ್ಧ ಹೋರಾಡಬೇಕಾಯಿತು. ಮಂಗಳೂರು ಒಪ್ಪಂದದ ಗೆಲುವಿನ ನಂತರ ಬ್ರಿಟಿಷರು ಮೈಸೂರಿನ ಉತ್ತರಕ್ಕೆ ಇದ್ದ, ತಾವು ಹಿಂದೆ ಕಳೆದುಕೊಂಡಿದ್ದ ಪ್ರದೇಶಗಳನ್ನು ಪುನಃ ವಶಪಡಿಸಿಕೊಳ್ಳಲು ಅಸಮರ್ಥರಾದುದರಿಂದಲೂ ತಮ್ಮ ಮಧ್ಯಸ್ಥಿಕೆಯ ಅವಶ್ಯಕತೆ ಕಂಡು ಬರದಿದ್ದರಿಂದಲೂ ಅವರಿಗೆ ನಿರಾಶೆಯಾಗಿತ್ತು. ೧೭೮೪ರ ಅಕ್ಟೋಬರ್‌ನಲ್ಲಿ ಮರಾಠರು ಕಳೆದುಕೊಂಡಿದ್ದ ಕೃಷ್ಣಾನದಿ ತೀರಪ್ರದೇಶಗಳನ್ನು ಮತ್ತೆ ಪಡೆಯುವುದಕ್ಕಾಗಿ ಇಂಗ್ಲೀಷರೊಡನೆ ಸ್ನೇಹ ಬೆಳೆಸಿಕೊಂಡರು. ಅದೇ ರೀತಿ ಟಿಪ್ಪುವನ್ನು ದಮನಗೊಳಿಸಲು ನಿಜಾಮನಿಗೂ ಆತುರವಿತ್ತು. ಆದರೆ ತಾನೊಬ್ಬನೇ ಟಿಪ್ಪುವಿನ ಮೇಲೆ ಬೀಳಲು ಸಮರ್ಥನಲ್ಲದ್ದರಿಂದ, ಮರಾಠರೋ ಅಥವಾ ಇಂಗ್ಲೀಷರೋ ಟಿಪ್ಪುವಿನ ಮೇಲೆ ಯುದ್ಧಕ್ಕೆ ಹೋಗುವ ಅವಕಾಶವನ್ನು ತಾನು ಉಪಯೋಗಿಸಿಕೊಳ್ಳಲು ನಿರ್ಧರಿಸಿದ. ಟಿಪ್ಪುವಿನ ಸಾಮಂತನಾಗಿದ್ದ ನರಗುಂದದ ದೇಸಾಯಿ ಕಪ್ಪ ಕೊಡದೇ ಮರಾಠರ ಸಹಾಯವನ್ನು ಬೇಡಿದ್ದರಿಂದ ೧೭೮೬ ರಲ್ಲಿ ಯುದ್ಧ ಅನಿವಾರ್ಯವಾಯಿತು. ನಿಜಾಮ

ಹಾಗೂ ಮರಾಠರು ಬಾದಾಮಿಯನ್ನು ಮುತ್ತಿದ್ದರು. ಟಿಪ್ಪು ನಿಜಾಮನಿಗೆ ಸೇರಿದ್ದ ಆದವಾನಿ ಕೋಟೆಯನ್ನು ಮುತ್ತಿಗೆ ಹಾಕಿ ಹಿಡಿದ.

ರಣರಂಗಗಳಲ್ಲಿ ಟಿಪ್ಪುವಿಗೆ ಲಾಭದಾಯಕ ಸ್ಥಾನಗಳಿದ್ದಾಗ್ಯೂ ಸಹ, ಇಂಗ್ಲೀಷರೊಡನೆ ನಡೆಯುವ ತನ್ನ ಹೋರಾಟದಲ್ಲಿ ಅವರ ಬೆಂಬಲ ದೊರೆಯುವುದೆಂಬ ಆಸೆಯ ಮೇರೆಗೆ, ತನ್ನ ಶತ್ರುಗಳ ಬಗ್ಗೆ ಹೆಚ್ಚು ಉದಾರವಾಗಿಯೇ ನಡೆದುಕೊಂಡ. ಆದರೆ ಇದರಿಂದ ಟಿಪ್ಪುವಿಗೆ ತುಂಬಾ ನಿರಾಶೆ ಉಂಟಾಯಿತು. ಸೇರಿಸಿಕೊಳ್ಳಬೇಕೆಂದು ಬಯಸಿದ್ದ ರಾಜ್ಯಗಳೇ ಇಂಗ್ಲೀಷರ ಕುತಂತ್ರಗಳಿಂದ ಅವನ ವಿರುದ್ಧವಾಗಿ ರೂಪಗೊಂಡ ಒಕ್ಕೂಟಕ್ಕೆ ಸೇರಿಸಿಕೊಳ್ಳುವಂತಾಯಿತು.

ಭಾರತೀಯ ರಾಜ್ಯಗಳಿಗೆ ಪರಂಪರಾಗತವಾಗಿ ಬಂದಿದ್ದ ದುರ್ಬಲತೆ ದ್ವೇಷಾಸೂಯೆಗಳ ದೆಸೆಯಿಂದ ಟಿಪ್ಪು ಹೊರಗಡೆಯಿಂದ ಸಹಾಯ ಪಡೆಯಲು ಫ್ರಾನ್ಸ್, ತುರ್ಕಿ, ಇರಾನ್ ಹಾಗೂ ಆಫ್ಘಾನಿಸ್ತಾನಗಳೊಡನೆ ಸಂಪರ್ಕ ಬೆಳೆಸಿದ. ಅಲ್ಲದೆ ರಾಜಕೀಯ ಬೆಂಬಲ, ಕುಶಲಕರ್ಮಿಗಳನ್ನು ಪಡೆಯುವ, ವ್ಯಾಪಾರ ವಾಣಿಜ್ಯಗಳನ್ನು ಅಭಿವೃದ್ಧಿ ಪಡಿಸುವ ಉದ್ದೇಶಗಳನ್ನೂ ಈ ನಿಟ್ಟಿನಲ್ಲಿ ಹೊಂದಿದ್ದ. ವಾಣಿಜ್ಯ ವಸ್ತುಗಳಾದ ಮೆಣಸು, ಏಲಕ್ಕಿ, ಗಂಧ, ದಂತ, ರೇಷ್ಮೆ, ತೆಂಗಿನಕಾಯಿ, ಹೊಗೆಸೊಪ್ಪು ಮುಂತಾದವುಗಳಲ್ಲಿ ಮೈಸೂರು ಪ್ರಸಿದ್ಧವಾಗಿದ್ದು ಅವುಗಳಿಗೆ ಪರದೇಶಗಳಲ್ಲಿ ಅಪಾರ ಬೇಡಿಕೆ ಇದ್ದ ಕಾರಣ ಕೆಲವು ವಿದೇಶಿ ರಾಷ್ಟ್ರಗಳೊಡನೆ ವಾಣಿಜ್ಯ ಸಂಬಂಧವನ್ನೂ ಏರ್ಪಡಿಸಿದ. ೧೭೮೫–೧೭೮೬ರಲ್ಲಿ ಟಿಪ್ಪು ಕಾನ್ಸ್ಟಾಂಟಿನೋಪಲಿನ ತುರ್ಕಿಯ ಸುಲ್ತಾನ್ ಅಬ್ದುಲ್ ಹಮೀದನಿಗೂ ೧೭೮೭ರಲ್ಲಿ ಫ್ರಾನ್ಸಿನ ೧೬ನೆಯ ಲೂಯಿಯ ಬಳಿಗೂ ಸೈನಿಕ ಸಹಾಯ ನಿರೀಕ್ಷಿಸಿ ನಿಯೋಗ ಕಳಿಸಿದನಾದರೂ ಅಂದಿನ ಪರಿಸ್ಥಿತಿ ಒತ್ತಡಗಳಿಂದ ಯಾವುದೇ ಸೈನಿಕ ನೆರವು ದೊರೆಯಲಿಲ್ಲ.

೧೭೮೯ರ ಡಿಸೆಂಬರ್ ೨೯ರಂದು ತಿರುವಾಂಕೂರು ರಾಜ್ಯದ ಮೇಲೆ ಟಿಪ್ಪು ನಡೆಸಿದ ಧಾಳಿ ಮೂರನೆಯ ಆಂಗ್ಲೋ–ಮೈಸೂರು ಯುದ್ಧಕ್ಕೆ ಕಾರಣವಾಯಿತು. ತಿರುವಾಂಕೂರಿನ ರಾಜ ಬ್ರಿಟಿಷರ ಮಿತ್ರನಾಗಿದ್ದುದರಿಂದ ಬ್ರಿಟಿಷರು ಅವನಿಗೆ ಸಹಾಯ ನೀಡಿದರು. ಯುದ್ಧದ ಪ್ರಾರಂಭದಲ್ಲಿ ಟಿಪ್ಪು ಹಲವಾರು ಕಡೆ ಜಯಗಳಿಸಿ ಅತ್ಯುತ್ತಮ ನಾಯಕತ್ವ ಪ್ರದರ್ಶಿಸಿದ. ಬ್ರಿಟಿಷರು ಟಿಪ್ಪುವನ್ನು ಎದುರಿಸುವಲ್ಲಿ ಮೊದಲಿಗೆ ವಿಫಲರಾದರು. ಆದರೆ ೧೭೯೦ರ ಡಿಸೆಂಬರ್‌ನಲ್ಲಿ ಗವರ್ನರ್–ಜನರಲ್ ತಾನೇ ಸೇನಾನಾಯಕತ್ವವನ್ನು ವಹಿಸಿ, ಘಟ್ಟಗಳ ಮೂಲಕ ಮೈಸೂರು ರಾಜ್ಯವನ್ನು ಪ್ರವೇಶಿಸಿ, ೧೭೯೧ನೆಯ ಮಾರ್ಚ್‌ನಲ್ಲಿ ಬೆಂಗಳೂರು ನಗರವನ್ನು ವಶಪಡಿಸಿಕೊಂಡ. ಆನಂತರ ರಾಜಧಾನಿ ಶ್ರೀರಂಗಪಟ್ಟಣದ ಕಡೆ ಹೊರಟು ಮೇ ತಿಂಗಳಿನಲ್ಲಿ ನಡೆದ ಯುದ್ಧದಲ್ಲಿ ಟಿಪ್ಪುವನ್ನು ಸೋಲಿಸಿದ. ಆದರೂ ಕಾರನ್ ವಾಲೀಸ್‌ನಿಗೆ ಅದೊಂದು ಕಷ್ಟಕರವಾದ ಕದನವಾಗಿದ್ದು ಯುದ್ಧೋಪಕರಣಗಳ ಪೂರೈಕೆ ಸಮರ್ಪಕವಾಗಿರಲಿಲ್ಲವಾಗಿ ಬೆಂಗಳೂರು ಕಡೆಗೆ ವಾಪಸ್ಸು ನಡೆದ. ಸೈನ್ಯ ಸಂಘಟಿಸಿಕೊಂಡು ಮಾರನೆಯ ವರ್ಷ ಶ್ರೀರಂಗಪಟ್ಟಣದ

ಮೇಲೆ ನುಗ್ಗಿ ಅದರ ಹೊರವಲಯದಲ್ಲಿದ್ದ ಪ್ರದೇಶಗಳೆಲ್ಲವನ್ನೂ ವಶಪಡಿಸಿಕೊಂಡ. ೧೭೯೨ರ ಫೆಬ್ರವರಿ ಆರರಂದು ನಡೆದ ಧಾಳಿಯಲ್ಲಿ ಕಾರನ್‌ವಾಲೀಸ್ ಶ್ರೀರಂಗಪಟ್ಟಣದತ್ತ ನುಗ್ಗಿ ಬಂದಾಗ ಟಿಪ್ಪು ಶ್ರೀರಂಗಪಟ್ಟಣ ಒಪ್ಪಂದಕ್ಕೆ ಶರಣಾಗಬೇಕಾಯಿತು.

ಅದರಂತೆ ಇಂಗ್ಲೀಷರಿಗೆ ಮೂರು ಕೋಟಿ ರೂಪಾಯಿ ಹಾಗೂ ರಾಜ್ಯದ ಅರ್ಧ ಭಾಗವನ್ನು ಟಿಪ್ಪು ಬಿಟ್ಟುಕೊಡಬೇಕಾಯಿತು. ಹಣವನ್ನು ಪೂರ್ಣವಾಗಿ ನೀಡುವವರೆಗೆ ತನ್ನ ಇಬ್ಬರು ಮಕ್ಕಳನ್ನು ಬ್ರಿಟಿಷರಲ್ಲಿಗೆ ಒತ್ತೆಯಾಳಾಗಿ ಕಳುಹಿಸಬೇಕಾಯಿತು. ಶ್ರೀರಂಗಪಟ್ಟಣ ಒಪ್ಪಂದ ಏಕಪಕ್ಷಿಯವಾಗಿತ್ತು. ಇಂತಹ ಅವಮಾನಕರ ಒಪ್ಪಂದಕ್ಕೆ ಟಿಪ್ಪು ಅನಿವಾರ್ಯವಾಗಿ ಒಪ್ಪಿ ಆಂತರಿಕ ಸಮಸ್ಯೆಗಳತ್ತ ಗಮನ ಹರಿಸಿ ವ್ಯಾಪಾರ, ವಾಣಿಜ್ಯ ಹಾಗೂ ಕೃಷಿಗೆ ಪ್ರೋತ್ಸಾಹ ನೀಡಿದ.

೧೭೯೫ರಲ್ಲಿ ನಿಜಾಮನು ಮರಾಠರ ವಿರುದ್ಧ ನಡೆಸಿದ ಯುದ್ಧದಲ್ಲಿ ಟಿಪ್ಪು ಸಹಾಯ ನೀಡಿದ್ದನಾದರೂ ವೆಲ್ಲೆಸ್ಲಿ ಈ ಯೋಜನೆಯನ್ನು ಮಣ್ಣುಗೂಡಿಸಿದ. ನಿಜಾಮನು ಪರಸ್ಪರ ಸಹಾಯಕ ಸೈನ್ಯ ಪದ್ಧತಿಗೆ ಒಪ್ಪಿಗೆ ನೀಡುವಂತೆ ಮಾಡಿದ. ಅದರ ಪ್ರಕಾರ ಫ್ರೆಂಚರ ಸೇನೆಯನ್ನು ವಜಾ ಮಾಡಲಾಯಿತು. ಅವರ ಸ್ಥಾನವನ್ನು ಇಂಗ್ಲೀಷರು ಆಕ್ರಮಿಸಿಕೊಂಡರು. ಇದರ ಬೆನ್ನಲ್ಲೇ ಟಿಪ್ಪುವಿನ ಮೇಲೆ ಯುದ್ಧ ಘೋಷಿಸಲು ವೆಲ್ಲೆಸ್ಲಿ ತಡ ಮಾಡಲಿಲ್ಲ. ಇಂಗ್ಲೀಷರನ್ನು ಸೇರಿಕೊಳ್ಳುವಂತೆ ನಿಜಾಮನನ್ನು ಪ್ರಚೋದಿಸಿದ. ಆದರೆ ಮರಾಠರನ್ನು ಈ ಯುದ್ಧದಲ್ಲಿ ಭಾಗವಹಿಸುವಂತೆ ಮಾಡಲು ಆಗಲಿಲ್ಲ. ದೊಡ್ಡ ಸೈನ್ಯವನ್ನು ಕಟ್ಟಿಕೊಂಡು ಬ್ರಿಟಿಷರು ಎಲ್ಲಾ ದಿಕ್ಕುಗಳಿಂದಲೂ ನುಗ್ಗಿ ಬಂದರು. ಮುಂಬಯಿ ಕಡೆಯಿಂದ ಆರ್ಥರ್ ವೆಲ್ಲೆಸ್ಲಿ (ಆನಂತರ ಡ್ಯೂಕ್ ಆಫ್ ವೆಲ್ಲಿಂಗ್ ಟನ್) ಮತ್ತು ಮದರಾಸಿನ ಕಡೆಯಿಂದ ಜನರಲ್ ಹ್ಯಾರಿಸ್ ನುಗ್ಗಿಬಂದು ಶ್ರೀರಂಗಪಟ್ಟಣವನ್ನು ಮುತ್ತಿದರು. ೧೭೯೯ ರ ಮೇ ೪ ರಂದು ಇಂಗ್ಲೀಷರು ಕೋಟೆಯ ಮೇಲೆ ಧಾಳಿ ನಡೆಸಿದಾಗ ಭೀಕರ ಹೋರಾಟ ನಡೆದು ಇಂಗ್ಲೀಷರ ಸೇನೆಗೆ ಜಯವಾಗಿ ಟಿಪ್ಪು ಯುದ್ಧರಂಗದಲ್ಲಿ ಹೋರಾಡುತ್ತ ಮಡಿದ.

**ಮುಮ್ಮಡಿ ಕೃಷ್ಣರಾಜ ಒಡೆಯರು :** ೧೭೯೯ರ ನಾಲ್ಕನೆಯ ಆಂಗ್ಲೋ – ಮೈಸೂರು ಯುದ್ಧದಲ್ಲಿ ಟಿಪ್ಪು ಶ್ರೀರಂಗಪಟ್ಟಣದಲ್ಲಿ ಮಡಿದ ಮೇಲೆ ವಿಜಯಿಗಳಾದ ಬ್ರಿಟಿಷರು ಮೈಸೂರು ಒಡೆಯರಿಗೆ ಅಧಿಕಾರ ವಹಿಸುವ ತೀರ್ಮಾನ ಮಾಡಿದ್ದರಿಂದ ಕೃಷ್ಣರಾಜರು ಮುಮ್ಮಡಿ ಕೃಷ್ಣರಾಜ ಒಡೆಯರೆಂಬ ಅಭಿಧಾನದೊಂದಿಗೆ ಸಿಂಹಾಸನಾರೋಹಣ ಮಾಡಿದರು. ಎಂಟನೆಯ ಚಾಮರಾಜ ಒಡೆಯರು ಸಂತಾನವಿಲ್ಲದೆ ಮೃತರಾದ್ದರಿಂದ ಮಹಾರಾಣಿ ಲಕ್ಷಮ್ಮಣ್ಣಿಯವರು ಎರಡು ವರ್ಷದ ಬಾಲಕ ಕೃಷ್ಣರಾಜನನ್ನು ದತ್ತು ತೆಗೆದುಕೊಂಡಿದ್ದರು. ಹಳೆಯ ಮೈಸೂರು ಸಂಸ್ಥಾನದ ದಕ್ಷಿಣ ಕರ್ನಾಟಕದ ಒಂಬತ್ತು ಜಿಲ್ಲೆಗಳು ಇವರ ಆಳ್ವಿಕೆಗೆ ಒಳಪಟ್ಟವು. ಮುಮ್ಮಡಿ ಕೃಷ್ಣರಾಜರು ಪ್ರಾಪ್ತ ವಯಸ್ಕರಾಗುವವರೆಗೂ ರಾಜ್ಯದ ಸೂತ್ರ ದಿವಾನ್ ಪೂರ್ಣಯ್ಯನವರ ಕೈಯಲ್ಲಿರಬೇಕೆಂದು

ತೀರ್ಮಾನಿಸಿ, ರಾಜ್ಯದ ವ್ಯವಹಾರಗಳ ಮೇಲೆ ಗಮನವಿಡಲು ಬ್ಯಾರಿಕ್ಲೋಸ್‌ನನ್ನು ಬ್ರಿಟಿಷರ ಪ್ರತಿನಿಧಿಯಾಗಿ (ರೆಸಿಡೆಂಟ್) ನೇಮಿಸಲಾಯಿತು.

ಜನರಲ್ ವೆಲ್ಲೆಸ್ಲಿ ಹಾಗೂ ಆಡಳಿತದಲ್ಲಿ ನುರಿತಿದ್ದ ಪೂರ್ಣಯ್ಯನವರ ಮಾರ್ಗದರ್ಶನದಲ್ಲಿ ಮೈಸೂರು ಸಂಸ್ಥಾನದ ಆಡಳಿತ ಪುನರಾರಂಭವಾಯಿತು. ಆದರೆ ಟಿಪ್ಪುವಿನ ಮುಷ್ಟಿಯಲ್ಲಿ ಮುದುಡಿಹೋಗಿದ್ದ ಹಲವು ಪ್ರಬಲ ಶಕ್ತಿಗಳು ತಲೆ ಎತ್ತಿದ್ದರಿಂದ ಮೊದಲ ವರ್ಷಗಳಲ್ಲಿ ಅಶಾಂತಿ ತಲೆದೋರಿತು. ೧೭೯೯ರಲ್ಲಿ ಧೋಂಡಿಯಾವಾಘ್, ರಾಜ್ಯದ ವಾಯವ್ಯ ಭಾಗದ ಶಿವಮೊಗ್ಗ, ನಗರ ಮುಂತಾದ ಕೋಟೆಗಳನ್ನು ಹಿಡಿದು ಸ್ವಾತಂತ್ರ್ಯ ಸಾರಿಕೊಂಡಾಗ ಬ್ರಿಟಿಷ್ ಹಾಗೂ ಮೈಸೂರು ಸೈನ್ಯಗಳು ಧೋಂಡಿಯ ವಾಘನನ್ನು ಮೈಸೂರು ಪ್ರಾಂತದಿಂದ ಓಡಿಸಿದವು.

೧೮೦೦ರಲ್ಲಿ ಮಂಜರಾಬಾದಿನ ಕೃಷ್ಣಪ್ಪನಾಯಕ ಅರಕೆರೆಯಲ್ಲಿ ತಳವೂರಿ ಬಿಸಲೆಘಾಟಿನ ಸುತ್ತಮುತ್ತ ಹಾವಳಿ ಆರಂಭಿಸಿದ. ೧೮೦೨ರಲ್ಲಿ ಅವನ ಬಲವನ್ನೂ ಹತ್ತಿಕ್ಕಲಾಯಿತು. ದಿವಾನ್ ಪೂರ್ಣಯ್ಯನವರ ನೇತೃತ್ವದಲ್ಲಿ ಬೆಳೆದ ಮೈಸೂರು ಸೈನ್ಯ ಹಲವು ವಿಧಗಳಲ್ಲಿ ಕೀರ್ತಿ ಗಳಿಸಿತು. ೧೮೦೨ರಲ್ಲಿ ವೆಲ್ಲೂರು, ೧೮೦೩ರ ಮರಾಠ ಕದನ, ೧೮೦೪–೦೫ರಲ್ಲಿ ಚಿತ್ತೂರು, ೧೮೦೬ರಲ್ಲಿ ವೆಲ್ಲೂರು, ೧೮೮೯ರಲ್ಲಿ ಬ್ರಿಟಿಷ್ ಸೈನ್ಯದ ದಂಗೆ ಮುಂತಾದವುಗಳ ವಿರುದ್ಧ ಮೈಸೂರು ಸೈನ್ಯ ಬ್ರಿಟಿಷ್ ಆಡಳಿತಕ್ಕೆ ಸಹಾಯ ಮಾಡಿತು. ಪೂರ್ಣಯ್ಯನವರು ೧೧ ವರ್ಷ (೧೭೯೯–೧೮೧೧) ದಿವಾನ ಪದವಿಯನ್ನು ನಿರ್ವಹಿಸಿ, ರಾಜ್ಯದ ಆಯವ್ಯಯವನ್ನು ಬಹುಮಟ್ಟಿಗೆ ಸುಧಾರಿಸಿ, ಅನೇಕ ಪ್ರಗತಿ ಕಾರ್ಯಗಳನ್ನು ಮಾಡಿ ೧೮೧೧ರಲ್ಲಿ ದಿವಾನಗಿರಿಯಿಂದ ನಿವೃತ್ತರಾಗಿ ೧೮೧೩ರಲ್ಲಿ ಮೃತರಾದರು.

ಆನಂತರ ರಾಜ್ಯದ ಸೂತ್ರವನ್ನು ಕೃಷ್ಣರಾಜ ಒಡೆಯರೇ ಸ್ವತಃ ವಹಿಸಿಕೊಂಡು ತಾವೇ ನೇಮಿಸಿದ ದಿವಾನರುಗಳ ಮೂಲಕ ರಾಜ್ಯವಾಳಲಾರಂಭಿಸಿದರು. ಬ್ರಿಟಿಷರಿಗೆ ನಿಷ್ಠಾವಂತರಾಗಿ, ಅವರ ಹಲವು ಕಾರ್ಯಾಚರಣೆಗಳಲ್ಲಿ ಮೈಸೂರು ಸೈನ್ಯದ ಪಾಲ್ಗೊಳ್ಳುವಿಕೆ ಹಾಗೂ ಎದುರಾದ ಕ್ಷಾಮಗಳಿಂದಲೂ ಆದಾಯ ಕುಸಿದು ಅರಮನೆಯ ಬೊಕ್ಕಸ ಬರಿದಾಯಿತು. ೧೮೩೦ರಲ್ಲಿ ಕುಂಸಿಯ ಸಾದರಮಲ್ಲನೆಂಬುವನು ಬೂದಿಬಸಪ್ಪ ಎಂಬ ಹೆಸರಿನಿಂದ ತಾನು ಕೆಳದಿ ರಾಜವಂಶಕ್ಕೆ ಸೇರಿದವನೆಂದೂ ರಾಜ್ಯದ ನ್ಯಾಯಯುತ ಹಕ್ಕುದಾರನೆಂದೂ ಆ ಪ್ರಾಂತದಲ್ಲಿ ಸಾಕಷ್ಟು ಬೆಂಬಲ ಗಳಿಸಿಕೊಂಡು ಬಂಡಾಯವನ್ನು ಆರಂಭಿಸಿದ. ಈ ಬಂಡಾಯವನ್ನು ಹತ್ತಿಕ್ಕಲು ಮುಮ್ಮಡಿ ಕೃಷ್ಣರಾಜರು ಬ್ರಿಟಿಷರ ಬೆಂಬಲ ಪಡೆದು ದಮನಗೊಳಿಸಿದರು. ಬಂಡಾಯವನ್ನು ಬಗ್ಗು ಬಡಿದರೂ ಆಗಿನ ಬ್ರಿಟಿಷ್ ಗವರ್ನರ್ ಜನರಲ್ ವಿಲಿಯಂ ಬೆಂಟಿಂಕ್, ಕೃಷ್ಣರಾಜರು ಆಡಳಿತ ನಿರ್ವಹಿಸಲು ಅಶಕ್ತರೆಂದು ಮೈಸೂರು ರಾಜ್ಯವನ್ನು ಬ್ರಿಟಿಷರ ನೇರ ಆಡಳಿತಕ್ಕೆ ಒಳಪಡಿಸಿ ರಾಜರಿಗೆ ವರ್ಷಾಶನವನ್ನೀಯುವ ಏರ್ಪಾಡು ಮಾಡಿದ. (೧೮೩೧).

ಮುಮ್ಮಡಿ ಕೃಷ್ಣರಾಜ ಒಡೆಯರು ನಂಜನಗೂಡು, ಮೇಲುಕೋಟೆ, ಶ್ರೀರಂಗಪಟ್ಟಣ, ಚಾಮುಂಡಿಬೆಟ್ಟ ಮುಂತಾದೆಡೆಯ ದೇವಾಲಯಗಳಿಗೆ, ಮಠಗಳಿಗೆ ದಾನದತ್ತಿಗಳನ್ನಿತ್ತರು. ಸಾಹಿತ್ಯ ಸಂಸ್ಕೃತಿಗಳ ಬಗ್ಗೆ ಅಪಾರ ಒಲವಿದ್ದ ಇವರು, ತಮ್ಮ ಆಸ್ಥಾನದಲ್ಲಿ ಹಲವು ಕವಿಗಳಿಗೆ ಆಶ್ರಯ ನೀಡಿದ್ದರಲ್ಲದೆ, ತಾವೇ ಹಲವು ಸಾಹಿತ್ಯ ಕೃತಿಗಳನ್ನೂ ರಚಿಸಿದ್ದರು. ರಾಜವಂಶಕ್ಕೆ, ಅಧಿಕಾರ ದಕ್ಕಿಸಕೊಡುವ ನಿಟ್ಟಿನಲ್ಲಿ ಜೀವನ ಪರ್ಯಂತ ಹೋರಾಟದ ಬದುಕನ್ನೇ ಬಾಳಿದ ಮುಮ್ಮಡಿ ಕೃಷ್ಣರಾಜ ಒಡೆಯರು ೧೮೬೮ರಲ್ಲಿ ನಿಧನರಾದರು.

**ಕಮೀಷನರುಗಳ ಆಡಳಿತ (೧೮೩೧–೮೧) :** ಮುಮ್ಮಡಿ ಕೃಷ್ಣರಾಜ ಒಡೆಯರಿಂದ ಅಧಿಕಾರವನ್ನು ಕಸಿದುಕೊಂಡ ಬ್ರಿಟೀಷರು ೧೮೩೧ ರಿಂದ ೧೮೮೧ರವರೆಗೆ ೫೦ ವರ್ಷಗಳ ಬ್ರಿಟಿಷ್ ಕಮೀಷನರ್‌ಗಳ ಆಡಳಿತಕ್ಕೆ ನಾಂದಿ ಹಾಡಿದರು. ಅದು ಮುಂದೆ ಮಾದರಿ ಸಂಸ್ಥಾನವೆನಿಸಿಕೊಳ್ಳುವ ದಿಸೆಯಲ್ಲಿ ಆಡಳಿತ ಕ್ಷೇತ್ರದಲ್ಲಿ ಅಲ್ಲಿಯವರಿಗೂ ರೂಢಿಯಲ್ಲಿದ್ದ ಹಿಂದೂ ಪದ್ಧತಿ ಬ್ರಿಟಿಷ್ ಮಾದರಿ ಪಡೆಯಲಾರಂಭಿಸಿ, ಆಡಳಿತದ ಎಲ್ಲ ಕ್ಷೇತ್ರದಲ್ಲೂ ಬ್ರಿಟಿಷರು ಮಾರ್ಪಾಡುಗಳನ್ನು ತಂದರು. ದಿವಾನರ ಕಾರ್ಯಾಲಯ ಹೋಗಿ ಕಮೀಷನರ ಕೈಕೆಳಗೆ ಕೇಂದ್ರಾಡಳಿತ ಕಾರ್ಯಾಲಯ ಅಸ್ತಿತ್ವಕ್ಕೆ ಬಂತು.

೧೮೩೧ರಲ್ಲಿ ಲಾರ್ಡ್ ವಿಲಿಯಂ ಬೆಂಟಿಂಗ್ ನೇಮಿಸಿದ ಸಮಿತಿಯಲ್ಲಿ ಮಾರ್ಕ್‌ಕಬ್ಬನ್ ಒಬ್ಬ ಸದಸ್ಯನಾಗಿದ್ದ. ಅದೇ ವರ್ಷ ಮುಮ್ಮಡಿ ಕೃಷ್ಣರಾಜ ಒಡೆಯರಿಂದ ವಶಪಡಿಸಿಕೊಂಡ ಸಂಸ್ಥಾನಾಡಳಿತವನ್ನು ನಿರ್ವಹಿಸುವುದಕ್ಕಾಗಿ ಇವನು ಕಿರಿಯ ಕಮಿಷನರ್ ಆಗಿ ಆಯ್ಕೆಗೊಂಡ. ೧೮೩೪ ರಲ್ಲಿ ಏಕೈಕ ಕಮಿಷನರ್ ಆಗಿ ನೇಮಕವಾಗಿ ೨೭ ವರ್ಷಗಳ ಕಾಲ ಆ ಹುದ್ದೆಯಲ್ಲಿದ್ದ.

ಕಬ್ಬನ್, ಸಂಸ್ಥಾನದ ಆಡಳಿತ ಹಾಗೂ ಆರ್ಥಿಕ ಸ್ಥಿತಿಗತಿಗಳನ್ನು ಬಹಳಷ್ಟು ಮಟ್ಟಿಗೆ ಸುಧಾರಿಸಿದ. ಸಂಸ್ಥಾನವನ್ನು ಬೆಂಗಳೂರು, ಚಿತ್ರದುರ್ಗ, ಅಷ್ಟಗ್ರಾಮ ಹಾಗೂ ನಗರಗಳೆಂಬ ನಾಲ್ಕು ವಿಭಾಗಗಳನ್ನಾಗಿ ವಿಂಗಡಿಸಿ ಒಬ್ಬೊಬ್ಬ ಉಸ್ತುವಾರಿ ಅಧಿಕಾರಿಯನ್ನು ನೇಮಿಸಿದ. ಪ್ರತಿಯೊಂದು ತಾಲೂಕಿಗೂ ಒಬ್ಬ ಅಮಲ್ದಾರನನ್ನೂ ಪ್ರತಿ ಹೋಬಳಿಗೂ ಒಬ್ಬ ಶೇಕ್‌ದಾರನನ್ನೂ ನೇಮಿಸಲಾಯಿತು. ೮೫ ತಾಲೂಕು ನ್ಯಾಯಾಲಯಗಳು ಹಾಗೂ ೩ ನ್ಯಾಯಾಧೀಶರಿರುವ ಒಂದು ಹುಜೂರ್ ಅದಾಲತ್ ನ್ಯಾಯಾಲಯ ಇರುವಂತೆ ನ್ಯಾಯಾಂಗವನ್ನು ಪುನರ್ವ್ಯವಸ್ಥೆಗೊಳಿಸಿದ.

೧,೬೦೦ ಮೈಲಿ ಉದ್ದದ ರಸ್ತೆಗಳೂ, ಅನೇಕ ಸೇತುವೆಗಳೂ ಇವನ ಕಾಲದಲ್ಲಿ ನಿರ್ಮಾಣಗೊಂಡು, ಬೆಂಗಳೂರಿಗೂ ಜಿಲ್ಲಾ ಕೇಂದ್ರಗಳಿಗೂ ಸಂಪರ್ಕ ಸುಲಭವಾಯಿತು. ಜೋಲಾರ್ ಪೇಟೆ – ಬೆಂಗಳೂರು ರೈಲು ಮಾರ್ಗ ೧೮೫೯ರಲ್ಲಿ ಸಿದ್ಧಗೊಂಡಿತು. ಕೃಷಿ, ಕೈಗಾರಿಕೆ ಮುಂತಾದ ಕ್ಷೇತ್ರಗಳಲ್ಲೂ ಗಮನಾರ್ಹ ಪ್ರಗತಿ ಸಾಧಿಸಲಾಯಿತು. ಇವನ ಆಡಳಿತಾವಧಿಯಲ್ಲಿ ಸಂಸ್ಥಾನದ ಆದಾಯವೂ ೬೮ ಲಕ್ಷ (೧೮೩೪) ರೂಗಳಿಂದ ೮೫ ಲಕ್ಷ ರೂಗಳಿಗೆ (೧೮೫೫–೫೬) ಏರಿತು. ೧೮೬೧ರಲ್ಲಿ ಅನಾರೋಗ್ಯದ ನಿಮಿತ್ತ

ಕೆಲಸಕ್ಕೆ ರಾಜೀನಾಮೆ ನೀಡಿ ಸ್ವದೇಶಕ್ಕೆ ಹಿಂದಿರುಗುತ್ತಿದ್ದಾಗ ಮಾರ್ಗಮಧ್ಯ ಸೂಯೆಜ್‌ನಲ್ಲಿ ತೀರಿಕೊಂಡ. ಇವನ ಸ್ಮರಣಾರ್ಥವಾಗಿ ಬೆಂಗಳೂರಿನ ಉದ್ಯಾನವನಕ್ಕೆ ಕಬ್ಬನ್ ಪಾರ್ಕ್ ಎಂದು ಹೆಸರಿಡಲಾಗಿದೆ.

**ಲೂಯಿ ಬೆನ್ಥಾಮ್ ಬೌರಿಂಗ್ (೧೮೬೨-೭೦) :** ಮೈಸೂರು ಸಂಸ್ಥಾನದ ಕಮಿಷನರ್ ಆಗಿದ್ದ ಇವನು ಸರ್ ಜಾರ್ಜ್ ಬೌರಿಂಗ್‌ನ ಮೂರನೆಯ ಮಗನಾಗಿ ೧೮೨೪ರ ಜುಲೈ ೧೫ ರಂದು ಜನಿಸಿದ. ಸಿವಿಲ್ ಸರ್ವಿಸ್ ಅಧಿಕಾರಿಯಾಗಿ ೧೮೪೩ರಲ್ಲಿ ಭಾರತಕ್ಕೆ ಆಗಮಿಸಿದ ಇವನು ಮೊದಲು ಪಂಜಾಬಿನ ಡೆಪ್ಯುಟಿ ಕಮಿಷನರ್ (೧೮೪೯-೫೪) ಆಗಿಯೂ, ಲಾರ್ಡ್ ಕ್ಯಾನಿಂಗ್ ವೈಸರಾಯ್ ಆಗಿದ್ದಾಗ ಆತನ ಆಪ್ತ ಕಾರ್ಯದರ್ಶಿಯಾಗಿಯೂ (೧೮೫೫-೧೮೬೨) ಸೇವೆ ಸಲ್ಲಿಸಿದ್ದ.

ಬೌರಿಂಗ್ ಚೀಫ್ ಕಮಿಷನರ್ ಆಗಿದ್ದ ಕಾಲದಲ್ಲಿ ಆಡಳಿತ ಶಿಸ್ತಿನಿಂದ ಕೂಡಿತ್ತಲ್ಲದೆ, ಬೊಕ್ಕಸ ಸಾಕಷ್ಟು ತುಂಬಿತ್ತು. ಆ ಸಂಪತ್ತನ್ನು ಉಪಯೋಗಿಸಿ ಸಂಸ್ಥಾನದ ಪ್ರಗತಿಗಾಗಿ ಆಡಳಿತದಲ್ಲಿ ನೂತನ ಬದಲಾವಣೆಗಳನ್ನು ತಂದ. ೧೮೬೨ರಲ್ಲಿ ಸಂಸ್ಥಾನವನ್ನು ಎಂಟು ಜಿಲ್ಲೆಗಳಾಗಿ ಮಾಡಿ ಅವನ್ನು ಮೂರು ವಿಭಾಗಗಳಾಗಿ ವಿಂಗಡಿಸಿ, ಪ್ರತಿ ಜಿಲ್ಲೆಗೆ ಒಬ್ಬ ಸೂಪರಿಂಟೆಂಡೆಂಟ್, ಡೆಪ್ಯುಟಿ ಸೂಪರಿಂಟೆಂಡೆಂಟ್, ಅಸಿಸ್ಟೆಂಟ್ ಸೂಪರಿಂಟೆಂಡೆಂಟ್‌ರನ್ನು ನೇಮಿಸಿದ. ಅಧಿಕಾರಿಗಳು ವಿವೇಚನಾನುಸಾರವಾಗಿ ಹಣಕಾಸು ವಿನಿಯೋಗ ಮಾಡುವುದನ್ನು ರದ್ದುಗೊಳಿಸಿ ಬಡ್ಜೆಟ್ ವಿಧಾನವನ್ನೂ ಲೆಕ್ಕ ತನಿಖಾ ವಿಧಾನವನ್ನೂ ಜಾರಿಗೆ ತಂದ. ೧೮೬೩ರಲ್ಲಿ ಭೂ ಮತ್ತು ಕಂದಾಯ ನಿಗದಿಗಾಗಿ ಸಂಸ್ಥಾನದಾದ್ಯಂತ ಹೊಸದಾಗಿ ಭೂಅಳತೆ ಮತ್ತು ಭೂಸಾಮಿತ್ವವನ್ನು ನಿಷ್ಕರ್ಷಿಸಲು ಕ್ರಮ ತೆಗೆದುಕೊಂಡ. ಭೂಕಂದಾಯವನ್ನು ಹಿಂದಿನ ೩೦ ವರ್ಷಗಳ ಉತ್ಪನ್ನ ಆಯವ್ಯಯಗಳ ಸರಾಸರಿಯನ್ನು ಅನುಸರಿಸಿ ನಿರ್ಧರಿಸಲಾಯಿತು. ಇನಾಮ್ ಕಮಿಷನ್ ಸ್ಥಾಪಿಸಲಾಯಿತು. ಅರಣ್ಯ ಸಂಪತ್ತನ್ನೂ ನೀರಾವರಿ ವ್ಯವಸ್ಥೆಯನ್ನೂ ಸಂರಕ್ಷಿಸುವ ಏರ್ಪಾಡಾಯಿತು. ಪ್ರತಿ ಜಿಲ್ಲೆಗೂ ಹೊಸ ರಸ್ತೆ, ಸೇತುವೆಗಳು, ಸಾರ್ವಜನಿಕ ಕಛೇರಿ ಕಟ್ಟಡ, ಸೆರೆಮನೆಗಳ ಸುಧಾರಣೆ ಮೊದಲಾದ ಕಾರ್ಯಕ್ರಮಗಳಿಂದ ಸಂಸ್ಥಾನದ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಯನ್ನು ಸಾಧಿಸಲಾಯಿತು. ಉದ್ಯಮಗಳಲ್ಲಿ ಹೆಚ್ಚಿನ ಬಂಡವಾಳ ಹೂಡಲಾಯಿತು. ವಿಸ್ತಾರ ಪ್ರದೇಶದಲ್ಲಿ ಕಾಫಿ ತೋಟಗಳು ಹುಟ್ಟಿಕೊಂಡವು. ಗಣಿಗಾರಿಕೆ ಅಭಿವೃದ್ಧಿಯಾಯಿತು.

ಮೈಸೂರು ಸಂಸ್ಥಾನದಲ್ಲಿ ಐರೋಪ್ಯ ಆಡಳಿತ ಪದ್ಧತಿ, ವಿದ್ಯಾಭ್ಯಾಸ, ಜೀವನ ರೀತಿ ನೀತಿಗಳು ನೆಲೆಗೊಳ್ಳುವುದರಲ್ಲಿ ಬೌರಿಂಗ್‌ನ ಕಾರ್ಯಕ್ರಮಗಳು ಬಹುಮುಖ್ಯ ಪಾತ್ರ ವಹಿಸಿದವು. ಪ್ರಗತಿಪರ ಆಡಳಿತಗಾರನಾಗಿದ್ದ ಬೌರಿಂಗ್, ಜೊತೆಗೆ ಪ್ರಸಿದ್ಧ ಲೇಖಕನೂ ಆಗಿದ್ದು, ತನ್ನ ಪತ್ನಿ ಲೇಡಿ ಬೌರಿಂಗ್ ಜೊತೆ 'ಈಸ್ಟರ್ನ್ ಎಕ್ಸ್‌ಪೀರಿಯನ್ಸಸ್' ಗ್ರಂಥವನ್ನು ರಚಿಸಿದ್ದಾನೆ. ಜನಪ್ರಿಯನಾಗಿದ್ದ ಇವನ ಹೆಸರಿನಲ್ಲಿ ಬೆಂಗಳೂರಿನ ಬೌರಿಂಗ್

ಆಸ್ಪತ್ರೆ ಹಾಗೂ ಬೌರಿಂಗ್ ಇನ್‌ಸ್ಟಿಟ್ಯೂಟ್ ಸ್ಥಾಪಿತವಾಗಿವೆ. ೧೮೭೮ರ ವೇಳೆಗೆ ಮೈಸೂರು ಅರಮನೆಯಲ್ಲಿ ಮೊಟ್ಟಮೊದಲು ಆರ್ಕ್‌ಲ್ಯಾಂಪ್ ಉರಿಸಲಾಗಿತ್ತೆಂದು ತಿಳಿದುಬರುತ್ತದೆ. ಆರ್ಕ್‌ಲ್ಯಾಂಪ್‌ಗಳೆಂದರೆ ಎರಡು ಲೋಹದ ತಂತಿಗಳ ನಡುವೆ ವಿದ್ಯುತ್ ಹಾಯಿಸಿ ಸತತವಾಗಿ ಬೆಳಕನ್ನು ಪಡೆಯಲು ಬಳಕೆಯಲ್ಲಿದ್ದ ಸಾಧನ. ಕ್ರಮೇಣ ಮೈಸೂರು ಸಂಸ್ಥಾನದಲ್ಲಿ ಕಮಿಷನರ ಆಡಳಿತ ಅಂತ್ಯಗೊಂಡು ಪುನಃ ಮೈಸೂರು ಒಡೆಯರ ಆಡಳಿತ ಅಸ್ತಿತ್ವಕ್ಕೆ ಬಂತು.

**ಹತ್ತನೆಯ ಚಾಮರಾಜ ಒಡೆಯರು (೧೮೮೧–೧೮೯೪) :** ಮೈಸೂರು ಸಂಸ್ಥಾನದ ದೊರೆಯಾದ ಇವರು ಮುಮ್ಮಡಿ ಕೃಷ್ಣರಾಜ ಒಡೆಯರ ದತ್ತು ಪುತ್ರರು. ಬ್ರಿಟಿಷ್ ಸರ್ಕಾರ ಮೈಸೂರು ರಾಜವಂಶದವರಿಗೆ ಆಡಳಿತ ವಹಿಸಬೇಕೆಂದು ತೀರ್ಮಾನಿಸಿದ್ದರಿಂದ, ಇವರು ಪ್ರಾಪ್ತ ವಯಸ್ಕರಾಗುತ್ತಿದ್ದಂತೆಯೇ ೫೦ ವರ್ಷಗಳ ಕಮೀಷನರ್ ಆಡಳಿತ ಕೊನೆಗೊಂಡು ೧೮೮೧ನೆಯ ಮಾರ್ಚ್ ೨೫ರಂದು ಮೈಸೂರು ಸಂಸ್ಥಾನದ ದೊರೆಯಾಗಿ ಅಧಿಕಾರಕ್ಕೆ ಬಂದರು.

ಚಾಮರಾಜ ಒಡೆಯರ ಕಾಲದಲ್ಲಿ ಗಾರ್ಡನ್ ರೆಸಿಡೆಂಟರಾಗಿಯೂ ಸಿ. ರಂಗಾಚಾರ್ಲು ದಿವಾನರಾಗಿಯೂ ನೇಮಕಗೊಂಡರು. ಆಡಳಿತದ ಕಾರ್ಯ ಕಲಾಪಗಳಲ್ಲಿ ನೆರವಾಗಲು ಇವರಿಗೆ ಪುಟ್ಟ ಸಲಹಾ ಮಂಡಳಿಯೊಂದು ರಚಿತವಾಯಿತು. ರೆಸಿಡೆಂಟರ ಕಾಲದಲ್ಲಿ ರಾಜ್ಯಾಂಗದ ಕೆಲವು ಸಂಪ್ರದಾಯಗಳು ಮೈಸೂರಿನಲ್ಲಿ ಆಚರಣೆಗೆ ಬಂದಿದ್ದವು. ರಂಗಾಚಾರ್ಲು ಅದನ್ನು ಮುಂದುವರಿಸಿ ಸಂಸ್ಥಾನದಲ್ಲಿ ಪ್ರಜಾಪ್ರತಿನಿಧಿ ಸಭೆಯನ್ನು ಸ್ಥಾಪಿಸಿದರು (೧೮೮೧). ಇದರಲ್ಲಿ ಸಂಸ್ಥಾನದ ನಾನಾ ಭಾಗಗಳಿಂದ ಸರ್ಕಾರವೇ ಆರಿಸಿದ ೧೪೪ ಜನ ಸದಸ್ಯರಿದ್ದು, ಅಧಿವೇಶನ ಮೈಸೂರಿನಲ್ಲಿ ನಡೆಯುತ್ತಿತ್ತು. ಪ್ರಜಾಪ್ರತಿನಿಧಿ ಸಭೆಯ ಸ್ಥಾಪನೆ, ಭಾರತದಲ್ಲೇ ಪ್ರಥಮವಾಗಿದ್ದು ಪ್ರಜಾಪ್ರಭುತ್ವ ಸ್ಥಾಪನೆಗೆ ಭದ್ರಬುನಾದಿ ಹಾಕಿದಂತಾಯಿತು. ರಂಗಾಚಾರ್ಯ ೧೮೮೩ ರಲ್ಲಿ ನಿಧನ ಹೊಂದಿದ ನಂತರ ಕೆ. ಶೇಷಾದ್ರಿ ಐಯ್ಯರ್ ದಿವಾನರಾಗಿ ನೇಮಕಗೊಂಡರು. ಅವರ ಸೇವಾವಧಿಯಲ್ಲಿ ಸರ್ವಾಂಗೀಣ ಪ್ರಗತಿ ಕಂಡುಬಂತು. ಅರಣ್ಯ ಸಂಪತ್ತು ಮುಂತಾದ ರಂಗಗಳಲ್ಲೂ ಅಸಾಧಾರಣ ಪ್ರಗತಿಯುಂಟಾಯಿತು. ಚಿನ್ನದ ಗಣಿ ಕೆಲಸ ಪ್ರಾರಂಭವಾದುದು ಶೇಷಾದ್ರಿ ಅಯ್ಯರ್ ಅವರ ಆಡಳಿತಾವಧಿಯಲ್ಲಿ. ಆಡಳಿತ ಯಂತ್ರಕ್ಕೆ ಸೂಕ್ತ ಅಧಿಕಾರಿಗಳ ಆಯ್ಕೆಗಾಗಿ ಮೈಸೂರು ಸಿವಿಲ್ ಸರ್ವಿಸ್ ಪರೀಕ್ಷೆಯನ್ನು ಜಾರಿಗೊಳಿಸಲಾಯಿತು.

ಚಾಮರಾಜೇಂದ್ರ ಒಡೆಯರ ದಕ್ಷ ಆಡಳಿತವನ್ನು ಮೆಚ್ಚಿದ ಇಂಗ್ಲೆಂಡಿನ ವಿಕ್ಟೋರಿಯಾ ರಾಣಿಯ ಬ್ರಿಟಿಷ್ ಸರ್ಕಾರ ಅವರಿಗೆ ಜಿ.ಸಿ.ಎಸ್.ಐ. ಎಂಬ ಬಿರುದನ್ನು ನೀಡಿತು. ಸ್ವಾಮಿವಿವೇಕಾನಂದರು ಅಮೇರಿಕಾದ ಸರ್ವಧರ್ಮ ಸಮ್ಮೇಳನಕ್ಕೆ (೧೮೯೩) ಹೋಗಲು ಇವರು ಎಲ್ಲ ಸಹಾಯವನ್ನು ನೀಡಿದರು. ಚಾಮರಾಜ ಒಡೆಯರು ೧೮೯೪, ಡಿಸೆಂಬರ್ ೨೮ರಂದು ಕೊಲ್ಕೊತ್ತಾದಲ್ಲಿ ಡಿಫ್ತೀರಿಯ ರೋಗದಿಂದ ನಿಧನರಾದರು.

**ನಾಲ್ವಡಿ ಕೃಷ್ಣರಾಜ ಒಡೆಯರು (೧೮೯೪–೧೯೪೦)** : ಮೈಸೂರು ಸಂಸ್ಥಾನದ ಸುಪ್ರಸಿದ್ಧ ದೊರೆಯಾದ ಇವರು ಹತ್ತನೆಯ ಚಾಮರಾಜ ಒಡೆಯರ ಸುಪುತ್ರ. ತಂದೆಯ ನಿಧನಾನಂತರ ೧೮೯೫ರಲ್ಲಿ ಸಿಂಹಾಸನಾರೋಹಣ ಮಾಡಿದರು. ನಾಲ್ವಡಿ ಕೃಷ್ಣರಾಜಒಡೆಯರು ಪ್ರಾಪ್ತ ವಯಸ್ಕರಾಗುವವರೆಗೆ (೧೯೦೨) ಅವರ ತಾಯಿ ಮಹಾರಾಣಿ ಕೆಂಪರಾಜಮ್ಮಣ್ಣಿಯವರು ರಾಜ್ಯಭಾರ ನೋಡಿಕೊಂಡರು. ಜೆ.ಜೆ.ವಿಟ್ಲೆ, ಸ್ಟೂವರ್ಟ್‌ರ ಮಾರ್ಗದರ್ಶನದಲ್ಲಿ ಕೃಷ್ಣರಾಜರಿಗೆ ಕಾಲಕ್ಕನುಗುಣವಾದ ನೂತನ ಶಿಕ್ಷಣ ಕೊಡಿಸಲಾಯಿತು. ಜೊತೆಗೆ ರಾಜ್ಯದಾದ್ಯಂತ ಪ್ರವಾಸ ಮಾಡಿ ಆಡಳಿತಾನುಭವವನ್ನೂ ನೈಸರ್ಗಿಕ ಸಂಪತ್ತನ್ನೂ ಪ್ರತ್ಯಕ್ಷದರ್ಶಿಯಾಗಿ ತಿಳಿದುಕೊಂಡರು. ಉತ್ತರ ಭಾರತವೂ ಸೇರಿದಂತೆ ಅನೇಕ ರಾಜ್ಯಗಳಲ್ಲಿ ಪ್ರವಾಸ ಮಾಡಿ ಜನಪ್ರಿಯರಾದರು. ೧೯೦೦ರಲ್ಲಿ ಕಾಥೇವಾಡದ ರಾಣಾ ಥಲಬಾಸ್ ಸಿಂಘ್‌ಜೀಯವರ ಪುತ್ರಿ ಪ್ರತಾಪಕುಮಾರಿದೇವಿಯವರನ್ನು ವಿವಾಹವಾದರು.

ಕೃಷ್ಣರಾಜ ಒಡೆಯರು ೧೯೦೨ ರಲ್ಲಿ ರಾಜ್ಯಾಡಳಿತವನ್ನು ಸ್ವತಃ ವಹಿಸಿಕೊಂಡರು. ಪ್ರವಾಸಾನುಭವದಿಂದ ರಾಜ್ಯದ ಕೊರತೆಗಳನ್ನು ಕೂಲಂಕಷವಾಗಿ ತಿಳಿದಿದ್ದ ಒಡೆಯರು, ಜನತೆಯಲ್ಲಿ ಪ್ರಜಾಸರ್ಕಾರದ ಬಗ್ಗೆ ಇದ್ದ ಒಲವನ್ನು ಅರಿತುಕೊಂಡಿದ್ದರು. ಸಂಸ್ಥಾನದ ಕಾನೂನು ರಚನಾ ಕಾರ್ಯದಲ್ಲಿ ಅಧಿಕಾರಿಗಳು ಹಾಗೂ ಸಾರ್ವಜನಿಕ ಪ್ರತಿನಿಧಿಗಳು ಪಾಲ್ಗೊಳ್ಳುವಂತೆ ಮಾಡುವ ದೃಷ್ಟಿಯಿಂದ ಪ್ರಜಾಪ್ರತಿನಿಧಿಸಭೆಯ ಜೊತೆಗೆ ೧೯೦೭ರಲ್ಲಿ ನ್ಯಾಯವಿಧಾಯಕ ಸಭೆಯನ್ನೂ ರಚಿಸಿದರು. ಅಲ್ಲದೆ, ಸ್ತ್ರೀಯರಿಗೂ ಮತದಾನದ ಹಕ್ಕನ್ನು ಕಲ್ಪಿಸಿದರು. ವಿದ್ಯಾಭ್ಯಾಸ, ಜನಾರೋಗ್ಯ, ರಕ್ಷಣೆ, ನೀರಾವರಿ, ವ್ಯವಸಾಯಾಭಿವೃದ್ಧಿ ಮೊದಲಾದ ಕ್ಷೇತ್ರಗಳಿಗೆ ಸಂಬಂಧಪಟ್ಟಂತೆ ಅನೇಕ ಇಲಾಖೆಗಳನ್ನು ವ್ಯವಸ್ಥೆಗೊಳಿಸಿ, ಸ್ವತಃ ತಾವೇ ಮೇಲ್ವಿಚಾರಣೆ ನಡೆಸಿ ಮೈಸೂರು ಸಂಸ್ಥಾನವನ್ನು ಪ್ರಗತಿಪಥದಲ್ಲಿ ಸಾಗಿಸಿದರು.

ನಾಲ್ವಡಿ ಕೃಷ್ಣರಾಜ ಒಡೆಯರ ಆಡಳಿತಾವಧಿಯಲ್ಲಿ ಪಿ.ಎನ್. ಕೃಷ್ಣಮೂರ್ತಿ (೧೯೦೧–೧೯೦೬), ವಿ.ಪಿ. ಮಾಧವರಾವ್ (೧೯೦೬–೧೯೦೯), ಟಿ. ಆನಂದರಾವ್ (೧೯೦೯–೧೯೧೨), ಸರ್. ಎಂ. ವಿಶ್ವೇಶ್ವರಯ್ಯ (೧೯೧೨–೧೯೧೮), ಕಾಂತರಾಜ ಅರಸು (೧೯೧೯–೧೯೨೨), ಆಲ್ಬಿಯನ್ ಬ್ಯಾನರ್ಜಿ (೧೯೨೨–೧೯೨೬), ಸರ್ ಮಿರ್ಜಾ ಇಸ್ಮಾಯಿಲ್ (೧೯೨೬–೧೯೪೧) ದಿವಾನರಾಗಿ ರಾಜ್ಯದ ಪ್ರಗತಿಗಾಗಿ ಶ್ರಮಿಸಿದರು. ಶಿವನಸಮುದ್ರದಲ್ಲಿ ಜಲವಿದ್ಯುತ್ ಉತ್ಪಾದನಾ ಕೇಂದ್ರ ಸ್ಥಾಪನೆ (೧೯೦೨), ಬೆಂಗಳೂರು (೧೯೦೫), ಮೈಸೂರು (೧೯೦೮) ನಗರಗಳಿಗೆ ವಿದ್ಯುತ್ ಸರಬರಾಜು, ವಿಶ್ವಪ್ರಸಿದ್ಧವಾದ ಬೃಂದಾವನ, ಹಾಗೂ ಭದ್ರಾವತಿಯ ಕಬ್ಬಿಣದ ಕಾರ್ಖಾನೆ ನಾಲ್ವಡಿ ಕೃಷ್ಣರಾಜರು ನಾಡಿಗೆ ಸಮರ್ಪಿಸಿದ ಹಿರಿಯ ಕಾಣಿಕೆಗಳು. ಮೈಸೂರು ವಿಶ್ವವಿದ್ಯಾನಿಲಯದ ಸ್ಥಾಪನೆ (೧೯೧೬) ಕೃಷ್ಣರಾಜರ ಮಹತ್ತರ ಸಾಧನೆ. ಇವರು ಈ ವಿಶ್ವವಿದ್ಯಾನಿಲಯದ ಮೊದಲ ಕುಲಾಧಿಪತಿಯಾಗಿದ್ದರು. ಮಹಾತ್ಮ ಗಾಂಧಿಯವರಿಂದ 'ರಾಜರ್ಷಿ' ಎಂಬ ಬಿರುದನ್ನು ಪಡೆದು, ಆದರ್ಶ ರಾಜನೆನಿಸಿಕೊಂಡು, ತಾವು ಕಾಣುತ್ತಿದ್ದ ಸಮಾಜ

ಕಲ್ಯಾಣದ ಕನಸುಗಳನ್ನು ನನಸಾಗಿಸಿ, ಅನೇಕ ಸುಧಾರಣೆಗಳನ್ನು ಮಾಡಿ, ಅನೇಕ ಉದ್ಯಮ ಸಂಸ್ಥೆಗಳನ್ನು ಸ್ಥಾಪಿಸಿ ಮೈಸೂರು ರಾಜ್ಯವನ್ನು ರಾಮರಾಜ್ಯ ಪದವಿಗೇರಿಸಿ ಮಾದರಿ ರಾಜ್ಯವನ್ನಾಗಿಸಿದ ಕೀರ್ತಿ ಇವರದು. ಇವರು ಹಲವಾರು ಕವಿಗಳಿಗೆ ಕಲಾವಿದರಿಗೆ ಆಶ್ರಯ ನೀಡಿದರು. ಅರಮನೆ, ಕೋಟೆ–ಕೊತ್ತಲ, ದೇವಾಲಯಗಳನ್ನು ನಿರ್ಮಿಸಿದರು. ಹೀಗೆ ಆದರ್ಶ ಪ್ರಭುವಾಗಿ ಹಲವು ಲೋಕೋಪಕಾರಿ ಕಾರ್ಯಗಳನ್ನು ಮಾಡಿ, ಸಾಹಿತ್ಯ ಸಂಸ್ಕೃತಿಯ ಸಂವರ್ಧನೆಯನ್ನು ಸಾಧಿಸಿ ಜಯಪ್ರಿಯರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರು ೧೯೪೦ರಲ್ಲಿ ನಿಧನರಾದರು.

**ಜಯಚಾಮರಾಜೇಂದ್ರ ಒಡೆಯರು (೧೯೧೯–೧೯೭೪) :** ಮೈಸೂರು ಸಂಸ್ಥಾನದ ಕೊನೆಯ ದೊರೆಯಾದ (೧೯೪೦–೫೦) ಇವರು ಕಂಠೀರವ ನರಸಿಂಹರಾಜ ಒಡೆಯರ್, ಕೆಂಪು ಚೆಲುವಾಜಮ್ಮಣ್ಣಿಯವರ ಏಕಮಾತ್ರ ಪುತ್ರರಾಗಿ ೧೯೧೯, ಜುಲೈ ೧೮ರಂದು ಜನಿಸಿದರು. ೧೯೩೮ರಲ್ಲಿ ಮೈಸೂರು ಮಹಾರಾಜ ಕಾಲೇಜಿನಿಂದ ಬಿ.ಎ. ಪದವಿ ಪಡೆದರಲ್ಲದೆ ಅನೇಕ ಸಂಘ ಸಂಸ್ಥೆಗಳ ಅಧ್ಯಕ್ಷರಾಗಿದ್ದರು.

ನಾಲ್ವಡಿ ಕೃಷ್ಣರಾಜ ಒಡೆಯರ ಉತ್ತರಾಧಿಕಾರಿಗಳಾಗಿ ೧೯೪೦ರ ಸೆಪ್ಟೆಂಬರ್ ಎಂಟರಂದು ಮೈಸೂರು ಸಂಸ್ಥಾನದ ಸಿಂಹಾಸನವನ್ನೇರಿದರು. ೧೯೪೭ರಲ್ಲಿ ಭಾರತ ಸ್ವಾತಂತ್ರ್ಯ ಗಳಿಸಿದಾಗ ಮೈಸೂರು ಸಂಸ್ಥಾನ ಭಾರತ ಒಕ್ಕೂಟದಲ್ಲಿ ಸೇರುವುದಕ್ಕೆ ಸಮ್ಮತಿಸಿ, ಸಂಸ್ಥಾನದಲ್ಲಿ ಪ್ರಜಾಸರ್ಕಾರ ಸ್ಥಾಪನೆಗೆ ಅನುವು ಮಾಡಿದರೂ ೧೯೫೦ ರ ಜನವರಿ ೨೬ರಂದು ಭಾರತ ಗಣರಾಜ್ಯವಾಗಿ ಘೋಷಿತವಾಗುವವರೆಗೂ ಮಹಾರಾಜರಾಗಿ ಮುಂದುವರಿದರು. ಆನಂತರ ರಾಜ್ಯದ ರಾಜಪ್ರಮುಖರಾದರು (೧೯೫೦–೫೬). ರಾಜ್ಯಗಳ ಪುನರ್ವಿಂಗಡಣೆಯಾದಾಗ ವಿಶಾಲ ಮೈಸೂರಿನ (ಇಂದಿನ ಕರ್ನಾಟಕ) ಪ್ರಥಮ ರಾಜ್ಯಪಾಲರಾದರು (೧೯೫೬–೬೪). ಮುಂದೆ ಮದರಾಸು ರಾಜ್ಯದ ರಾಜ್ಯಪಾಲರಾಗಿ ನೇಮಕಗೊಂಡರು (೧೯೬೪–೬೭).

ಜಯಚಾಮರಾಜ ಒಡೆಯರು ಸಂಸ್ಥಾನದ ಮಹಾರಾಜರಾಗಿದ್ದ ಪೂರ್ವಾರ್ಧ ಭಾಗವು ಎರಡನೆಯ ಮಹಾಯುದ್ಧ ನಡೆಯುತ್ತಿದ್ದ ಸಮಯವಾಗಿದ್ದು ಪ್ರಪಂಚದ ಇತರೆಡೆಗಳಂತೆ ಮೈಸೂರು ಸಹ ಆರ್ಥಿಕ ಸಂಕಷ್ಟಗಳನ್ನು ಎದುರಿಸಬೇಕಾಗಿದ್ದ ಕಾಲವಾಗಿತ್ತು. ಸರ್ ಮಿರ್ಜಾ ಇಸ್ಮಾಯಿಲ್ ನಿವೃತ್ತಿಯ ನಂತರ (೧೯೪೧ ರ ಮೇ ವರೆಗೆ), ನ್ಯಾಪತಿ ಮಾಧವರಾವ್ (೧೯೪೧–೪೬), ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್ (೧೯೪೬–೪೯) ಈ ಅವಧಿಯಲ್ಲಿ ದಿವಾನರಾಗಿ ಸೇವೆ ಸಲ್ಲಿಸಿದವರು. ರಾಜಕೀಯ ಜಾಗೃತಿ ಬೆಳೆದಿದ್ದ ಆ ಕಾಲದಲ್ಲಿ ಅದಕ್ಕನುಗುಣವಾಗಿ ಹಲವು ಸುಧಾರಣೆಗಳಾದವು. ೧೯೪೫ ರಲ್ಲಿ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಸದಸ್ಯರು ಬಹುಮತದಿಂದ ಆರಿಸಿ ಬಂದು ಜವಾಬ್ದಾರಿ ಸರ್ಕಾರದ ಸ್ಥಾಪನೆಗೆ ವಿದ್ಯುಕ್ತರಾದರು. ಆದರೆ ಅಂದಿನ ದಿವಾನರ ಧೋರಣೆಗಳಿಂದ ಸ್ವಲ್ಪ ಮಟ್ಟಿನ ವಿರಸವುಂಟಾದರೂ ಭಾರತ ಸ್ವತಂತ್ರವಾದಾಗ ಆ ಒಕ್ಕೂಟದಲ್ಲಿ ತಮ್ಮ ಸಂಸ್ಥಾನವನ್ನು ಸೇರಿಸುವಲ್ಲಿ

ಜಯಚಾಮರಾಜ ಒಡೆಯರು ಮೊದಲಿಗರಾದರು. ಮೈಸೂರು ನಗರದಲ್ಲಿ ಇವರು ಆಚರಿಸಿಕೊಂಡು ಬರುತ್ತಿದ್ದ ದಸರಾ ಉತ್ಸವಕ್ಕೆ ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಮಹತ್ವ ಬಂದಿತ್ತು. ವಿಶಾಲ ಕರ್ನಾಟಕದ ಕನಸನ್ನು ಬಹು ಹಿಂದೆಯೇ ಕಂಡಿದ್ದ ಇವರು ಅದು ನನಸಾಗುವಲ್ಲಿ ರಾಜ್ಯತ್ವವನ್ನು ತ್ಯಜಿಸಲೂ ಸಿದ್ಧರಾದರು. ಮೈಸೂರು ರಾಜ್ಯದ ರಾಜ್ಯಪಾಲರಾಗಿದ್ದ ಸಂದರ್ಭದಲ್ಲಿ ಇವರು ಸಂಬಳವನ್ನೂ ಸ್ವೀಕರಿಸದೆ ನಿಸ್ವಾರ್ಥ ಸೇವೆ ಸಲ್ಲಿಸಿದರು.

ಸತ್ಯಪ್ರೇಮಕುಮಾರಿ ಹಾಗೂ ತ್ರಿಪುರಸುಂದರಮ್ಮಣ್ಣಿಯರನ್ನು ಮಡದಿಯರನ್ನಾಗಿ ಹೊಂದಿದ್ದ ಇವರಿಗೆ ಐವರು ಹೆಣ್ಣು ಮಕ್ಕಳು ಹಾಗೂ ಏಕಮಾತ್ರ ಪುತ್ರರಾದ – ಶ್ರೀಕಂಠದತ್ತ ನರಸಿಂಹರಾಜ ಒಡೆಯರು. ಸ್ವತಃ ಕ್ರೀಡಾಪಟು, ವನ್ಯಮೃಗ ಪ್ರೇಮಿ, ಸಂಗೀತಗಾರರಾಗಿದ್ದ ಇವರು ಸಂಗೀತಗಾರರಿಗೆ ಆಶ್ರಯ ನೀಡಿದ್ದರು. ಇವರಿಗೆ ವಿಶ್ವದ ಅನೇಕ ವಿಶ್ವವಿದ್ಯಾಲಯಗಳು ಗೌರವ ಡಿ.ಲಿಟ್. ಪದವಿಯನ್ನೂ ಬ್ರಿಟಿಷ್ ಸರ್ಕಾರ ಜಿ.ಸಿ.ಎಸ್.ಐ. (೧೯೪೫), ಜಿ.ಸಿ.ಬಿ(೧೯೪೬) ಬಿರುದುಗಳನ್ನೂ ನೀಡಿತ್ತು. ಇವರು ಶ್ವಾಸಕೋಶದ ಉರಿಯೂತಕ್ಕೆ ಬಲಿಯಾಗಿ ೧೯೭೪ರ ಸೆಪ್ಟೆಂಬರ್ ೨೩ರಂದು ಬೆಂಗಳೂರು ಅರಮನೆಯಲ್ಲಿ ನಿಧನರಾದರು. ಅವರ ಪಾರ್ಥಿವ ಶರೀರಕ್ಕೆ ಮೈಸೂರಿನ ಮಧುವನದಲ್ಲಿ ಅಗ್ನಿ ಸಂಸ್ಕಾರ ಮಾಡಲಾಯಿತು.

## ಮೈಸೂರು ಅರಸರ ವಂಶಾವಳಿ

ಯದುರಾಯ (ವಿಜಯ) – (೧೩೯೯–೧೪೨೩)

|

ಹಿರಿಯ ಬೆಟ್ಟದ ಚಾಮರಾಜ ಒಡೆಯರ್ I – (೧೪೨೩–೧೪೫೯)

|

ತಿಮ್ಮರಾಜ ಒಡೆಯರ್ I – (೧೪೫೯–೧೪೭೮)

|

ಹಿರಿಯ ಚಾಮರಾಜ ಒಡೆಯರ್ II – (೧೪೭೮–೧೫೧೩)

|

ಹಿರಿಯ ಬೆಟ್ಟದ ಚಾಮರಾಜ ಒಡೆಯರ್ III – (೧೫೧೩–೧೫೫೩)

|

ತಿಮ್ಮರಾಜ ಒಡೆಯರ್ II (೧೫೫೩–೧೫೭೨) | ಕೃಷ್ಣರಾಜ ಒಡೆಯರ್ | ಬೋಳ ಚಾಮರಾಜ ಒಡೆಯರ್ IV (೧೫೭೨–೧೫೭೬)

ಕೃಷ್ಣರಾಜ ಒಡೆಯರ್

|

ಬೆಟ್ಟದ (ದೇವರಾಜ) ಒಡೆಯರ್ (೧೫೭೬–೭೮)

|

ರಾಜ ಒಡೆಯರ್ I (೧೫೭೮–೧೬೧೭) | ಬೆಟ್ಟದ ಚಾಮರಾಜ ಒಡೆಯರ್ | ಮುಪ್ಪಿನ ದೇವರಾಜ ಒಡೆಯರ್ | ಚಾಮರಾಜ ಒಡೆಯರ್

|

ಮುಂದುವರಿದಿದೆ...

ನರಸರಾಜ ಒಡೆಯರ್ | ನಂಜರಾಜ ಒಡೆಯರ್ | ಬೆಟ್ಟದ ರಾಜ ಒಡೆಯರ್ | ಒಡೆಯರ್ II (೧೬೩೭–೧೬೩೮) | ಕಂಠೀರವ ಒಡೆಯರ್ I (ಕೆಂಪದೇವರಾಜ ಒಡೆಯರ್) (೧೬೫೯–೧೬೭೩)

ಚಾಮರಾಜ ಒಡೆಯರ್ V (೧೬೧೭–೧೬೩೭)

ದೊಡ್ಡ ದೇವರಾಜ ಒಡೆಯರ್ | ಚಿಕ್ಕದೇವರಾಜ ಒಡೆಯರ್ | ದೇವರಾಜ ಒಡೆಯರ್ (ಕೆಂಪದೇವರಾಜ ಒಡೆಯರ್) | ಮರಿದೇವರಾಜ ಒಡೆಯರ್ (೧೬೫೯–೧೬೭೩)

ಚಿಕ್ಕದೇವರಾಜ ಒಡೆಯರ್ (೧೬೭೩–೧೭೦೪) ಕಂಠೀರವ ಒಡೆಯರ್

ಕಂಠೀರವ ನರಸರಾಜ ಒಡೆಯರ್ II (೧೭೦೪–೧೭೧೪)

ಕೃಷ್ಣರಾಜ ಒಡೆಯರ್ V (೧೭೧೪–೧೭೩೨)

(ದತ್ತು) ಚಾಮರಾಜ ಒಡೆಯರ್ VI (೧೭೩೨–೧೭೩೪) | (ದತ್ತು) ಕೃಷ್ಣರಾಜ ಒಡೆಯರ್ II (೧೭೩೪–೧೭೬೬)

ನಂಜರಾಜ ಒಡೆಯರ್ (೧೭೬೬–೧೭೭೦) | ಬೆಟ್ಟದ ಚಾಮರಾಜ ಒಡೆಯರ್ VII(ದತ್ತು) (೧೭೭೦–೧೭೭೬) | ಖಾಸಾ ಚಾಮರಾಜ ಒಡೆಯರ್ VIII (೧೭೭೬–೧೭೯೬)

ಕೃಷ್ಣರಾಜ ಒಡೆಯರ್ III (೧೭೯೯–೧೮೩೧)

(ದತ್ತು) ಚಾಮರಾಜ ಒಡೆಯರ್ X (೧೮೮೧–೧೮೯೪)

ಕೃಷ್ಣರಾಜ ಒಡೆಯರ್ IV (೧೮೯೫–೧೯೪೦) | ಕಂಠೀರವ ನರಸಿಂಹರಾಜ ಒಡೆಯರ್

ದತ್ತು ಜಯಚಾಮರಾಜ ಒಡೆಯರ್ (೧೯೪೦–೧೯೫೦)

ಶ್ರೀಕಂಠದತ್ತ ನರಸಿಂಹರಾಜ ಒಡೆಯರು (ಪ್ರಸ್ತುತ ಇರುವ ರಾಜವಂಶಸ್ಥರು)

**ಸ್ವಾತಂತ್ರ್ಯ ಚಳವಳಿ :** ವ್ಯಾಪಾರ ಉದ್ದೇಶದಿಂದ ಭಾರತಕ್ಕೆ ಬಂದ ಬ್ರಿಟಿಷರು ೧೮ನೆಯ ಶತಮಾನದ ಸುಮಾರಿಗೆ ಇಲ್ಲಿನ ರಾಜಕೀಯ ಗೊಂದಲದ ಲಾಭ ಪಡೆದು ಸಾಮ್ರಾಜ್ಯ ದಾಹವನ್ನೂ ಬೆಳೆಸಿಕೊಂಡರು. ಸೈನಿಕ ಹಾಗೂ ರಾಜತಾಂತ್ರಿಕ ಚಟುವಟಿಕೆಗಳಿಂದ ವಿವಿಧ ಪ್ರದೇಶಗಳ ಮೇಲೆ ಕ್ರಮೇಣ ತಮ್ಮ ಅಧಿಕಾರವನ್ನು ವಿಸ್ತರಿಸತೊಡಗಿದರು. ದಿನೇ ದಿನೇ ಬೆಳೆಯುತ್ತಿದ್ದ ಈ ರಾಜ್ಯ ವಿಸ್ತರಣಾ ಕಾರ್ಯಕ್ಕೆ ಪ್ರಬಲ ವಿರೋಧಿಗಳಾಗಿ ಸೆಟೆದುನಿಂತ ದಕ್ಷಿಣ ಭಾರತದ ಎರಡು ಪ್ರಮುಖ ಶಕ್ತಿಗಳೆಂದರೆ

ಶ್ರೀರಂಗಪಟ್ಟಣದ ಸುಲ್ತಾನರು ಹಾಗೂ ಮರಾಠರು. ೧೭೯೯ರಲ್ಲಿ ಟಿಪ್ಪುವಿನ ಮರಣದೊಡನೆ ಮೈಸೂರಿನ ಪ್ರತಿರೋಧ ಕೊನೆಗೊಂಡುದಲ್ಲದೆ ೧೮೧೮ರ ಹೊತ್ತಿಗೆ ಮರಾಠರ ಸೋಲಿನಿಂದ ಕರ್ನಾಟಕವೂ ಸೇರಿದಂತೆ ಇಡೀ ದಕ್ಷಿಣ ಭಾರತ ಬ್ರಿಟಿಷರ ಭದ್ರಮುಷ್ಟಿಗೆ ಸಿಕ್ಕಿತು. ಈ ರಾಜಕೀಯ ಬೆಳವಣಿಗೆಯಿಂದ ಅವರ ಆಡಳಿತ ಕಾಲದಲ್ಲಿ ಸ್ಥಳೀಯ ರೀತಿ ನೀತಿಗಳು ಹಿಂದೆ ಸರಿದು ಪಾಶ್ಚಿಮಾತ್ಯ ಸಂಪ್ರದಾಯ, ಭಾವನೆ, ತಾಂತ್ರಿಕ ಸಾಧನೆ, ಮುಂತಾದವು ಕ್ರಮೇಣ ನೆಲೆಯೂರಿದವು. ಮೈಸೂರು ಸಂಸ್ಥಾನ ರಾಜಕೀಯ, ಆರ್ಥಿಕ, ಸಾಂಸ್ಕೃತಿಕ ಕ್ಷೇತ್ರಗಳಲ್ಲೂ ಪರಿವರ್ತನೆಯಾಗತೊಡಗಿತು.

ಮೈಸೂರು ಸಂಸ್ಥಾನದಲ್ಲಿ ಸ್ವಾತಂತ್ರ ಚಳವಳಿಯನ್ನು ಹೈದರ್ ಅಲಿ ಹಾಗೂ ಟಿಪ್ಪು ಕಾಲದಿಂದಲೇ ಗುರುತಿಸಬಹುದಾದರೂ ಅದು ಫಲಕಾರಿಯಾಗಲಿಲ್ಲ. ಗಾಂಧಿಯುಗದ ಸ್ವಾತಂತ್ರ ಚಳವಳಿ ಮೈಸೂರು ಪ್ರಾಂತದಲ್ಲಿ ಗಮನಾರ್ಹ ಪ್ರಭಾವ ಬೀರಿತು. ೧೯೨೦ರಲ್ಲಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಕಮಿಟಿ ಅಸ್ಥಿತ್ವಕ್ಕೆ ಬಂದು, ಮರುವರ್ಷ ಮೈಸೂರು ಜಿಲ್ಲಾ ಕಾಂಗ್ರೇಸ್ ಸಮಿತಿ ಬೆಂಗಳೂರಿನಲ್ಲಿ ಸೆಟ್ಲೂರ್ ಅಧ್ಯಕ್ಷತೆಯಲ್ಲಿ ನಡೆಯಿತು. ಅಸಹಕಾರ ಚಳುವಳಿ, ಕಾನೂನು ಭಂಗ ಚಳುವಳಿ, ಅರಣ್ಯ ಸತ್ಯಾಗ್ರಹ, ಕರನಿರಾಕರಣೆ ಮುಂತಾದವುಗಳಲ್ಲಿ ತಾಲೂಕಿನ ಜನತೆ ಸ್ಪಂದಿಸುವಂತಾಯಿತು. ೧೯೩೪ ರಲ್ಲಿ ಮೈಸೂರು ಕಾಂಗ್ರೆಸ್ ಅಸ್ತಿತ್ವಕ್ಕೆ ಬಂದಿತು. ೧೯೩೮ ರಲ್ಲಿ ನಡೆದ ಶಿವಪುರ ಧ್ವಜ ಸತ್ಯಾಗ್ರಹದಲ್ಲಿ ಮೈಸೂರು ಕಾಂಗ್ರೆಸ್‌ನ ೨೫,೦೦೦ ಕಾರ್ಯಕರ್ತರು ಟಿ. ಸಿದ್ಧಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ಸೇರಿ ತ್ರಿವಣ ಧ್ವಜವನ್ನು ಹಾರಿಸಿದರು. ಇದರ ಸ್ವಾಗತ ಸಮಿತಿಯ ಅಧ್ಯಕ್ಷರಾದ ಸಾಹುಕಾರ ಚನ್ನಯ್ಯ ಸೇರಿದಂತೆ ಕೆ.ಟಿ. ಭಾಷ್ಯಂ, ಕೆ.ಸಿ. ರೆಡ್ಡಿ, ಸಿದ್ಧಯ್ಯ, ಬಳ್ಳಾರಿ ಸಿದ್ಧಮ್ಮ, ಯಶೋಧರ ದಾಸಪ್ಪ, ತುಳಸೀದಾಸಪ್ಪ ಮುಂತಾದವರು ದಸ್ತಗಿರಿಯಾದರು. ಶಿವಪುರದ ಕಾಂಗ್ರೆಸ್ ಮೈಸೂರಿನಲ್ಲಿ ಜವಾಬ್ದಾರಿ ಸರ್ಕಾರದ ಸ್ಥಾಪನೆಯೂ ಸೇರಿದಂತೆ ೧೮ ನಿರ್ಣಯಗಳನ್ನು ಅಂಗೀಕರಿಸಿತು. ೧೯೪೨ ರಲ್ಲಿ ಭಾರತಕ್ಕೆ ಬಂದ ಕ್ರಿಪ್ಸ್ ನಿಯೋಗದ ವಿರುದ್ಧ ನಡೆದ ಕ್ವಿಟ್ ಇಂಡಿಯಾ ಚಳವಳಿ ಮೈಸೂರಿನಲ್ಲಿ ಉಗ್ರಗೊಂಡು ಅನೇಕ ಸ್ವಾತಂತ್ರ ಹೋರಾಟಗಾರರು ದಸ್ತಗಿರಿಯಾದರು. ಶಾಲೆ ಕಾಲೇಜುಗಳನ್ನು ವಿದ್ಯಾರ್ಥಿಗಳೂ, ವಕೀಲರು ಕೋರ್ಟುಗಳನ್ನೂ ಕಾರ್ಮಿಕರು ಕಾರ್ಖಾನೆಗಳನ್ನೂ ತೊರೆದು ಚಳವಳಿಯಲ್ಲಿ ಧುಮುಕಿದರು.

**ಗಾಂಧೀಜಿ ಮತ್ತು ಮೈಸೂರು ತಾಲೂಕು :** ಅನಾರೋಗ್ಯದಿಂದಾಗಿ ವಿಶ್ರಾಂತಿ ಪಡೆಯಲು ೧೯೨೭ರ ಏಪ್ರಿಲ್‌ನಲ್ಲಿ ನಂದಿಗೆ ಬಂದಿದ್ದ ಇವರು, ಚೇತರಿಸಿಕೊಂಡ ನಂತರ ಜುಲೈ ೨೩ರಂದು ಮೈಸೂರು ನಗರಕ್ಕೆ ಬಂದಿದ್ದಾಗ ನೆರೆಯ ಕೆ.ಆರ್.ಎಸ್., ಕೆ.ಆರ್.ನಗರ ಹಾಗೂ ಶ್ರೀರಂಗಪಟ್ಟಣಗಳಿಗೂ ಭೇಟಿ ನೀಡಿದ್ದರು. ಮುಂದೆ ೧೯೩೪ರ ಹರಿಜನ ಪ್ರವಾಸ ಸಂದರ್ಭದಲ್ಲಿ ೪–೧–೩೪ರಂದು ರಾತ್ರಿ ಮೈಸೂರಿನಲ್ಲಿ ತಂಗಿದ್ದ ಗಾಂಧೀಜಿ, ಮಾರನೆಯ ದಿನ ತಗಡೂರು, ಬದನವಾಳು, ನಂಜನಗೂಡುಗಳಿಗೆ ಭೇಟಿ ನೀಡಿ, ರಾತ್ರಿ ಮೈಸೂರಿನಲ್ಲಿ ತಂಗಿದ್ದು, ೬–೧–೩೪ ರಂದು ಮಂಡ್ಯದತ್ತ ಪ್ರಯಾಣ ಬೆಳೆಸಿದರು. ಅದರ ನೆನಪಾಗಿ ಮೈಸೂರಿನ ಗಾಂಧಿಚೌಕ ನಮ್ಮ ಮುಂದಿದೆ.

ಈ ತಾಲೂಕಿನ ಆರ್. ಕೃಷ್ಣಮೂರ್ತಿ, ಬಿ.ವಿ. ಕೃಷ್ಣಪ್ಪ, ಎಚ್. ವೈ. ಶಾರದಾ ಪ್ರಸಾದ್, ಟಿ.ಎಸ್. ಸುಬ್ಬಣ್ಣ, ಎಂ.ವಿ. ಕೃಷ್ಣಪ್ಪ, ಗಫಾರ್ ಖಾನ್, ನಾಡಿಗ್ ಕೃಷ್ಣಮೂರ್ತಿ, ಎನ್.ಡಿ. ಶ್ರೀರಂಗ, ಎಂ.ದಾಸಪ್ಪ, ಚಾರ್, ಎ.ಸಿ. ಭೈರಪ್ಪ, ಕೆ. ಪುಟ್ಟಸ್ವಾಮಿ, ಮಾದಪ್ಪಗೌಡ, ಪದಕಿ ಕೃಷ್ಣಮೂರ್ತಿ, ಎಲ್.ವಿ. ರಾಜಗೋಪಾಲ್, ಶ್ರೀನಿವಾಸಚಾರ್, ಅಗರಂಗಯ್ಯ, ಟಿ.ಎಲ್. ವಾಸುದೇವಮೂರ್ತಿ, ತಗಡೂರು ರಾಮಚಂದ್ರರಾವ್, ಎಸ್. ಚನ್ನಯ್ಯ, ಎಚ್.ಸಿ. ದಾಸಪ್ಪ, ಯಶೋಧರಾ ದಾಸಪ್ಪ, ಎಸ್. ರಂಗರಾಮಯ್ಯ, ವಿ.ಎಸ್. ವೆಂಕೋಬರಾವ್, ಪಾಲಹಳ್ಳಿ ಸೀತಾರಾಮಯ್ಯ, ಡಿ.ಎನ್. ಸೀತಾರಾಮರಾವ್. ಟಿ.ಮರಿಯಪ್ಪ, ಟಿ.ಸುನಂದಮ್ಮ, ಸುಬ್ಬಮ್ಮಜೋಯಿಸ್, ಎಚ್.ವಿ. ಸುಬ್ಬರಾಮಯ್ಯ, ಸೂರ್ಯ ನಾರಾಯಣ ಪಂಡಿತ, ಬಿ. ನಾರಾಯಣಸ್ವಾಮಿ, ಟಿ. ಬನುಮಯ್ಯ, ಬಿ. ಲಿಂಗಪ್ಪ, ಡಿ.ಎಸ್. ಜಗದೀಶ್, ರಾಗಿಮಂಡಿ ಚೌಡಯ್ಯ, ಸೇಠ್‌ಬದರೀ ಪ್ರಸಾದ್, ಪಿ.ಎನ್. ಸಂಗಪ್ಪ, ಬಿ. ಸುಬ್ಬರಾವ್ ಉಪಾಧ್ಯ, ಪಿ. ಗೋಪಾಲ, ಕೃಷ್ಣಶೆಟ್ಟಿ, ಸಿ.ಪಿ. ವೆಂಕಟನರಸಿಂಹನ್, ಟಿ. ರಾಜನ್, ಎಂ. ಶಂಕರಯ್ಯ, ಎ. ಶಿವಣ್ಣ, ಸಿಂಧುವಳ್ಳಿ ಸುಬ್ರಮ್ಮಣ್ಯಂ, ಎ.ಆರ್.ಲಕ್ಷಮ್ಮ, ಖಾದ್ರಿ ರಾಮಣ್ಣ ಎ.ಎನ್. ಸೂರ್ಯನಾರಾಯಣರಾವ್, ಪಾರ್ವತಮ್ಮ, ಎಂ.ಎನ್. ಜೋಯಿಸ್, ಹ.ಕ. ಸಿದ್ಧಲಿಂಗಶಾಸ್ತ್ರಿ, ಬಿ.ಎಸ್. ಶ್ರೀಕಂಠಯ್ಯ, ರಾಜಗೋಪಾಲಯ್ಯಂಗಾರ್, ವಿ. ರಾಮಣ್ಣ ಜಿ.ಎಲ್. ಎನ್. ಅಯ್ಯರ್, ಎಲ್. ರಾಮಯ್ಯಶೆಟ್ಟಿ, ಬಿ.ಆರ್. ಪ್ರಾಣೇಶ ರಾವ್ ಮುಂತಾದವರು ಸಂಸ್ಥಾನದ ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿದ್ದವರು.

೧೯೪೭ರ ಆಗಸ್ಟ್ ೧೫ರಂದು ಭಾರತ ಸ್ವಾತಂತ್ರ್ಯ ಪಡೆಯಿತು. ಈ ಸ್ವಾತಂತ್ರ್ಯ ಚಳುವಳಿಯಲ್ಲಿ ಕರ್ನಾಟಕದ ಪಾತ್ರ ಹಿರಿದಾದಂತೆ, ಮೈಸೂರು ಸಂಸ್ಥಾನದ ಹಾಗೂ ಮೈಸೂರಿನ ಪಾತ್ರವೂ ಶ್ಲಾಘನೀಯವಾದದು. ಮಹಾರಾಜ ಜಯಚಾಮರಾಜರು ವಿಲೀನ ಪತ್ರಕ್ಕೆ ಸಹಿ ಹಾಕಿ ಮೈಸೂರು ಸಂಸ್ಥಾನವನ್ನು ಭಾರತದ ಒಕ್ಕೂಟಕ್ಕೆ ಸೇರಿಸಿದರು. ಆದರೆ ಮೈಸೂರಿನ ಜನತೆಗೆ ಪ್ರಜಾಪ್ರಭುತ್ವಯುಕ್ತ ಪೂರ್ಣ ಜವಾಬ್ದಾರಿ ಸರ್ಕಾರ ರಚನೆಗೆ ವಿಳಂಬಿಸಿದರು. ಹಾಗಾಗಿ ಮೈಸೂರು ಕಾಂಗ್ರೆಸ್ ಜವಾಬ್ದಾರಿ ಸರ್ಕಾರ ಸ್ಥಾಪನೆಗಾಗಿ 'ಮೈಸೂರು ಚಲೋ' ಚಳವಳಿಯನ್ನು ಸೆಪ್ಟೆಂಬರ್ ೩, ೧೯೪೭ರಂದು ಬೆಂಗಳೂರಿನ ಬನಪ್ಪ ಪಾರ್ಕಿನಿಂದ ಕೆ.ಸಿ.ರೆಡ್ಡಿ ನಾಯಕತ್ವದಲ್ಲಿ ಸತ್ಯಾಗ್ರಹವನ್ನು ಆರಂಭಿಸಿತು. ಇದರಲ್ಲಿ ಬಳ್ಳಾರಿ ಸಿದ್ಧಮ್ಮ, ಹೆಚ್.ಸಿ. ದಾಸಪ್ಪ, ಗೌರಮ್ಮ, ಯಶೋಧರದಾಸಪ್ಪ, ಎಸ್. ನಿಜಲಿಂಗಪ್ಪ, ಮರಿಯಪ್ಪ, ಚನ್ನಪ್ಪ, ಟಿ. ಸಿದ್ಧಲಿಂಗಯ್ಯ ಮತ್ತಿತರ ಗಣ್ಯರು ಭಾಗವಹಿಸಿದ್ದರು. ಸರ್ಕಾರ ಮುಂಜಾಗ್ರತೆಗಾಗಿ ಸೆಪ್ಟೆಂಬರ್ ೩ರಂದು ಎಲ್ಲಾ ರಾಷ್ಟ್ರನಾಯಕರನ್ನು ಬಂಧಿಸಿತು. ಮಡಿಕೇರಿಯಿಂದ ಮೈಸೂರಿಗೆ ಬಂದ ಎಸ್. ನಿಜಲಿಂಗಪ್ಪ ಬಂಧಿತರಾದರು. ಆದರೂ ರಾಜ್ಯದ ಎಲ್ಲಾ ಕಡೆಯಿಂದ ಬಂದ ಸತ್ಯಾಗ್ರಹಿಗಳು ಮೈಸೂರು ಅರಮನೆ ಮುಂದೆ ಸತ್ಯಾಗ್ರಹ ಹೂಡಿದರು. ಮೈಸೂರಿನಲ್ಲಿ ಕೂಡಲೇ ಜವಾಬ್ದಾರಿ ಸರ್ಕಾರ ಸ್ಥಾಪಿಸುವುದು, ಚುನಾಯಿತ ಪ್ರತಿನಿಧಿಗಳಿರುವ ರಾಜ್ಯಾಂಗ ರಚನಾಸಭೆ ರಚಿಸುವುದು, ರಾಜ್ಯಾಂಗ ರಚನೆಯಾಗುವವರೆಗೂ ತಾತ್ಕಾಲಿಕ ಸರ್ಕಾರವನ್ನು

ಏರ್ಪಡಿಸುವುದು, ರಾಜಕೀಯ ಬಂಧಿಗಳ ಬಿಡುಗಡೆ ಇತ್ಯಾದಿ ಬೇಡಿಕೆಗಳನ್ನು ಮುಂದಿಟ್ಟರು. ಈ ಚಳವಳಿಯ ಅಂಗವಾಗಿ ಮೈಸೂರು ಮಾತ್ರವಲ್ಲದೆ ಮೈಸೂರು ಸಂಸ್ಥಾನದಾದ್ಯಂತ ಸಭೆಗಳು ನಡೆದು ಸತ್ಯಾಗ್ರಹಿಗಳು ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್ ಮತ್ತು ತಂಬೂಚೆಟ್ಟಿಯವರ ವಿರುದ್ಧ ಘೋಷಣೆ ಕೂಗಿದರು. ವಿದ್ಯಾರ್ಥಿಗಳು ಶಾಲಾ ಕಾಲೇಜುಗಳನ್ನೂ ಕಾರ್ಮಿಕರು ಕಾರ್ಖಾನೆಗಳನ್ನೂ ತೊರೆದು ಚಳವಳಿಗೆ ಇಳಿದರು.

ಸ್ತ್ರೀಯರು ಸರ್ಕಾರಿ ಕಚೇರಿಗಳ ಮುಂದೆ ಪಿಕೆಟಿಂಗ್ ಹೂಡಿದರು. ಅನೇಕ ಕಡೆ ಅಂಚೆ, ತಂತಿ, ರೈಲ್ವೆ ಕಚೇರಿಗಳಿಗೆ ಧಕ್ಕೆಯುಂಟು ಮಾಡಲಾಯಿತು. ಪೊಲೀಸರು ಗೋಲಿಬಾರ್, ಲಾಠಿ ಚಾರ್ಜ್ ಹಾಗೂ ಗುಂಡು ಹಾರಿಸಿ ಹಲವರನ್ನು ಕೊಂದರಲ್ಲದೆ, ಸುಮಾರು ೪೦೦೦ ಜನರನ್ನು ದಸ್ತಗಿರಿ ಮಾಡಿದರು. ಮೈಸೂರಿನಲ್ಲಿ ನಡೆದ ಅರಮನೆ ಸತ್ಯಾಗ್ರಹ ಚಳುವಳಿ ಮೆರವಣಿಗೆಯಲ್ಲಿ ಹಾರ್ಡ್ವಿಕ್ ಶಾಲೆಯ ರಾಮಸ್ವಾಮಿ ಎಂಬ ವಿದ್ಯಾರ್ಥಿ ಗುಂಡೇಟಿಗೆ ಬಲಿಯಾದ. ಶಂಕರಪ್ಪ ಎಂಬ ವಿದ್ಯಾರ್ಥಿ ಪೋಲೀಸರ ಬೂಟು ಕಾಲು ತುಳಿತಕ್ಕೆ ಸಿಕ್ಕಿ ಹುತಾತ್ಮನಾದ. ರಾಮಸ್ವಾಮಿಯ ನೆನಪಿಗಾಗಿ ಈಗಲೂ ಮೈಸೂರಿನ ಒಂದು ವೃತ್ತಕ್ಕೆ ರಾಮಸ್ವಾಮಿ ವೃತ್ತ ಎಂದು ನಾಮಕರಣ ಮಾಡಲಾಗಿದೆ.

ಮೈಸೂರಿನ ಅರಮನೆ ಸತ್ಯಾಗ್ರಹ ೪೨ ದಿನ ನಡೆಯಿತು. ಸತ್ಯಾಗ್ರಹಿಗಳು ಅರಮನೆಯೂ ಸೇರಿದಂತೆ ಎಲ್ಲ ಸಾರ್ವಜನಿಕ ಕಟ್ಟಡಗಳ ಮೇಲೆ ರಾಷ್ಟ್ರಧ್ವಜ ಹಾರಿಸಿ ಪ್ರತಿಭಟನೆ ತೋರಿಸಿದರು. ಕೊನೆಗೆ ಸತ್ಯಾಗ್ರಹಿಗಳಿಗೆ ಮಣಿದ ಒಡೆಯರು ಕಾಂಗ್ರೆಸ್ ನಾಯಕರೊಂದಿಗೆ ಒಪ್ಪಂದಕ್ಕೆ ಬಂದು, ರಾಜಕೀಯ ಬಂಧಿಗಳನ್ನು ಬಿಡುಗಡೆಗೊಳಿಸಿದರು. ಕೆ.ಸಿ. ರೆಡ್ಡಿ ದಿವಾನರೊಂದಿಗೆ ಮಾತುಕತೆ ನಡೆಸಿ ಸತ್ಯಾಗ್ರಹವನ್ನು ಹಿಂತೆಗೆದುಕೊಂಡರು. ಮಹಾರಾಜರ ಆದೇಶದಂತೆ ಕೆ.ಸಿ. ರೆಡ್ಡಿ ಅಕ್ಟೋಬರ್ ೨೪ ರ ವಿಜಯದಶಮಿಯಂದು ಜವಾಬ್ದಾರಿ ಸರ್ಕಾರವನ್ನು ರಚಿಸಿದರು. ಮೈಸೂರು ಪ್ರಜಾಪ್ರತಿನಿಧಿಸಭೆಯೇ ಮುಂದೆ ಶಾಸನಸಭೆಯಾಗಿ ಕರ್ನಾಟಕದ ಪ್ರಥಮ ಮಂತ್ರಿಮಂಡಲ ಸಭೆಯಾಗಿ ಮಾರ್ಪಟ್ಟಿತು.

ಕೆ.ಸಿ.ರೆಡ್ಡಿ ಅಕ್ಟೋಬರ್ ೨೯ರಂದು ಮೈಸೂರು ರಾಜ್ಯದ ಪ್ರಥಮ ಮುಖ್ಯ ಮಂತ್ರಿಯಾಗಿಯೂ ಜಯಚಾಮರಾಜ ಒಡೆಯರ್ ಪ್ರಥಮ ರಾಜಪ್ರಮುಖರಾಗಿಯೂ ಆಯ್ಕೆಗೊಂಡರು. ಕೆ.ಸಿ. ರೆಡ್ಡಿಯ ಮಂತ್ರಿಮಂಡಲದಲ್ಲಿ ಕಾಂಗ್ರೆಸ್‌ನ ಆರು ಹಾಗೂ ಮೂವರು ಕಾಂಗ್ರೆಸ್ಸೇತರ ಮಂತ್ರಿಗಳು ಆಯ್ಕೆಗೊಂಡರು. ಕಾಂಗ್ರೆಸ್ ಮಂತ್ರಿಗಳಾಗಿ ೧. ಕೆ.ಸಿ. ರೆಡ್ಡಿ – ಮುಖ್ಯಮಂತ್ರಿ, ೨. ಎಚ್. ಸಿ. ದಾಸಪ್ಪ – ಕೈಗಾರಿಕಾ ಖಾತೆ, ೩. ಕೆ.ಟಿ. ಭಾಷ್ಯಂ – ಕಾನೂನು ಖಾತೆ, ೪. ಆರ್. ಚನ್ನಿಗರಾಮಯ್ಯ – ಸ್ಥಳೀಯ ಸ್ವಯಂ ಆಡಳಿತ, ೫. ಟಿ. ಮರಿಯಪ್ಪ – ಗೃಹ ಸಚಿವಖಾತೆ, ೬. ಎಚ್. ಸಿದ್ಧಯ್ಯ– ಕಂದಾಯ ಹಾಗೂ ರೈಲ್ವೆ ಖಾತೆ. ಕಾಂಗ್ರೆಸ್ಸೇತರರು : ೧. ಮಹಮದ್ ಜನಾಬ್ ಷರೀಫ್ – ಆರೋಗ್ಯ ಹಾಗೂ ಅಬಕಾರಿ ಖಾತೆ. ೨. ಡಿ. ಎಚ್. ಚಂದ್ರಶೇಖರಯ್ಯ ಶಿಕ್ಷಣ ಖಾತೆ ಹಾಗೂ ೩. ಪಿ. ಸುಬ್ಬರಾಯಶೆಟ್ಟಿ – ನಗರಾಭಿವೃದ್ಧಿ ಖಾತೆ ವಹಿಸಿಕೊಂಡರು.

## ಚುನಾವಣೆಗಳು

ಸಾರ್ವತ್ರಿಕ ಚುನಾವಣೆಗಳು ೧೯೫೨ರಲ್ಲಿ ದೇಶದಲ್ಲಿ ನಡೆಯುವುದಕ್ಕೆ ಅನೇಕ ದಶಕಗಳಿಗೂ ಮೊದಲೇ, ಸಂಸ್ಥಾನದಲ್ಲಿ ಅಸ್ತಿತ್ವಕ್ಕೆ ಬಂದ ಪ್ರಜಾಪ್ರತಿನಿಧಿ ಸಭೆ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಒಂದು ಮೈಲಿಗಲ್ಲಾಗಿತ್ತು. ಆರಂಭದಲ್ಲಿ ಒಂದು ವರ್ಷವಿದ್ದು ಅಂತಿಮವಾಗಿ ಇದರ ಸದಸ್ಯತ್ವದ ಅವಧಿ ನಾಲ್ಕು ವರ್ಷವಾಗಿದ್ದು೧೮೮೧–೧೯೪೯ರ ಅವಧಿಯಲ್ಲಿ ಪ್ರಜಾಪ್ರತಿನಿಧಿ ಸಭೆಗೆ ಆಯ್ಕೆಗೊಂಡ ಗಣ್ಯರ ಕೆಲವರನ್ನು ಇಲ್ಲಿ ಪ್ರತಿನಿಧಿಕವಾಗಿ ಉಲ್ಲೇಖಿಸಲಾಗಿದೆ. ಕೃಷ್ಣೇಗೌಡ ನಾಗನಹಳ್ಳಿ (೧೮೮೧, ೮೪, ೮೬,೯೪), ಲಕ್ಷ್ಮಣ್ ಜಾಗಿರದಾರ (೧೮೮೧–೧೯೦೭), ಮಹ್ಮದ್ ಅಮಿನುದ್ದೀನ್ (೧೮೮೬), ಲಿಂಗೇಗೌಡ (೧೯೦೮–೨೩), ಸಿದ್ದಪ್ಪ ಟಿ.ಎಂ. (೧೯೧೨–೧೯), ಕೃಷ್ಣಸ್ವಾಮಿರಾವ್ (೧೯೦೯–೨೯), ಮಾದಪ್ಪ (೧೯೦೮–೨೩), ಬನುಮಯ್ಯ (೧೯೧೨–೧೪), ಸಯ್ಯದ್ ಮಹ್ಮದ್‌ಸಾಬ್ (೧೯೦೮–೧೦), ಮಹ್ಮದ್ ಸೇಟ್ (೧೯೨೪–೨೯), ಎಚ್. ಸಿದಾಸಪ್ಪ (೧೯೨೭–೩೩), ವೆಂಕಟಕೃಷ್ಣಯ್ಯ (೧೦೨೪–೨೯), ಸಾವಂದಯ್ಯ (೧೯೨೭–೪೦), ಪಿ. ಸೀತಾರಾಮಯ್ಯ (೧೯೨೭–೪೯), ಅಹ್ಮದ್ ಖಾನ್ (೧೯೪೧–೪೪), ಅಬ್ದುಲ್ ಗದ್ದಾರ್‌ಖಾನ್ (೧೯೪೪–೪೫) ಮುಂತಾದವರನ್ನು ಇಲ್ಲಿ ಹೆಸರಿಸಲಾಗಿದೆ.

ಮುಂದೆ ಸ್ವಾತಂತ್ರ್ಯನಂತರ ೧೯೫೨ರಲ್ಲಿ ನಡೆದ ಪ್ರಥಮ ವಿಧಾನಸಭಾ ಚುನಾವಣೆಯಲ್ಲಿ ತಾಲೂಕಿನಲ್ಲಿ ಮೈಸೂರು ಉತ್ತರ, ಮೈಸೂರು ದಕ್ಷಿಣ ಹಾಗೂ ಮೈಸೂರು ಗ್ರಾಮಾಂತರ ಎಂಬ ಮೂರು ವಿಧಾನಸಭಾ ಸ್ಥಾನಗಳಿದ್ದು, ಈ ತಾಲೂಕು ದ್ವಿಸದಸ್ಯರನ್ನು ಒಳಗೊಂಡ ಮೈಸೂರು ಲೋಕಸಭಾ ಕ್ಷೇತ್ರದ ವ್ಯಾಪ್ತಿಗೊಳಪಟ್ಟಿತ್ತು. ಮುಂದೆ ೧೯೬೨ರಲ್ಲಿ ಮೈಸೂರು ಹಾಗೂ ಚಾಮರಾಜನಗರ ಲೋಕಸಭಾ ಕ್ಷೇತ್ರಗಳು ರಚಿಸಲ್ಪಟ್ಟವು. ೧೯೬೭ರ ವಿಧಾನಸಭಾ ಚುನಾವಣಾ ವೇಳೆಗೆ ತಾಲೂಕಿನ ಮೂರು ವಿಧಾನಸಭಾ ಕ್ಷೇತ್ರಗಳ ಹೆಸರನ್ನು (೧) ಕೃಷ್ಣರಾಜ, (೨) ನರಸಿಂಹರಾಜ ಹಾಗೂ (೩) ಚಾಮುಂಡೇಶ್ವರಿ ಕ್ಷೇತ್ರಗಳೆಂದು ಕರೆಯಲಾಯಿತು. ಮುಂದೆ ೧೯೭೮ರಲ್ಲಿ ನಾಲ್ಕನೆಯ ಕ್ಷೇತ್ರವಾಗಿ ಚಾಮರಾಜ ಕ್ಷೇತ್ರವು ಸೇರ್ಪಡೆಗೊಂಡಿತು. ಅದರಂತೆ ಇಲ್ಲಿ ೧೯೫೨–೨೦೦೯ರವರೆಗೆ ಜರುಗಿರುವ ಲೋಕಸಭಾ ಹಾಗೂ ವಿಧಾನಸಭಾ ಮಹಾಚುನಾವಣೆ–ಉಪಚುನಾವಣೆಗಳಲ್ಲಿ ತಾಲೂಕಿನ ವಿವಿಧ ಕ್ಷೇತ್ರಗಳಿಂದ ಆಯ್ಕೆಯಾದ ಅಭ್ಯರ್ಥಿ, ಪಕ್ಷ, ಗಳಿಸಿದ ಮತ ಹಾಗೂ ಶೇಕಡವಾರು ಪ್ರಮಾಣ ಹಾಗೂ ದ್ವಿತೀಯ ಸ್ಥಾನ ಪಡೆದ ಪಕ್ಷ ಇತ್ಯಾದಿ ವಿವರವನ್ನು ಇಲ್ಲಿ ನೀಡಲಾಗಿದೆ. ಹೆಚ್ಚಿನ ವಿವರಣೆ ಬೆಂಗಳೂರಿನಲ್ಲಿರುವ ರಾಜ್ಯ ಚುನಾವಣಾ ಆಯೋಗದಲ್ಲಿ ಲಭಿಸುತ್ತದೆ.

# ಮೈಸೂರು ಲೋಕಸಭಾಕ್ಷೇತ್ರದ ಚುನಾವಣಾ ಫಲಿತಾಂಶ (೧೯೫೨–೨೦೦೯)

| ಚುನಾವಣಾ ವರ್ಷ ಹಾಗೂ ಕ್ಷೇತ್ರದ ಹೆಸರು | ಆಯ್ಕೆಯಾದ ಅಭ್ಯರ್ಥಿಯ ಹೆಸರು ಪಕ್ಷ, ಗಳಿಸಿದ ಮತ ಹಾಗೂ ಶೇಕಡವಾರು ಪ್ರಮಾಣ | ದ್ವಿತೀಯ ಸ್ಥಾನ ಪಡೆದ ಪಕ್ಷ, ಗಳಿಸಿದ ಮತ ಹಾಗೂ ಶೇಕಡವಾರು ಪ್ರಮಾಣ |
|---|---|---|
| ೧ | ೨ | ೩ |
| ೧೯೫೨ ದ್ವಿ ಸದಸ್ಯ | ೧) ಎನ್.ರಾಚಯ್ಯ (ಭಾರಾಕಾಂ) ೨,೦೯,೨೦೩ (೨೯.೩೭) | ಕ.ಮ.ಪ್ರ.ಪಾ., ೧,೪೨,೩೬೩ (೧೯.೯೯) |
| | ೨) ಎಂ.ಎಸ್.ಗುರುಪಾದಸ್ವಾಮಿ (ಕೆಎಂಪಿಪಿ)೧,೯೬,೧೭೫ (೨೭.೫೪) | ಭಾ.ರಾ.ಕಾಂ., ೧,೬೪,೫೭೭ (೨೩.೧೦) |
| ೧೯೫೭ ದ್ವಿಸದಸ್ಯ | ೧) ಎನ್.ಶಂಕರಯ್ಯ (ಭಾರಾಕಾಂ) ೨,೩೯,೫೭೨ (೩೧.೭೧) | ಪ್ರ.ಸ.ಪ., ೧,೮೪,೩೭೦ (೨೪.೪೦) |
| | ೨) ಎಸ್.ಎಂ.ಸಿದ್ಧಯ್ಯ (ಭಾರಾಕಾಂ) ೧,೮೬,೧೯೫ (೨೪–೬೫) | ಪ್ರ.ಸ.ಪ., ೧,೪೫,೩೨೩ (೧೯.೨೪) |
| ೧೯೬೨ ಮೈಸೂರು* | ಎಂ.ಶಂಕರಯ್ಯ (ಭಾರಾಕಾಂ) ೯೭,೯೪೯ (೪,೨೮೫) | ಸ್ವ.ಪ., ೪೦,೦೪೩ (೧೭.೫೨) |
| ೧೯೬೭ ಮೈಸೂರು | ಎಚ್.ಡಿ.ತುಳಸಿದಾಸ್ (ಭಾರಕಾಂ) ೧,೦೮,೮೫೫ (೪೦.೦೯) | ಪಕ್ಷೇತರ, ೯೩,೫೬೬ (೩೪.೪೬) |
| ೧೯೭೧ ಮೈಸೂರು | ಎಚ್.ಡಿ.ತುಳಸಿದಾಸ್ ರಾ.ಕಾಂ (ಜೆ) ೨,೧೩,೭೨೪ (೭೪.೪೧) | ರಾ.ಕಾಂ.(ಎನ್), ೯೬,೨೭೨ (೩೫.೩೧) |
| ೧೯೭೭ ಮೈಸೂರು | ಎಚ್.ಡಿ.ತುಳಸಿದಾಸ್ (ಕಾಂಗ್ರೆ) ೧,೯೫,೬೫೭ (೫೩.೬೮) | ಭಾ.ಮೋ.ದ., ೧,೫೩,೯೮೯ (೪೨.೨೫) |
| ೧೯೮೦ ಮೈಸೂರು | ಎಂ.ರಾಜಶೇಖರ ಮೂರ್ತಿ (ಕಾಂಗ್ರೆ) ೧,೯೫,೭೨೪ (೪೯.೪೭) | ಭಾ.ಪಾ.ಕಾಂ.(ಅರಸು), ೧,೧೨,೬೮೮ (೨೮.೪೮) |
| ೧೯೮೪ ಮೈಸೂರು | ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ (ಕಾಂಗ್ರೆ) ೨,೪೭,೭೫೪ (೫೪.೭೦) | ಪಕ್ಷೇತರ, ೧,೮೩,೧೪೪ (೪೦.೩೩) |
| ೧೯೮೯ ಮೈಸೂರು | ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ (ಕಾಂಗ್ರೆ) ೩,೮೪,೮೮೮ (೫೫.೬) | ಜ.ಪ.(ಜೆ.ಪಿ), ೧,೩೫,೫೨೪ (೧೯.೬) |

| ೧ | ೨ | ೩ |
|---|---|---|
| ೧೯೯೧ ಮೈಸೂರು | ಶ್ರೀಮತಿ ಚಂದ್ರಪ್ರಭಾ ಅರಸು (ಕಾಂಗ್ರೆ) ೨,೨೫,೮೮೧ (೩೦.೪೭) | ಭಾ.ಜ.ಪ., ೨,೦೮,೯೯ (೩೬.೫೨) |
| ೧೯೯೬ ಮೈಸೂರು | ಶ್ರೀಕಂಠದತ್ತ ನರಸಿಂಹರಾಜ ಒಡೆಯರು ೨,೫೮,೨೯ (೩೪.೮೨) | ಜ.ದ., ೨,೪೬,೬೩೨ (೩೩.೨೫) |
| ೧೯೯೮** ಮೈಸೂರು | ಸಿ.ಎಚ್.ವಿಜಯಶಂಕರ್ (ಭಾಜಪ) ೩,೫೫,೮೪೬ (೪೨.೧೦) | ಭಾ.ರಾ.ಕಾಂ., ೨,೫೨,೮೨೨ (೨೯.೯೧) |
| ೧೯೯೯ ಮೈಸೂರು | ಶ್ರೀಕಂಠದತ್ತ ನರಸಿಂಹರಾಜ ಒಡೆಯರು (ಕಾಂಗ್ರೆ) ೩,೩೮,೦೫೧ (೩೮) | ಭಾ.ಜ.ಪ., ೩,೨೪,೬೨೦ (೩೬) |
| ೨೦೦೪ ಮೈಸೂರು | ಸಿ.ಎಚ್.ವಿಜಯಶಂಕರ್ (ಭಾಜಪ) ೩,೧೬,೪೪೨ (೩೩.೦೬) | ಜ.ದ.(ಜಾ), ೩,೦೬೨೯೨ (೩೨) |
| ೨೦೦೯ ಮೈಸೂರು | ಎಚ್. ವಿಶ್ವನಾಥ್ (ಭಾರಾಕಾಂ) ೩,೫೪,೮೧೧ (೩೬.೪೩) | ಭಾ.ಜ.ಪ., ೩,೪೭,೧೧೯ (೩೫.೬೪) |

* ಮೈಸೂರು ಜಿಲ್ಲೆಯಲ್ಲಿ ಚಾಮರಾಜನಗರ ಲೋಕಸಭಾ ಕ್ಷೇತ್ರವನ್ನು ರೂಪಿಸಲಾಯಿತು.

** ಮೈಸೂರು ಜಿಲ್ಲೆಯು ವಿಭಜಿಸಲ್ಪಟ್ಟು (೧೯೯೭) ಚಾಮರಾಜನಗರ ಜಿಲ್ಲೆಯು ಅಸ್ತಿತ್ವಕ್ಕೆ ಬಂದಿತು.

* ಮೈಸೂರು ಲೋಕಸಭಾ ಕ್ಷೇತ್ರವು ಮೈಸೂರು ತಾಲೂಕಿನ ನಾಲ್ಕು (ಕೃಷ್ಣರಾಜ, ನರಸಿಂಹರಾಜ, ಚಾಮುಂಡೇಶ್ವರಿ ಹಾಗೂ ಚಾಮರಾಜ), ಹೆಗಡೆದೇವನಕೋಟೆ, ಹುಣಸೂರು, ಕೃಷ್ಣರಾಜನಗರ ಹಾಗೂ ಪಿರಿಯಾಪಟ್ಟಣ, ವಿಧಾನಸಭಾ ಕ್ಷೇತ್ರಗಳನ್ನು ಒಳಗೊಂಡಿದೆ.

# ಮೈಸೂರು ತಾಲೂಕಿನ ವಿಧಾನಸಭಾ ಕ್ಷೇತ್ರಗಳ ಚುನಾವಣಾ ಫಲಿತಾಂಶ (೧೯೫೨-೨೦೦೮)

| ಚುನಾವಣಾ ವರ್ಷ ಹಾಗೂ ಕ್ಷೇತ್ರದ ಹೆಸರು | ಆಯ್ಕೆಯಾದ ಅಭ್ಯರ್ಥಿಯ ಹೆಸರು ಪಕ್ಷ, ಗಳಿಸಿದ ಮತ ಹಾಗೂ ಶೇಕಡವಾರು ಪ್ರಮಾಣ | ದ್ವಿತೀಯ ಸ್ಥಾನ ಪಡೆದ ಪಕ್ಷ, ಗಳಿಸಿದ ಮತ ಹಾಗೂ ಶೇಕಡವಾರು ಪ್ರಮಾಣ |
|---|---|---|
| ೧ | ೨ | ೩ |
| ೧೯೫೨ ೧) ಮೈಸೂರು ನಗರ (ಉ) | ಟಿ.ಮರಿಯಪ್ಪ* (ಭಾರಾಕಾಂ) ೧೨,೩೦೭ (೫೧.೨೪) | ಪಕ್ಷೇತರ, ೮,೪೯೯, (೩೫.೨೪) |
| ೨) ಮೈಸೂರು ನಗರ (ದ) | ಬಿ.ನಾರಾಯಣಸ್ವಾಮಿ (ಭಾರಾಕಾಂ) ೬,೩೯೧ (೩೦.೬೦) | ಪಕ್ಷೇತರ, ೩,೬೪೫ (೧೭.೪೫) |
| ೩) ಮೈಸೂರು (ಗ್ರಾ) | ಶಿವನಂಜೇಗೌಡ (ಭಾರಾಕಾಂ) ೪,೮೮೩ (೩೨.೮೭) | ಪಕ್ಷೇತರ, ೨,೭೭೬ (೧೮.೬೯) |
| ೧೯೫೭ ೧) ಮೈಸೂರು ನಗರ (ಉ) | ಎ.ಮಹ್ಮದ್ ಸೇಟ್ (ಪಕ್ಷೇತರ) ೭,೪೦೦ (೩೬.೧೬) | ಭಾ.ರಾ.ಕಾಂ, ೭,೭೧೪ (೩೫.೦೭) |
| ೨) ಮೈಸೂರು ನಗರ (ದ) | ಕೆ.ಸೂರ್ಯನಾರಾಯಣರಾವ್ (ಭಾರಾಕಾಂ) ೭,೩೬೬ (೩೬.೪೩) | ಪಕ್ಷೇತರ, ೫,೬೨೬ (೨೨.೧೦) |
| ೩) ಮೈಸೂರು (ಗ್ರಾ) | ಕೆ.ಪುಟ್ಟಸ್ವಾಮಿ (ಭಾರಾಕಾಂ) ೧೧,೭೫೩ (೫೪.೨೪) | ಪು.ಸ.ಪ. ೫,೭೫೫ (೨೬.೫೫) |
| ೧೯೬೨ ೧) ಮೈಸೂರು ನಗರ (ಉ) | ಬಿ.ಕೆ.ಪುಟ್ಟಯ್ಯ (ಪ್ರ.ಸ.ಪ) ೮,೫೪೬ (೩೬.೫೯) | ಭಾ.ರಾ.ಕಾಂ, ೫,೦೧೮ (೨೧.೪೯) |
| ೨) ಮೈಸೂರು ನಗರ (ದ) | ಕೆ.ಎಸ್.ಸೂರ್ಯನಾರಾಯಣರಾವ್ (ಭಾರಾಕಾಂ) ೭,೫೭೧ (೩೧.೫೨) | ಸ.ಪ. ೪,೦೦೭ (೫೬.೬೮) |
| ೩) ಮೈಸೂರು (ಗ್ರಾ) | ಕೆ.ಪುಟ್ಟಸ್ವಾಮಿ* (ಭಾರಾಕಾಂ) ೧೭,೯೪೬ (೫೬.೧೩) | ಪ್ರ.ಸ.ಪ. ೭,೧೯೧ (೨೨,೪೯) |
| ೧೯೬೭ ೧) ಕೃಷ್ಣರಾಜ | ಎಸ್.ಚನ್ನಯ್ಯ (ಭಾರಾಕಾಂ) ೬೯೪೦ (೨೫.೫೬) | ಪ್ರ.ಸ.ಪ. ೧೦,೧೨೩ (೩೪.೫) |
| ೨) ನರಸಿಂಹರಾಜ | ಅಜೀಜ್ ಸೇಟ್ (ಸ.ಸೋ.ಪ) ೧೩,೧೬೬ (೪೪.೮೯) | ಪ್ರ.ಸ.ಪ. ೧೦,೧೨೩ (೩೪.೫೧) |
| ೩) ಚಾಮುಂಡೇಶ್ವರಿ | ಕೆ.ಪುಟ್ಟಸ್ವಾಮಿ* (ಭಾರಾಕಾಂ) ೧೫,೭೨೧ (೫೮.೧೨) | ಪ್ರ.ಸ.ಪ. ೯,೫೪೦ (೩೫.೨೭) |

| ೧ | | ೨ | ೩ |
|---|---|---|---|
| ೧೯೭೨ | ೧) ಕೃಷ್ಣರಾಜ | ಡಿ.ಸೂರ್‍ಯನಾರಾಯಣ (ಭಾರಾಕಾಂ) ೧೪,೧೫೦ (೪೪.೦೪) | ಭಾ.ಜ.ಸಂ. ೫,೯೪ (೧೮.೬೬) |
| | ೨) ನರಸಿಂಹರಾಜ | ಅಜೀಜ್ ಸೇಟ್* (ಭಾರಾಕಾಂ) ೧೭,೭೮೪ (೬೪.೧೯) | ಜೆ.ಪಿ.ಪಿ., ೫,೪೫೪ (೧೯.೬೮) |
| | ೩) ಚಾಮುಂಡೇಶ್ವರಿ | ಕೆ.ಪುಟ್ಟಸ್ವಾಮಿ (ಭಾರಾಕಾಂ) ೨೦,೯೮೧ (೫೫.೭೪) | ಪಕ್ಷೇತರ, ೧೦,೮೪೯ (೨೮.೮೨) |
| ೧೯೭೪ | ಕೃಷ್ಣರಾಜ ಉಪಚುನಾವಣೆ | ಎಂ.ವೆಂಕಟಲಿಂಗಯ್ಯ ರಾ.ಕಾಂ(ಒ) ೧೧,೮೨೧ (೩೧.೦೪) | ಭಾ.ಜ.ಸಂ. ೮,೧೧೪ (೨೧.೩೨) |
| ೧೯೭೮ | ೧) ಕೃಷ್ಣರಾಜ | ಎಚ್. ಗಂಗಾಧರನ್ (ಜ.ಪ.) ೨೫,೦೯೧ (೬೦.೨೯) | ಭಾ.ರಾ.ಕಾಂ(ಐ), ೧೫,೧೫೦ (೩೬.೪೧) |
| | ೨) ನರಸಿಂಹರಾಜ | ಅಜೀಜ್ ಸೇಟ್* (ಕಾಂಗ್ರೆ) ೨೮,೭೧೮ (೫೮.೮೧) | ಜ.ಪ. ೧೬,೦೭೦ (೩೨.೯೧) |
| | ೩) ಚಾಮುಂಡೇಶ್ವರಿ | ಡಿ.ಜಯದೇವರಾಜೇ ಅರಸು (ಕಾಂಗ್ರೆ) ೨೦,೫೨೯ (೩೬.೩೬) | ಜ.ಪ., ೧೯,೪೫೦ (೩೪.೪೪) |
| | ೪) ಚಾಮರಾಜ | ಕೆ.ಪುಟ್ಟಸ್ವಾಮಿ (ಜ.ಪ.), ೨೪,೫೨೪ (೫೪.೫೪) | ಕಾಂಗ್ರೆ, ೧೮,೧೦೩ (೪೦.೨೬) |
| ೧೯೮೩ | ೧) ಕೃಷ್ಣರಾಜ | ಎಚ್.ಗಂಗಾಧರನ್ (ಭಾ.ಜ.ಪ.) ೨೧,೧೬೩ (೪೮.೯೩) | ಜ.ಪ., ೯,೧೧೬ (೨೧.೦೭) |
| | ೨) ನರಸಿಂಹರಾಜ | ಅಜೀಜ್‌ಸೇಟ್* (ಜ.ಪ.) ೨೬,೫೭೬ (೫೧.೨೭) | ಭಾ.ರಾ.ಕಾಂ., ೧೭,೫೧೨ (೩೩.೭೪) |
| | ೩) ಚಾಮುಂಡೇಶ್ವರಿ | ಸಿದ್ಧರಾಮಯ್ಯ ** (ಪಕ್ಷೇತರ) ೨೬,೭೧೪ (೪೩.೩೩) | ಭಾ.ರಾ.ಕಾಂ., ೨೩,೧೧೦ (೩೭.೬೩) |
| | ೪) ಚಾಮರಾಜ | ಎಚ್. ಕೆಂಪೇಗೌಡ (ಜ.ಪ.) ೨೩,೯೬೭ (೪೮.೩೫) | ಭಾ.ಜ.ಪ., ೧೧,೯೩೨ (೨೪.೦೭) |
| ೧೯೮೫ | ೧) ಕೃಷ್ಣರಾಜ | ವೇದಾಂತ ಹೆಮ್ಮಿಗೆ (ಜ.ಪ.) ೨೦,೬೫೭ (೪೮.೩೭) | ಕಾಂಗ್ರೆ, ೧೩,೯೬೫ (೩೨.೭೦) |
| | ೨) ನರಸಿಂಹರಾಜ | ಶ್ರೀಮತಿ ಮುಕ್ತರ್ ಉನ್ನಿಸಾ (ಭಾರಾಕಾಂ) ೧೫,೫೫೨ (೨೯.೬೪) | ಕಾಂಗ್ರೆ, ೧೬,೨೬೫ (೩೧.೧೧) |
| | ೩) ಚಾಮುಂಡೇಶ್ವರಿ | ಸಿದ್ಧರಾಮಯ್ಯ** (ಜ.ಪ.) ೩೩,೭೨೫ (೪೩.೪೫) | ಭಾ.ಜ.ಪ., ೧೧,೩೮೮ (೨೧.೭೦) |
| | ೪) ಚಾಮರಾಜ | ಕೆ.ಕೆಂಪಿರೇಗೌಡ (ಜ.ಪ.) ೩೨,೦೭೭ (೬೧.೩೬) | ಕಾಂಗ್ರೆ, ೨೫,೪೫೪ (೩೨.೭೯) |

| ೧ | ೨ | ೩ |
|---|---|---|
| ೧೯೮೯ ೧) **ಕೃಷ್ಣರಾಜ** | ಕೆ.ಎನ್.ಸೋಮಸುಂದರಮ್ (ಭಾರಾಕಾಂ), ೨೮,೭೨೨ (೫೦.೭೪) | ಜ.ಪ., ೧೮,೯೦ (೩೩.೫೫) |
| ೨) **ನರಸಿಂಹರಾಜ** | ಅಜೀಜ್ ಸೇಟ್* (ಭಾರಾಕಾಂ) ೩೯,೮೫೮ (೪೭.೯೫) | ಭಾ.ಜ.ಪ., ೨೪,೬೯೮ (೨೯.೭೧) |
| ೩) **ಚಾಮುಂಡೇಶ್ವರಿ** | ಎಂ.ರಾಜಶೇಖರಮೂರ್ತಿ* (ಭಾರಾಕಾಂ) ೪೨,೮೯೨ (೪೨.೬೪) | ಜ.ದ., ೩೬,೪೯೩ (೩೬.೨೭) |
| ೪) **ಚಾಮರಾಜ** | ಕೆ.ಹರ್ಷಕುಮಾರ್ ಗೌಡ (ಭಾರಾಕಾಂ) ೩೧,೫೧೪ (೪೨,೦೪೩) | ಜ.ದ., ೨೦,೪೦೮ (೨೭.೪೮) |
| ೧೯೯೪ ೧) **ಕೃಷ್ಣರಾಜ** | ಎ.ರಾಮದಾಸ್ (ಭಾ.ಜ.ಪ.) ೨೮,೧೯೦ (೪೭.೫೫) | ಜ.ದ., ೧೮,೮೨೩ (೩೧.೭೬) |
| ೨) **ನರಸಿಂಹರಾಜ** | ಈ.ಮಾರುತಿರಾವ್ ಪವಾರ್ (ಭಾಜಪ) ೩೧,೫೯೨ (೩೨.೦೪) | ಪಕ್ಷೇತರ, ೩೦,೧೪೧ (೩೦.೫೭) |
| ೩) **ಚಾಮುಂಡೇಶ್ವರಿ** | ಸಿದ್ಧರಾಮಯ್ಯ * (ಜ.ದ) ೭೬,೮೨೩ (೫೪.೪೬) | ಕಾಂಗ್ರೆ, ೪೪.೬೬೮ (೩೧.೬೭) |
| ೪) **ಚಾಮರಾಜ** | ಎಚ್.ಎಸ್.ಶಂಕರಲಿಂಗೇಗೌಡ (ಭಾಜಪ) ೩೨,೬೨೦ (೪೦.೨೩) | ಜ.ದ., ೧೯,೯೩೭ (೨೪.೫೯) |
| ೧೯೯೯ ೧) **ಕೃಷ್ಣರಾಜ** | ಎ.ರಾಮದಾಸ್ (ಭಾ.ಜ.ಪ) ೨೯,೮೧೩ (೪೫) | ಜ.ದ.(ಜಾ), ೨೦,೦೬೧ (೩೦) |
| ೨) **ನರಸಿಂಹರಾಜ** | ಅಜೀಜ್ ಸೇಟ್ (ಭಾರಾಕಾಂ) ೫೬,೪೮೫ (೫೦) | ಭಾ.ಜ.ಪ., ೪೨,೫೧೬ (೩೮) |
| ೩) **ಚಾಮುಂಡೇಶ್ವರಿ** | ಎ.ಎಸ್.ಗುರುಸ್ವಾಮಿ (ಭಾರಾಕಾಂ) ೫೭,೧೦೭ (೩೪) | ಜ.ದ.(ಜಾ), ೫೦,೬೦೭ (೩೦) |
| ೪) **ಚಾಮರಾಜ** | ಶಂಕರಲಿಂಗೇಗೌಡ (ಭಾಜಪ) ೪೮,೭೩೩ (೫೫) | ಭಾ.ರಾ.ಕಾಂ., ೨೬,೪೧೨ (೩೦) |
| ೨೦೦೨ **ಉಪಚುನಾವಣೆ (ನರಸಿಂಹರಾಜ)** | ತನ್ವೀರ್ ಸೇಟ್* (ಭಾರಾಕಾಂ) ೪೧೪೫೩ | ಜನತಾ ಪಕ್ಷ ೨೧೭೪೪ |
| ೨೦೦೪ ೧) **ಕೃಷ್ಣರಾಜ** | ಎಂ.ಕೆ.ಸೋಮಶೇಖರ್ ಜ.ದ. (ಜಾ) ೨೫,೪೨೯, (೪೩) | ಭಾ.ಜ.ಪ., ೨೨,೦೪೫ (೩೭.೨೮) |
| ೨) **ನರಸಿಂಹರಾಜ** | ತನ್ವೀರ್ ಸೇಟ್ (ಭಾರಾಕಾಂ) ೫೪,೪೬೨ (೫೪) | ಜ.ದ.(ಜಾ), ೨೯,೮೫೩ (೨೯.೭೧) |

| ೧ | ೨ | ೩ |
|---|---|---|
| ೩) **ಚಾಮುಂಡೇಶ್ವರಿ** * | ಸಿದ್ಧರಾಮಯ್ಯ ಜ.ದ. (ಜೌ), ೯೦,೭೨೭ (೪೩.೪೪) | ಭಾ.ರಾ.ಕಾಂ., ೫೮,೩೮೨ (೨೭.೯೫) |
| ೪) **ಚಾಮರಾಜ** | ಎಚ್.ಎಸ್.ಶಂಕರಲಿಂಗೇಗೌಡ (ಭಾಜಪ) ೩೮,೧೯೩ (೫೦.೭೪) | ಭಾ.ರಾ.ಕಾಂ., ೨೩,೪೧೬ (೩೧.೧೧) |
| **೨೦೦೬ ಉಪಚುನಾವಣೆ (ಚಾಮುಂಡೇಶ್ವರಿ)** | ಸಿದ್ಧರಾಮಯ್ಯ (ಭಾರಾಕಾಂ) ೧,೧೫,೫೧೨ | ಜ.ದ. (ಜಾ) ೧,೧೫,೨೫೫ |
| **೨೦೦೮** ೧) **ಕೃಷ್ಣರಾಜ** | ಎಸ್.ಎ. ರಾಮದಾಸ್ * (ಭಾಜಪ), ೬೩,೩೧೪ (೫೪.೫೬) | ಭಾ.ರಾ.ಕಾಂ., ೪೩,೮೯೨ (೩೭.೮೨) |
| ೨) **ನರಸಿಂಹರಾಜ** | ತನ್ವೀರ್ ಸೇಟ್ (ಭಾರಾಕಾಂ) ೩೭,೭೮೯ (೩೭.೧) | ಜ.ದ.(ಜಾ) ೩೧,೧೦೪ (೩೦.೫) |
| ೩) **ಚಾಮುಂಡೇಶ್ವರಿ** | ಎಂ. ಸತ್ಯನಾರಾಯಣ (ಭಾರಾಕಾಂ), ೫೫,೮೨೮ (೩೭.೧೯) | ಭಾ.ಜ.ಪ., ೪೧,೫೨೯ (೨೭.೬೭) |
| ೪) **ಚಾಮರಾಜ** | ಎಚ್.ಎಸ್.ಶಂಕರಲಿಂಗೇಗೌಡ (ಭಾಜಪ) ೪೪,೨೪೩ (೪೧.೯೪) | ಭಾ.ರಾ.ಕಾಂ., ೩೪,೮೪೪ (೩೩.೦೩) |
| ೫) **ವರುಣ** ❖ | ಸಿದ್ಧರಾಮಯ್ಯ (ಭಾರಾಕಾಂ), ❑ ೭೧,೯೦೮ ((೫೦.೨೩) | ಭಾ.ಜ.ಪ. ೫೩,೦೭೧ (೩೭.೦೭) |

* ಸಂಪುಟ ಸಚಿವರು, ** ರಾಜ್ಯ ಸಚಿವರು.

❖ ಇದರಲ್ಲಿ ನಂಜನಗೂಡು ಹಾಗೂ ತಿ.ನರಸೀಪುರ ತಾಲೂಕಿನ ಭಾಗಗಳೂ ಸೇರಿದ್ದು, ಇದು ಚಾಮರಾಜನಗರ ಲೋಕಸಭಾ ಕ್ಷೇತ್ರಕ್ಕೆ ಸೇರುತ್ತದೆ.

❑ ವಿಧಾನಸಭೆಯ ವಿರೋಧಪಕ್ಷದ ನಾಯಕರು.